ಕೊಡಗು ಸಂಗಾತಿ

ಆಗಸ್ಟ್ 1 ರಿಂದ 31, 2002 ಪಾಕ್ಷಿಕ ಪತ್ರಿಕೆ (ಆಟಿ 16-31, ಸೋಣ 1-15)

1055c, ದೊಡ್ಡಣ್ಣ ಬಿಲ್ಡಿಂಗ್ಸ್, ಹುಣಸೂರು ರಸ್ತೆ, ಹಿನ್‌ಕಲ್ ಅಂಚೆ, ಮೈಸೂರು - ೫೭೦ ೦೧೭

ಸಂಪಾದಕಿ : ಪಟ್ಟಡ ಶೀಲಾಮಣಿ Registered : 10-01-96 TCI Kar. 09592 ಕನ್ನಡ ಮತ್ತು ಅರೆಗನ್ನಡ ಭಾಷೆಲಿ ಪ್ರಕಟಿತ

Reg. No. KA/SK/MYS-88 ಸಂಪುಟ : 6 ಸಂಚಿಕೆ : 9-10 ಪುಟಗಳು : 24 ಬೆಲೆ ರೂ. : 12-00



ಲೇಖನ : ಒಳಪುಟದಲ್ಲಿ.

ಮಂಡ್ಯದ ಮಾಜಿ ಸೈನಿಕ ಎಂ. ಎನ್. ಶಿವಶಂಕರ್‌ನವರಿಗೆ ರಾಷ್ಟ್ರಪತಿಗಳ ಗೃಹರಕ್ಷಕ ಪ್ರಶಸ್ತಿ ಪ್ರಧಾನ.

KODAGU EDUCATIONAL ACADEMY (Regd) BANGALORE.

Admn. Office : Kodagu Gowda Samaja, No. 413, Cauvery Nagar, R.T. Nagar, Bangalore - 32

President	Vice President	Gen. Secretary	Joint Secretary	Treasurer
Dr. Guddera. P. Chinniah	Mrs. Vasanthi	Mottana C. Ravi Kumar	Ketoli Yatishkumar	Kalyendra Machaiah

INVITATION

The Kodagu Educational Academy has resolved to honour the meritorious students of the community (Kodagu & D.K.) including Mysore/ Bangalore and stationed elsewhere, who have secured 75% and above in the SSLC & PUC II Year results announced in April/May 2002 on **15th August 2002** at Cauvery National Public School, (Kodagu Gowda Samaja), 413, Cauvery Nagar, R.T. Nagar Bangalore. Such of those students who have failed to inform the Academy may kindly forward proof of their eligibility to the General Secretary, Kodagu Educational Academy. Members of the Community are requested to communicate, to have the information circulated.

M.C. RAVIKUMAR, General Secretary-KEA, Ph : 98441-72183, 080/3539555

ಕೊಡಗು ಗೌಡ ನಿವೃತ್ತ ನೌಕರರ ಸಂಘ (ರಿ.) ಕೊಡಗು, ಮಡಿಕೇರಿ

C/o ಕೊಡಗು ಗೌಡ ವಿದ್ಯಾ ಸಂಘ ಕಟ್ಟಡ, ಅಪ್ಪಯ್ಯ ಗೌಡ ರಸ್ತೆ, ಮಡಿಕೇರಿ

ಇತ್ತೀಚೆಗೆ ಮಡಿಕೇರಿ ನಗರದಲ್ಲಿ ಈ ಮೇಲಿನ ಸಂಘ ಉದಯಿಸಿದ್ದು, ಈ ಕೆಳಕಂಡವರು ಸಂಘದ ಪದಾಧಿಕಾರಿಗಳಾಗಿ ಆಯ್ಕೆ ಆಗಿದ್ದಾರೆ.

ಅಧ್ಯಕ್ಷರಾಗಿ	-	ಶ್ರೀ ಸೂದನ ನಾಣಯ್ಯನವರು
ಉಪಾಧ್ಯಕ್ಷರಾಗಿ	-	ಕುಯ್ಯಮುಡಿ ಅಪ್ಪಾಜಿಯವರು
ಕಾರ್ಯದರ್ಶಿಯಾಗಿ	-	ಪಾಣತ್ತಲೆ ಬಿದ್ದಪ್ಪನವರು
ಖಜಾಂಚಿಯಾಗಿ	-	ಪೊನ್ನಚನ ಸೋಮಣ್ಣನವರು
ಸಹ ಕಾರ್ಯದರ್ಶಿಯಾಗಿ	-	ಚೀಯಂಡಿ ರಾಧ ಯಾದವನವರು

ಹಾಗೂ ಉಳಿದಂತೆ 10 ಮಂದಿ ಕಾರ್ಯಕಾರಿ ಮಂಡಳಿ ಸದಸ್ಯರನ್ನಾಗಿ ಆರಿಸಲಾಗಿದೆ.

ಹದಿನೆಂಟು ಗೋತ್ರದ ಎಲ್ಲಾ ನಿವೃತ್ತಿದಾರರು ಈ ಸಂಘದ ಸದಸ್ಯರಾಗಿಯೂ ಹಾಗೂ ಮುಂಬರುವ ಸವಲತ್ತುಗಳಿಂದ ಕೊಳ್ಳುವಂತೆ ಆಡಳಿತ ಮಂಡಳಿಯವರು ಈ ಮೂಲಕ ಆಮಂತ್ರಿಸಿ ಕೊಂಡಿರುತ್ತಾರೆ. ಹೆಚ್ಚಿನ ವಿವರಗಳಿಗೆ

ಪಾಣತ್ತಲೆ ಬಿದ್ದಪ್ಪ, ಕಾರ್ಯದರ್ಶಿ, Ph : 08272/224971

ಅಖಿಲ ಭಾರತ ದ್ವಿತೀಯ ಪಿ.ಯು.ಸಿ ಯಲ್ಲಿ ವಿಭಾಗೀಯ ಮಟ್ಟದಲ್ಲಿ ಪ್ರಥಮ ಸ್ಥಾನ



ಕು|| ಶ್ರೇಯಸ್

ಮಡಿಕೇರಿ ಗಾಳಿಬೀಡುವಿನ ಜವಾಹರ್ ನವೋದಯ ವಿದ್ಯಾಲಯದ ವಿದ್ಯಾರ್ಥಿನಿ ಕು||ವಿ.ಎನ್.ಶ್ರೇಯಸ್, ಕೇಂದ್ರ ಸರಕಾರ ಸ್ವಾಮ್ಯದ (AISSE) ಪದವಿ ಪೂರ್ವ ಹಂತದ ಅಂತಿಮ ಪಿ. ಯು. ಸಿ. ಪರೀಕ್ಷೆಯ ವೃತ್ತಿಪರ ವಾಣಿಜ್ಯ ವಿಭಾಗದಲ್ಲಿ ಶೇ. 90 ಅಂಕ ಗಳಿಸುವುದರ ಮೂಲಕ ವಿದ್ಯಾಲಯಕ್ಕೆ ಪ್ರಥಮ ಸ್ಥಾನ ಪಡೆದಿರುವುದರಲ್ಲದೆ ಹೈದರಾಬಾದ್ ವಿಭಾಗೀಯ ನವೋದಯ ವಿದ್ಯಾಲಯಗಳ ಸಮುಚ್ಛಯದಲ್ಲೂ ಪ್ರಥಮ ಸ್ಥಾನಗಳಿಸಿರುತ್ತಾಳೆ.

ಸಿದ್ದಾಪುರದ ಪತ್ರಿಕಾ ಪ್ರತಿನಿಧಿ, ವಿರಾಜಪೇಟೆ ತಾಲ್ಲೂಕು ಪತ್ರಕರ್ತರ ಸಂಘದ ಖಜಾಂಚಿ ಹಾಗೂ ಕೊಡಗು ಜಿಲ್ಲಾ ಪ್ರೆಸ್ ಕ್ಲಬ್‌ನ ಕಾರ್ಯದರ್ಶಿಗಳಾದ ಶ್ರೀಯುತ ವಿ. ಜಿ. ನರೇಂದ್ರ ಮತ್ತು ಮೀನಾ ದಂಪತಿಗಳ ಪುತ್ರಿಯಾಗಿರುವ ಶ್ರೇಯಸ್ ಇದೀಗ ಮಂಗಳೂರಿನ ಸೈಂಟ್ ಆ್ಯಗ್ನೇಸ್ ಕಾಲೇಜಿನ ಪ್ರಥಮ ವರ್ಷದ ಬಿ. ಬಿ. ಎಂ. ವಿದ್ಯಾರ್ಥಿನಿಯಾಗಿರುತ್ತಾಳೆ.

- ಸಂಗಾತಿ

2002, ಅಗಸ್ಟ್ 1 ರಿಂದ 31ರ ತನಕ

ಒಳನೋಟ

ಕನ್ನಡ ವಿಭಾಗ

ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ	ಕೊಡಗು ಸಂಗಾತಿ,1055c, ದೊಡ್ಡಣ್ಣ ಬಿಲ್ಡಿಂಗ್, ಹುಣಸೂರು ರಸ್ತೆ, ಅಂಚೆ ಕಛೇರಿ ಎದುರು, ಹಿನಕಲ್ ಅಂಚೆ, ಮೈಸೂರು - 17.ಫೋನ್:**0821/404290**
ಮಡಿಕೇರಿಯಲ್ಲಿ ಸಂಗಾತಿ ಕಛೇರಿ ಚಿಹ್ನೆ, ಹಸೆಮಣೆ / ಶುಭಾಶಯ ಕಾರ್ಡ್ಸ್ / ಕ್ಯಾಸೆಟ್ಸ್ ಕೀ ಚೈನ್ ಲಭ್ಯ	ಬೈತಡ್ಕ ಜಾನಕಿ ಬೆಳ್ಯಪ್ಪ,, ನಂ. 21-16 ಎಲ್. ಐ. ಸಿ. ಹತ್ತಿರ, ರೇಸ್ ಕೋರ್ಸ್ ರಸ್ತೆ, ಮಡಿಕೇರಿ, ಫೋನ್ : **08272/228047** ಚೆರಿಯಮನೆ ರಮೇಶ್, C/o ಪಾಂಡ್ಯನ್ ಕ್ಯಾಸೆಟ್ ಅಂಗಡಿ, ಖಾಸಗಿ ಬಸ್ ನಿಲ್ದಾಣ, ಮಡಿಕೇರಿ, ಫೋನ್ : 08272/229620
ವಿರಾಜಪೇಟೆ	ಬಾರಿಕೆ ಮನೋಜ್‌ಕುಮಾರ್, ಇಗ್ಗುತ್ತಪ್ಪ ಕೋಲ್ಡ್ ಸ್ಟೋರ್, ಖಾಸಗಿ ಬಸ್ ನಿಲ್ದಾಣ, ವೀರಾಜಪೇಟೆ ಫೋನ್ : 08274/456591
ಕುಶಾಲ ನಗರ	ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೇಜ್, ಮುಖ್ಯ ರಸ್ತೆ, ಕುಶಾಲನಗರ - 571 234 ಫೋನ್ : 08276/673370
ಬೆಂಗಳೂರು ಮಹಾನಗರ	ಕಲ್ಲುಮುಟ್ಲು ಬಸಪ್ಪ, ನಂ. 37, 3ನೇ ಮೇನ್, ನಂಜಪ್ಪ ಬ್ಲಾಕ್, ಕೆಂಪೇಗೌಡ ನಗರ, ಬೆಂಗಳೂರು -19,ಫೋನ್ : 080/6500946

ಚಂದಾ ವಿವರ : ಜೀವಾವಧಿ ಸದಸ್ಯತನ - 2000 ರೂ., ಬಿಡಿ ಪ್ರತಿ - 12ರೂ.
ವಾರ್ಷಿಕ ಚಂದಾ - 150 ರೂ. (ಅಂಚೆ ವೆಚ್ಚ ಸೇರಿ), ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.

ಸಂಪಾದಕೀಯ :

ಹಿಂಸಾಚಾರ ನಾಗರೀಕತೆ ಪ್ರಾರಂಭವಾಗಿ ಕಡಿಮೆ ಪಕ್ಷ ಹತ್ತು ಸಾವಿರ ವರ್ಷಗಳಾದರೂ ಕಳೆದಿದೆ. ನಾಗರೀಕತೆ ಇಲ್ಲದಿದ್ದಾಗ ಮನುಷ್ಯನ ನಡವಳಿಕೆ ಪ್ರಾಣಿಗಳಿಗೆ ಸಮಾನವಾಗಿದ್ದಿರಬಹುದೆಂದು ಪ್ರಪಂಚದ ಹಲವಾರು ಕಡೆಗಳಲ್ಲಿ ಕಾಣಸಿಗುವ ಕಾಡಿನಲ್ಲಿಯೇ ವಾಸವಾಗಿರುವ ಜನರನ್ನು ನೋಡಿದರೆ ತಿಳಿಯುವುದು. ಆದರೆ ಮನುಷ್ಯ ನಾಗರೀಕತೆಯನ್ನು ಪಡೆದ ನಂತರ ಹಲವಾರು ಧರ್ಮಗಳನ್ನು ಕಟ್ಟಿಕೊಂಡು ತಾನೂ ನಾಗರೀಕನೆಂಬ ಸುಳಿನಲ್ಲಿ ಬಾಳುತ್ತಿದ್ದರೂ ಒಂದು ಮತದ ಜನರು ಇನ್ನೊಂದು ಮತದ ಜನರನ್ನು ದ್ವೇಷಿಸಿ ಜಗಳ ಧರೋಡೆ ಕೊಲೆ, ಹಿಂಸೆಗಳನ್ನು ಮಾಡುತ್ತಿರುವುದು ನಾಗರೀಕರೆನಿಸಿ ಕೊಂಡ ಜನರ ಜನಾಂಗವೂ ರಾಷ್ಟ್ರದ ಗತಿಯನ್ನು ಎತ್ತಿ ತೋರಿಸುತ್ತಿದೆ. ನಾವು ಇಂತಹ ಮತದವರು ಎಂದು ಹೇಳಿಕೊಳ್ಳುವುದಕ್ಕೆ ಅಂತಹ ಜನರಿಗೆ ಹಕ್ಕಿಲ್ಲ. ಯಾಕೆಂದರೆ ಹಿಂದೂಗಳ ವೇದ ಮುಸ್ಲಿಂಮರ ಖುರಾನ್ ಕ್ರೈಸ್ತರ ಬೈಬಲ್‌ಗಳು ಎಲ್ಲಿಯೂ ಯಾವ ಕಾಲದಲ್ಲೂ ಹಿಂಸೆಯನ್ನು ಪ್ರದರ್ಶಿಸಿ ದತ್ತ ಧರ್ಮಾನುಯಾಗಿರು ಎಂದು ಹೇಳಿಲ್ಲ. ಪ್ರತಿಯೊಬ್ಬನೂ ತನ್ನ ಪವಿತ್ರ ಗ್ರಂಥಗಳು ಹೇಳಿದಂತೆ ನಡೆದರೆ ಈ ಹಿಂಸೆ ಪ್ರವರ್ತಿಗಳಿಗೆ ಕಡಿವಾಣ ಹಾಕಬಹುದೆಂದು ಸಂಗಾತಿಯ ಅಂಬೋಣ.

ವಿನಾಶದ ಅಂಚಿನಲ್ಲಿರುವ ಪ್ರಕೃತಿಯ ಕೊಡುಗೆ- ಆಟಿ ಸೊಪ್ಪು. ಆಗಸ್ಟ್ 3 ರಂದು ಆಟಿ ಹದಿನೆಂಟು

ಆಟಿ ಸೊಪ್ಪಿನಿಂದ ಆಟಿ 18(ಅಂದರೆ ಆಗಸ್ಟ್ ತಿಂಗಳು 3)ರಂದು ಪಾಯಸ ಮಾಡಿ ಊಟ ಮಾಡುವುದು ಬಹಳ ಹಿಂದಿನಿಂದಲೂ ಬಂದ ಸಂಪ್ರದಾಯವಾಗಿದೆ. ಮಳೆ ಬಿದ್ದ ನಂತರ ಶೀತ ಹವೆಯಲ್ಲಿ ಸಿಗುವ ಮತ್ತು ಉಪಯೋಗಿಸುವ ಕಣಿಲೆ, ಅಣಬೆ, ಮರಕೆಸಗಳ ಸಾಲಿಗೆ ಆಟಿ ಸೊಪ್ಪು ಕೂಡಾ ಒಂದು ವಿಶೇಷತೆಯನ್ನು ಪಡೆದಿರುವ ವಸ್ತುವಾಗಿದೆ.

ಆಟಿ ತಿಂಗಳು 18 ರಂದು ಆ ಸೊಪ್ಪಿನ ಮತ್ತು ಅದರ ದಂಟುಗಳಲ್ಲಿ 18 ಬಗೆಯ ಆಯುರ್ವೇದ ಔಷಧಿಗಳು ತುಂಬಿರುತ್ತವೆ. ಆದರಿಂದಾಗಿ ಆ ದಿನವೇ ಆ ಸೊಪ್ಪನ್ನು ಆಹಾರವಾಗಿ ಬಳಸಬೇಕೆಂದೂ ನಂತರದ ದಿನಗಳಲ್ಲಿ ಆ ಔಷಧಿಯ ಪ್ರಮಾಣ ಕಡಿಮೆಯಾಗುತ್ತದೆಂದೂ ನಮ್ಮ ಹಿರಿಯರು ತಿಳಿಸುತ್ತಾ ಬಂದಿರುವುದರಿಂದ ಆ ದಿನ ತಪ್ಪದೆ ಸೊಪ್ಪನ್ನು ಕಂಡು ಹಿಡಿದು ಮನೆಗೆ ತರುತ್ತಾರೆ.

ನೀಲಿ ಗೋರಂಟಿ ಗಿಡವನ್ನು ಹೋಲುವ, ಮಳೆಬಿದ್ದ ನಂತರ ಸುಮಾರಾಗಿ ನೀರು ಇರುವ ಕಡೆ, ಬೆ[illegible]ಳ ಕೆಳಗೆ ತೋಡುಗಳ ಬದಿಯಲ್ಲಿ ಹುಲುಸಾಗಿ ಬೆಳೆಯುವ ಈ ಗಿಡದ ಅರ್ಧ ಅಡಿಗೊಂದು ನೀಲಿ ಗಂಟುಗಳಿದ್ದು, ಆಟಿ 18 ರಂದು ಪೂರ್ತಿ ನೀಲಿ ನೇರಳೆ ಬಣ್ಣದಿಂದ ತುಂಬಿ ಇದರ ಪೊದೆಯಿರುವ ಜಾಗವನ್ನು ಸೊಪ್ಪಿನ ಪರಿಮಳದಿಂದ ಕಂಡು ಹಿಡಿಯಬಹುದು. ಆರೋಗ್ಯವಂತ ಸೊಪ್ಪಿನ ದಂಟನ್ನು ಆರಿಸಿ ತಂದು, 2-3 ಬಾರಿ ತೊಳೆದು ದೊಡ್ಡ ಪಾತ್ರೆಯಲ್ಲಿ ಸೊಪ್ಪು ಮುಚ್ಚುವ ತನಕ ನೀರು



ಹಾಕಿ 10 ನಿಮಿಷ ಬೇಯಿಸಿದರೆ ನೀಲಿ ಬಣ್ಣದ ನೀರು ಘಮ ಘಮ ಎಂದು ತಯಾರಾಗುತ್ತದೆ. ಅಥವಾ ಐದಾರು ಗಂಟೆ ಅದ್ದಿ ಇಟ್ಟರೂ ಸಹ ಬಣ್ಣದ ನೀರು ಬಿಡುತ್ತದೆ. ನಂತರ ಅಕ್ಕಿ ಪಾಯಸ ಮಾಡುವಂತೆ ಬಣ್ಣದ ನೀರಿಗೆ ಅಕ್ಕಿ ಹಾಕಿ ಅದೇ ನೀರಿನಿಂದ ತೊಳೆದು ಬೇಯಿಸಬೇಕು. ಮಂದವಾಗುತ್ತಿದ್ದಂತೆ ಉಳಿದ ರಸವನ್ನು ಹಾಕುತ್ತಾ ಬೆಂದ ನಂತರ ಬೆಲ್ಲ, ತೆಂಗಿನ ತುರಿ ಸೇರಿಸುವುದು.

ಇದರೊಡನೆ ರಸಬಾಳೆಹಣ್ಣು, ಹಸುವಿನ ತುಪ್ಪ ಹಾಗೂ ಕೊಡಗಿನ ಜೇನು ಸೇರಿಸಿ ಮನೆಯವರೆಲ್ಲರೂ ಕೂಡಿ ಒಟ್ಟಿಗೆ ಕುಳಿತು ರಾತ್ರಿ ಅಥವಾ ಮುಂಜಾನೆ ಊಟ ಮಾಡುವುದೇ ಒಂದು ವಿಶೇಷ. ಹೀಗೆ ಆಟಿ ಸೊಪ್ಪು ಬಹಳ ಹಿಂದಿನಿಂದಲೂ ತನ್ನ ಮಹತ್ವವನ್ನು ಕಾಪಾಡಿಕೊಂಡು ಬಂದಿದೆ.

ಆಟಿ ತಿಂಗಳ 18 ರಂದು ಆ ಸೊಪ್ಪಿನಲ್ಲಿ 18 ಬಗೆಯ ಔಷಧಿಗಳು ಒಳಗೊಂಡಿರುತ್ತವೆ ಎಂಬುದು ಜನರ ನಂಬಿಕೆ, ಅಂದು ಈ ಸೊಪ್ಪಿನಿಂದ ತಯಾರಿಸಿದ ಪಾಯಸವನ್ನು ಸೇವಿಸಿದರೆ, ಮಾನವನಿಗೆ ಯಾವುದೇ ಕಾಯಿಲೆಗಳು ಬರುವದಿಲ್ಲ ಎಂಬ ನಂಬಿಕೆಯೂ ನಮ್ಮಲ್ಲಿದೆ. ಈ ಸಂದರ್ಭ ಸ್ಥಳೀಯ ಮಾರುಕಟ್ಟೆಗಳಲ್ಲಿ ಆಟಿ ಸೊಪ್ಪಿಗೆ ಭಾರೀ ಬೇಡಿಕೆ.

ಹಳ್ಳಿ ಪ್ರದೇಶಗಳಲ್ಲಿ ಮಾತ್ರ ಕಂಡು ಬರುವ ಆಟಿ ಸೊಪ್ಪು ಇಂದು ಅವನತಿಯ ಅಂಚಿನಲ್ಲಿದ್ದು, ಜನತೆಯ ಬೇಡಿಕೆಗನುಗುಣವಾಗಿ ದೊರೆಯುತ್ತಿಲ್ಲ. ಇದರಿಂದಾಗಿ

8ನೇ ಪುಟಕ್ಕೆ

ಕೂತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು

ಸದ್ದಿಲ್ಲದೆ ದುಡಿಯುತ್ತಿರುವ ಮಾಜಿ ಸೈನಿಕನಿಗೆ ರಾಷ್ಟ್ರಪತಿಗಳ ಗೃಹ ರಕ್ಷಕ ಪದಕ ಪುರಸ್ಕೃತ ಮಂಡ್ಯದ ಎಂ. ಎನ್. ಶಿವಶಂಕರ್

ಭಾರತೀಯ ಶ್ಲಾಘನೀಯ ಸೇವೆಗಾಗಿ ಗಣರಾಜ್ಯೋತ್ಸವ ಸಂದರ್ಭ (ಈ ವರ್ಷದ ಜನವರಿ ೨೬ ರಂದು) ರಾಷ್ಟ್ರ ಪತಿಗಳ ಗೃಹ ರಕ್ಷಕ ಹಾಗೂ ಪೌರ ರಕ್ಷಣಾ ಸೇವಾ ಪದಕ ಗಳಿಸಿರುವ ಮದ್ದೂರಿನ ಎಂ. ಎಸ್. ಶಿವಶಂಕರ್ ಅವರು ಪ್ರಚಾರಕ್ಕೆ ಬಾರದೇ ಹೋಗಿರುವ ಸಜ್ಜನ ಸೇವಾ ಪ್ರತಿಭೆ.

ಜನವರಿ 26 ರಂದು ಗೃಹ ವ್ಯವಹಾರಗಳ ಸಚಿವಾಲಯದಿಂದ ಅಭಿನಂದನೆ ಭರತಿ ಪ್ರಶಸ್ತಿ ಸೂಚನಾ ಪತ್ರ ಪಡೆದ ಶಿವಶಂಕರ್ ಅವರಿಗೆ ರಾಷ್ಟ್ರಪತಿಗಳಿಂದ ಈ ಗೌರವ ಇನ್ನೂ ಸಲ್ಲಬೇಕಾಗಿದೆ. ಆ ಅಮೂಲ್ಯ ಕ್ಷಣಗಳಿಗೆ ಕಾಯುತ್ತಿರುವ ಶಿವಶಂಕರ್ ಕಾಯಕ ನಿಷ್ಠ ರಾಷ್ಟ್ರ ಸೇವಕರು, ಪ್ರಚಾರ ಜನಪ್ರಿಯತೆಯಿಂದ ದೂರ ಉಳಿದಿರುವ ಶಿವಶಂಕರ್ ಉನ್ನತ ಧ್ಯೇಯ ಆದರ್ಶಗಳನ್ನು ಹೊಂದಿದ, ಕರ್ತವ್ಯದಲ್ಲೇ ತಮ್ಮ ಜೀವನ ತೃಪ್ತಿ ಪಡೆಯುತ್ತಿರುವ ಶ್ರದ್ಧಾವಂತ ಪೌರ ರಕ್ಷಕರಾಗಿದ್ದಾರೆ.

ಮದ್ದೂರಿನವರಾದ ಎಂ. ಎನ್. ಶಿವಶಂಕರ್ ಅವರ ಜನನ ೨೩.೩.೧೯೬೦ ರಲ್ಲಿ. ಮದ್ದೂರಿನ ಶಾಲೆಯೊಂದರಲ್ಲಿ ಪ್ರೌಢಶಿಕ್ಷಣದವರೆಗೆ ಓದು. ಹತ್ತನೇ ತರಗತಿಯಲ್ಲಿ ಕಲಿಯುತ್ತಿದ್ದಾಗ ಎನ್‌ಸಿಸಿಯಲ್ಲಿ ಗಮನಾರ್ಹ ಸಾಧನೆ. ಆ ಮೇರೆಗೆ ಭಾರತೀಯ ಸೈನ್ಯಕ್ಕೆ ಸೇರ್ಪಡೆ. ಭಾರತೀಯ ಸೈನ್ಯ ಸೇರಿ ಕೊಂಡಾಗ ಶಿವಶಂಕರ್ ಅವರಿಗೆ 17ರ ಹರೆಯ (ನ. ೪, ೧೯೭೭) ಆರ್ಮಿ ನಂ. ೧೪೨೯೭೬೧೧, ಕೋರ್ ಆಫ್ ಸಿಗ್ನಲ್ಸ್‌ನಲ್ಲಿ ಸೇರಿ ದೇಶ ರಕ್ಷಣೆಗೆ ಪಾದಾರ್ಪಣೆ. ಈ ಅವಧಿಯಲ್ಲಿ ಸೈನ್ಯದಲ್ಲಿನ ಅತ್ಯುತ್ತಮ ಕ್ರೀಡಾಳುವಾಗಿ ರಾಷ್ಟ್ರೀಯ ಮಟ್ಟದಲ್ಲಿ (ಸರ್ವೀಸಸ್) ಬಾಕ್ಸಿಂಗ್ ಮತ್ತು ವೇಟ್ ಲಿಫ್ಟರ್ ಆಗಿ ಶಿವಶಂಕರ್ ಬೆಳಕಿಗೆ ಬಂದರು.

೧೯೭೮-೭೯ ಆಸ್ಸಾಂನಲ್ಲಿ ವಿಧ್ಯಾರ್ಥಿಗಳ ಚಳುವಳಿ ಮೇರೆ ಮೀರಿದ ಸಂದರ್ಭ ಉದ್ವಿಗ್ನ ಪರಿಸ್ಥಿತಿಯನ್ನು ತಹಬಂದಿಗೆ ತಂದ ಮಂಚೂಣಿ ಪಡೆಯಲ್ಲಿ ಶಿವಶಂಕರ್ ಅವರೂ ಸೇರಿದ್ದರು. ಯಶಸ್ವೀ ಕಾರ್ಯಾಚರಣೆಗಾಗಿ ಆಸ್ಸಾಂ ಮತ್ತು ಬಂಗಾಳದ ಪದಕವನ್ನು ಗಳಿಸಿದರು. ಅದೇ ರೀತಿ ೧೯೮೪ರಲ್ಲಿ ಪಂಜಾಬ್‌ನ ಸ್ವರ್ಣ ಮಂದಿರವನ್ನು ಸುತ್ತುವರೆದು ಭಾರತೀಯ ಸೈನ್ಯದ ಪರವಾಗಿ ಉಗ್ರರ ವಿರುದ್ಧ ಹೋರಾಡಿದ ಕೆಚ್ಚೂ ಇವರಲ್ಲಿ ತುಂಬಿಕೊಂಡಿತು. ಈ ಹೋರಾಟಕ್ಕಾಗಿ ಪಂಜಾಬ್ ಮತ್ತು ಸಿಂಧ್ ಸೈನ್ಯ ಪದಕ ಶಿವಶಂಕರ್ ಕೊರಳನ್ನು ತುಂಬಿಕೊಂಡಿತು. ಹಾಗೆಯೇ ೧೯೮೪ರಲ್ಲಿ ಇಂದಿರಾಗಾಂಧಿಯವರ ಹತ್ಯೆ ನಡೆದ ಸಂದರ್ಭ ದೇಶದಲ್ಲಿ ಉಂಟಾದ ಅಶಾಂತ ಪರಿಸ್ಥಿತಿಯನ್ನು ಹತೋಟಿಗೆ ತಂದ ಪಡೆಯಲ್ಲಿ ಶಿವಶಂಕರ್ ಅವರೂ ಸೇರ್ಪಡೆಗೊಂಡಿದ್ದರು ಎಂಬುದು ಉಲ್ಲೇಖನಾರ್ಹ. ಸೇನೆಯಲ್ಲಿದ್ದು ಸೇವೆ ಸಲ್ಲಿಸಿದ ಅವಧಿಯಲ್ಲಿ ಏಳು ಬಾರಿ ರಕ್ತದಾನವನ್ನು ಮಾಡಿದ ಉದಾರಿ ದಾನಿಯೂ ಕೂಡ.

೧೯೮೬ರ ಹೊತ್ತಿಗೆ ಸೈನ್ಯದಿಂದ ಬಿಡುಗಡೆಗೊಂಡ ಶಿವಶಂಕರ್ ಮಂಡ್ಯದ ಕೆಪಿಟಿಸಿಎಲ್‌ನಲ್ಲಿ ಸೇವೆಗೆ ತೊಡಗಿದರು. ರಾಜ್ಯದ ಬೇರೆ ಬೇರೆ ಭಾಗದಲ್ಲಿ ಸೇವೆ ಸಲ್ಲಿಸಿರುವ ಶಿವಶಂಕರ್ ಅವರೀಗ ಮಂಡ್ಯದ ಕೆಪಿಟಿಸಿಎಲ್ ವಿಭಾಗೀಯ ಕಛೇರಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಎನ್‌ಸಿಸಿ, ಭಾರತೀಯ ಸೇನೆಯಲ್ಲಿನ ಸೇವೆ - ಅನುಭವದ ಮುಂದಿನ ವಿಸ್ತರಣೆ ಗೃಹ ರಕ್ಷಕ ದಳದಲ್ಲಾಯಿತು. ೧೯೯೦ ರಲ್ಲಿ ಮದ್ದೂರಿನ ಗೃಹ ರಕ್ಷಕ ದಳದ ಘಟಕಾಧಿಕಾರಿ ಹಾಗೂ ಪ್ಲಾಟೂನ್ ಕಮ್ಯಾಂಡರ್ ಆಗಿ ಸೇರಿಕೊಂಡ ಶಿವಶಂಕರ್, ಈಗ ಬಡ್ತಿ ಹೊಂದಿ ಸ್ಟಾಫ್ ಆಫೀಸರ್ (ತರಭೇತಿ) ಆಗಿ ಸೇವೆ ಸಲ್ಲಿಸತೊಡಗಿದ್ದಾರೆ.

ಮದ್ದೂರು ಘಟಕಾಧಿಕಾರಿಯಾಗಿದ್ದಾಗ ವಿಧಾನ ಸಭೆ ಚುನಾವಣೆಯ ಕಾಲಕ್ಕೆ ರಾತ್ರಿ 3 ಘಂಟೆ ಸಮಯದಲ್ಲಿ ಯಾರೋ ದುಷ್ಕರ್ಮಿಗಳು ಬೆಂಕಿ ಹಚ್ಚಿದ ಘಟನೆ ನಡೆಯಿತು. ಆಗ ಗಸ್ತಿನಲ್ಲಿದ್ದ ಶಿವಶಂಕರ್ ಬೆಂಕಿಯನ್ನು ನಂದಿಸಿ ಪೊಲೀಸ್ ಇಲಾಖೆಗೆ ಕೂಡಲೇ ತಿಳಿಸಿ ಹೆಚ್ಚಿನ ಅನಾಹುತವನ್ನು ತಪ್ಪಿಸಿದರು. ಈ ಜಾಗೃತ ಕರ್ತವ್ಯವನ್ನು ಅಂದಿನ ಆರಕ್ಷಕ ನಿರೀಕ್ಷಕ ಸಾಳುಂಕೆ ಅವರು ಶಿವಶಂಕರ್ ಅವರನ್ನು ಶ್ಲಾಘಿಸಿ ಸರ್ಕಾರಕ್ಕೆ ಪತ್ರ ಬರೆದರು.

ಮಂಡ್ಯ ಲೋಕಸಭಾ ಚುನಾವಣೆಯ ಸಂದರ್ಭ ಕೆರಗೋಡು ಬಳಿಯ ಕಲ್ಮಂಟಿ ದೊಡ್ಡಿಯಲ್ಲಿ ಮತದಾನದ ಕೇಂದ್ರಕ್ಕೆ ನುಗ್ಗಿ ಮತ ಪೆಟ್ಟಿಗೆ ಕದ್ದೊಯ್ಯಲು ಯತ್ನಿಸಿದ ಕಿಡಿಗೇಡಿಗಳಿಗೆ ಪಾಠ ಕಲಿಸಿ, ಸಂಭವನೀಯ ಅನಾಹುತವನ್ನು ತಪ್ಪಿಸಿದ ಹೆಮ್ಮೆಯೂ ಶಿವಶಂಕರ್ ಅವರಿಗಿದೆ. ಇದೇ ಬಗೆಯ ರಕ್ಷಣಾ ಸೇವಾ ಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತಾ ಬಂದಿರುವ ಶಿವಶಂಕರ್ ಗೃಹ ರಕ್ಷಕರು ಹಾಗೂ ಮಾಜಿ ಸೈನಿಕರ ಕಷ್ಟಗಳಿಗೂ ಸ್ಪಂದಿಸುತ್ತಾ ಅವರಿಗೆ ಕೈಲಾದ ನೆರವು ನೀಡುತ್ತಾ ಬಂದಿದ್ದಾರೆ.

೧೯೮೯ ರಲ್ಲಿ ಮಂಡ್ಯ ಜಿಲ್ಲಾ ಮಟ್ಟದಲ್ಲಿ ಮಾಜಿ ಸೈನಿಕರ ಸಮನ್ವಯ ಸಮಿತಿಯನ್ನು ಸ್ಥಾಪನೆ ಮಾಡಿಕೊಂಡು, ಸಂಸ್ಥಾಪಕ ಕಾರ್ಯದರ್ಶಿಯಾಗಿ, ಸಂಘಟನಾ ಕಾರ್ಯದರ್ಶಿಯಾಗಿ ಹಲವು ರೀತಿಯ ಯೋಜನೆಯನ್ನು ಕೈಗೊಂಡಿದ್ದಾರೆ. ಮುಖ್ಯವಾಗಿ ಮಂಡ್ಯ ಮೈಸೂರು ಹೆದ್ದಾರಿಯಲ್ಲಿ ಬರುವ ತೂಂಬಿನ ಕೆರೆ

ಗ್ರಾಮದಲ್ಲಿ ಮಾಜಿ ಸೈನಿಕರಿಗೆ ಮತ್ತು ಸೈನಿಕರಿಗೆ ಸರ್ಕಾರದ ಯಾವುದೇ ಸಹಾಯವಿಲ್ಲದೆ ೧೦೫ ಸದಸ್ಯರಿಗೆ ಅತ್ಯಂತ ಕಡಿಮೆ ಬೆಲೆಗೆ ನಿವೇಶನ ನೀಡಿ ನೂತನವಾಗಿ 'ಸೈನಿಕ ನಗರ' ಎಂಬ ಬಡಾವಣೆಯನ್ನು ರೂಪಿಸಿರುವುದು ಶಿವಶಂಕರ್ ಅವರ ಸಹಕಾರ ಮನೋಭಾವಕ್ಕೆ ಸಾಕ್ಷಿ. ಮಾಜಿ ಸೈನಿಕರ ಗೃಹ ನಿರ್ಮಾಣ ಸಂಘ ಸ್ಥಾಪನೆಗೂ ಶಿವಶಂಕರ್ ಮುಂದಾಗಿದ್ದಾರೆ. ಜಿಲ್ಲೆಯ ಗೃಹ ರಕ್ಷಕರಿಗೆ ವಸತಿ ಸೌಕರ್ಯ ಯೋಜನೆಯ ಕನಸನ್ನು ಕಂಡಿದ್ದಾರೆ.

ಸಾಹಿತ್ಯ ಪ್ರಿಯ

ಇದೇ ಅಲ್ಲ ಇವರು ಕವಿಯೂ ಕೂಡ! ಕವಿತೆ ರಚನಾ ಹವ್ಯಾಸಕ್ಕೂ ಇಳಿದಿರುವ ಶಿವ ಶಂಕರ್ "ಹತ್ತು ಕವಿಗಳು ಮತ್ತು ನೂರು ಕವನಗಳು" ಎಂಬ ಸಂಪಾದನೆಯನ್ನೂ ಹೊರ ತಂದಿದ್ದಾರೆ. ಹುಬ್ಬಳ್ಳಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನೊಳಗೊಂಡಂತೆ ವಿವಿಧ ಸಮ್ಮೇಳನವನ್ನೊಳಗೊಂಡಂತೆ ವಿವಿಧ ಸಮ್ಮೇಳನಗಳಲ್ಲಿ ಕವಿತೆ ವಾಚನ ಮಾಡಿರುವ ಶಿವಶಂಕರ್ ಮೂಲತ ಕೃಷಿಕರು ಕೂಡ.

ಸೈನ್ಯದಿಂದ ಹೊರ ಬಂದ ತರುವಾಯ ವಿದ್ಯಾಭ್ಯಾಸವನ್ನು ಮುಂದುವರೆಸಿ ಸಂಜೆ ಕಾಲೇಜು ಹಾಗೂ ಮುಕ್ತ ವಿ. ವಿ. ಮೂಲಕ ಬಿ. ಎ., ಎಂ. ಎ., (ಇತಿಹಾಸ) ಎಂ.ಎ., (ಸಮಾಜಶಾಸ್ತ್ರ) ಪತ್ರಿಕೋದ್ಯಮ, ಡಿಪ್ಲೊಮಾ, ಮಾನವ ಸಂಪನ್ಮೂಲ ಶಾಸ್ತ್ರ ಹಾಗೂ ಕಂಪ್ಯೂಟರ್‌ನಲ್ಲಿ ಡಿಪ್ಲೊಮಾ ಪದವಿ ಪಡೆದಿರುವುದು ವಿಶೇಷ ಸಂಗತಿ.

ಸ್ವಾತಂತ್ರ್ಯ ಯೋಧರಿಗೂ ಗೌರವ ಪೂರ್ಣ ಸೇವಾ ಕಾರ್ಯ ಮಾಡಬೇಕೆಂಬ ಹಂಬಲ ಹೊಂದಿರುವ ಶಿವಶಂಕರ್ ಕನ್ನಡ ಸಾಹಿತ್ಯ ಪರಿಷತ್ತು ಒಳಗೊಂಡಂತೆ ವಿವಿಧ ಸಂಘ-ಸಂಸ್ಥೆಗಳಲ್ಲಿ ಕ್ರಿಯಾಶೀಲ ಚಟುವಟಿಕೆ ನಡೆಸುತ್ತಿದ್ದಾರೆ.

ವಿಶ್ವ ಜನಸಂಖ್ಯೆ ದಿನಾಚರಣೆ. ಸಶಕ್ತ ಮಹಿಳೆಯರಿಂದ ಸದೃಢ ಸಮಾಜ ನಿರ್ಮಾಣ - ಪ್ರೊ॥ ಇಂದಿರಾ

ಮಹಿಳೆಯರಿಗೆ ಆಯ್ಕೆ ಸ್ವಾತಂತ್ರ್ಯವಿದ್ದಾಗ ಮಾತ್ರ 'ಮಹಿಳಾ ಸಶಕ್ತೀಕರಣ' ಅನ್ನುವುದು ಅರ್ಥಪೂರ್ಣ. ಮಹಿಳೆಯರು ತಮ್ಮ ಹಕ್ಕು ಬಾಧ್ಯತೆಗಳನ್ನು ಮುಕ್ತವಾಗಿ ನಿರ್ವಹಿಸಲು ಸ್ವಾತಂತ್ರ್ಯ ಇಲ್ಲ ಎನ್ನುವುದು ಕಟು ಸತ್ಯ. ಸಶಕ್ತ ಮಹಿಳೆಯಿಂದ ಸಶಕ್ತ ಸಮಾಜ ದ ಸೃಷ್ಟಿ ಸಾಧ್ಯ ಎಂದು ಪ್ರಾಧ್ಯಾಪಕಿ ಹಾಗೂ ರೋಟರಿ ಪಶ್ಚಿಮ ಸಂಸ್ಥೆಯ ಅಧ್ಯಕ್ಷೆ ಡಾ. ಆರ್. ಇಂದಿರಾರವರು ಮೈಸೂರು ಮತ್ತು ರೋಟರಿ ಪಶ್ಚಿಮ ಸಭಾಂಗಣದಲ್ಲಿ ಇತ್ತೀಚೆಗೆ ಯುವಜನರಿಗಾಗಿ ಹಮ್ಮಿಕೊಂಡಿದ್ದ 'ವಿಶ್ವ ಜನಸಂಖ್ಯಾ ದಿನಾಚರಣೆ' ಉದ್ಘಾಟಿಸಿ ಮೈಸೂರಿನಲ್ಲಿ ಮಾತನಾಡುತ್ತಿದ್ದರು. ಮಹಿಳೆಯರನ್ನೆ ಜನನ ನಿಯಂತ್ರಣದ ಸಾಧನಗಳನ್ನು ಅಳವಡಿಸಿಕೊಳ್ಳಲು ಮುಂದಾಗುವಂತೆ ಮಾಡುತ್ತಿರುವುದು ಸರಿಯಲ್ಲ. ಪುರುಷರೂ ಈ ಬಗ್ಗೆ ಅಧಿಕ ಸಂಖ್ಯೆಯಲ್ಲಿ ಮುಂದಾಗಬೇಕಾಗಿದೆ. ಜನಸಂಖ್ಯಾ ನಿಯಂತ್ರಣವನ್ನು ಕ್ರಿಯಾತ್ಮಕವಾಗಿ ಮಾಡಲು ಸಾಧ್ಯವಾಗುತ್ತಿಲ್ಲದ್ದರ ಬಗ್ಗೆ ಅವರು ವಿಷಾದ ವ್ಯಕ್ತ ಪಡಿಸಿದರು.

ಹೆಣ್ಣು ಮಕ್ಕಳ ಶಿಕ್ಷಣವು ಕನಿಷ್ಠ ಮಟ್ಟದ ಶಿಕ್ಷಣದವರೆಗಾದರೂ ನಡೆಯಬೇಕು ಹಾಗೂ ಮಧ್ಯದಲ್ಲೇ ಅವರನ್ನು ಶಾಲೆ ಬಿಡಿಸುವ ಪ್ರವೃತ್ತಿ ಹೋಗಬೇಕು ಮತ್ತು ಅವರ ಆರೋಗ್ಯದ ಬಗ್ಗೆ ಅರಿವು ಮೂಡಿಸುವಂತಹ ಪ್ರಯತ್ನಗಳ ಬಗ್ಗೆ 'ವಿಶ್ವ ಜನಸಂಖ್ಯಾ ದಿನಾಚರಣೆಯ ಸಂದರ್ಭದಲ್ಲಿ ಚಿಂತನೆ ಮಾಡುವಂತಹದ್ದು' ಎಂದು ಅವರು ನುಡಿದರು. ಅವರು, ಇದೇ ಸಂದರ್ಭದಲ್ಲಿ ಎಫ್‌ಪಿಎಐ ಮೈಸೂರು ಶಾಖೆ ಪ್ರಕಟಿಸಿದ ಶ್ರೀಮತಿ ಶಾಂತಾ ಜಗದೀಶ್ ಅವರ 'ಬೆಳಕಾಗಲಿ ಬದುಕು' ಕವನ ಸಂಕಲನವನ್ನು ಬಿಡುಗಡೆ ಮಾಡಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ರೋಟರಿ ಪಶ್ಚಿಮ ಸಂಸ್ಥೆ ಅಧ್ಯಕ್ಷ ಗ್ರೂಪ್ ಕ್ಯಾಪ್ಟನ್ ಹೆಚ್. ರಾಜಗೋಪಾಲ್ ಮಾತನಾಡಿ, ಜನಸಂಖ್ಯೆ ಇದೇ ವೇಗದಲ್ಲಿ ಬೆಳೆಯುತ್ತಿದ್ದರೆ ೨೦೧೦ ರ ಹೊತ್ತಿಗೆ ಚೀನಾ ದೇಶವನ್ನು ನಮ್ಮ ದೇಶ ಹಿಂದೆ ಹಾಕಲಿದೆ. ಇದಕ್ಕೆ ಪರಿಹಾರವೆಂದರೆ ನಾವು ಜನನ ನಿಯಂತ್ರಣ, ಶಿಕ್ಷಣ ಆರೋಗ್ಯ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಬೇಕೆಂದರು.

ಅಧ್ಯಕ್ಷತೆ ವಹಿಸಿದ್ದ ಎಫ್‌ಪಿಎಐ ಮೈ. ಶಾ. ಅಧ್ಯಕ್ಷ ಜಿ. ಎಸ್. ಭಟ್ ಮಾತನಾಡುತ್ತಾ, ಕಳೆದ ವರ್ಷ ವಿಶ್ವ ಜನಸಂಖ್ಯಾ ದಿನಾಚರಣೆ ಸಂದರ್ಭದಲ್ಲಿ ಇದ್ದಂತಹ ದೇಶದ ೧೦೦ ಕೋಟಿ ಜನಸಂಖ್ಯೆ ಈ ವರ್ಷ ಇದೆ ಸಂದರ್ಭದಲ್ಲಿ ೧೦೨ ಕೋಟಿ ಮೀರಿರುವುದು ಗಂಭೀರವಾದ ಸಂಗತಿ ಎಂದರು. ಆ ನಂತರ, ಉಪನ್ಯಾಸ ಅಧಿವೇಶನ, ರಸ ಪ್ರಶ್ನೆ, ಆಶುಭಾಷಣ ಅಧಿವೇಶನಗಳು ಜರುಗಿದವು. ಖ್ಯಾತ ಅಂಕಣಕಾರ ಹಾಗೂ ಎಫ್‌ಪಿಎಐ ಮೈ. ಶಾ. ಸದಸ್ಯ ಪ್ರೊ. ಎಚ್ಚೆಸ್ಕೆ ಮೈವಿವಿಯ ಶಿಕ್ಷಣ ಅಧ್ಯಯನ ವಿಭಾಗದ ಪ್ರಾಧ್ಯಾಪಕಿ ಡಾ. ಕೆ. ಯಶೋಧರ ಅವರುಗಳು ಕ್ರಮವಾಗಿ 'ಜನಗಣತಿ ಮತ್ತು ಜನಸಂಖ್ಯಾ ಸಮಸ್ಯೆ' ಹಾಗೂ 'ಬಡತನ ಮತ್ತು ಮಹಿಳಾ ಸಶಕ್ತೀಕರಣ' ಕುರಿತು ಉಪಯುಕ್ತ ಉಪನ್ಯಾಸಗಳನ್ನು ನೀಡಿದರು.

-ವರದಿ: **ಸಂಗಾತಿ.**

ನಾಡಿನ ಆಗುಹೋಗುಗಳಿಗಾಗಿ ತಪ್ಪದೆ
ಸಂಗಾತಿಯನ್ನು ಒಲೆಗೊಂದರಂತೆ ಸದಸ್ಯರಾಗಿ
ಕೊಂಡು ಓದುವುದನ್ನು ಮರೆಯದಿರಿ

- ಸಂಗಾತಿ

ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ 4 ನೇ ವಾರ್ಷಿಕ ಮಹಾಸಭೆ.

ಗೌಡ ಜನಾಂಗ, ಸಂಸ್ಕೃತಿ ಸಂಪ್ರದಾಯ, ಆಚಾರ - ವಿಚಾರಗಳನ್ನು ಬೆಳೆಸಿ ಬೆಳಗಿಸುವ ನಿರ್ಧಾರ :-

ಕೊಡಗು ಗೌಡ ಜನಾಂಗದ ಸಂಸ್ಕೃತಿ, ಸಂಪ್ರದಾಯಗಳನ್ನು ಉಳಿಸಿ ಬೆಳೆಸುವ ಉದ್ದೇಶದಿಂದ ಸ್ಥಾಪನೆಗೊಂಡು, ಆ ದಿಶೆಯಲ್ಲಿ ಯಶಸ್ವೀ ಪ್ರಯತ್ನಗಳನ್ನೂ ನಡೆಸುತ್ತಿರುವ ಗೌಡ ಸಾಂಸ್ಕೃತಿಕ ಅಕಾಡೆಮಿಯು ಜುಲೈ 14 ರಂದು ಮಡಿಕೇರಿಯ ಕೊಡಗು ಗೌಡ ವಿದ್ಯಾಸಂಘದಲ್ಲಿ ತನ್ನ ನಾಲ್ಕನೆಯ ವಾರ್ಷಿಕ ಮಹಾಸಭೆಯನ್ನು ನಡೆಸಿತು.

ವಾರ್ಷಿಕ ಮಹಾಸಭೆಯಲ್ಲಿ ಸದಸ್ಯರ ಪ್ರಶ್ನೆಗಳಿಗೆ ಸ್ಪಂದಿಸಿದ ಅಕಾಡೆಮಿ ಅಧ್ಯಕ್ಷರಾದ ತುಂತಜೆ ಗಣೇಶರವರು, ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿಗೆ ಸರ್ಕಾರದಿಂದ ಮಾನ್ಯತೆಯನ್ನು ಬಯಸಿ ನಿಯೋಗವೊಂದನ್ನು ಮುಖ್ಯಮಂತ್ರಿ ಬಳಿಗೆ ಕೊಂಡೊಯ್ಯಲಾಗುವುದು ಎಂದರು. ಅಕಾಡೆಮಿಯು ಕೊಡಗು ಗೌಡ ಜನಾಂಗದ ಏಳಿಗೆಗಾಗಿ ಹಮ್ಮಿಕೊಂಡ ಹಲವಾರು ಕಾರ್ಯಕ್ರಮಗಳನ್ನು ಉದಾಹರಣೆ ಸಹಿತ ವಿವರಿಸಿದ ಅವರು,ಇನ್ನು ಮುಂದೆಯೂ ಸಹ ಜನಾಂಗದ ಬಂಧುಗಳು ಸಹಕರಿಸಿದರೆ ಅಕಾಡೆಮಿಯು ಗೌಡ ಜನಾಂಗ, ಸಂಸ್ಕೃತಿ, ಸಂಪ್ರದಾಯ, ಆಚಾರ-ವಿಚಾರಗಳನ್ನೂ ಬೆಳೆಸಿ ಬೆಳಗಿಸಲು ಖಂಡಿತ ಸಾಧ್ಯವಿದೆ ಎಂದು ಮಾರ್ನುಡಿದರು.

ಇದೇ ಸಂದರ್ಭದಲ್ಲಿ ಸಧ್ಯದಲ್ಲಿಯೇ "ಗೌಡ ಸಮ್ಮೇಳನ"ವನ್ನೂ ನಡೆಸಿ ಜನಾಂಗ ಸಂಘಟನೆ ಮಾಡುವುದು, ಅಕಾಡೆಮಿಗೆ ಇನ್ನೂ ಹೆಚ್ಚಿನ ಸದಸ್ಯರನ್ನು ನೋಂದಾಯಿಸಿ ಕೊಳ್ಳುವುದು, ಸಂಸ್ಕೃತಿಯ ಬಗೆಗಿನ ಅಧ್ಯಯನ, ಸಂಶೋಧನೆಗಳಿಗೆ ಪ್ರೋತ್ಸಾಹ ನೀಡುವುದು, ಗುಡ್ಡೆ ಮನೆ ಅಪ್ಪಯ್ಯಗೌಡರ ಹೆಸರನ್ನು ಸ್ಥಿರಸ್ಥಾಯಿಗೊಳಿಸುವುದು, ಇದೇ ಮೊದಲಾದ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಲಾಯಿತು.

ಕಾರ್ಯಕ್ರಮದ ಮೊದಲಿಗೆ ಕುಮಾರಿ ಅಣ್ಣೇಚ್ಚೀರ ಬಿನಾಕಾ ಪ್ರಾರ್ಥಿಸಿದರು. ಅಧ್ಯಕ್ಷ ತುಂತಜೆ ಗಣೇಶ್ ಸರ್ವರನ್ನೂ ಸ್ವಾಗತಿಸಿದರು. ಕಾರ್ಯದರ್ಶಿ ಕೋಡಿ ಚಂದ್ರಶೇಖರ್ ವರದಿ ಮತ್ತು ಆಯ-ವ್ಯಯ ಮಂಡಿಸಿದರು.

ಹುದೇರಿ ನಾಗೇಶ್ ವಂದಿಸಿದರು. ವೇದಿಕೆಯಲ್ಲಿ ಅಕಾಡೆಮಿಯ ಎಲ್ಲಾ ಪದಾಧಿಕಾರಿಗಳು ಮತ್ತು ನಿರ್ದೇಶಕರು ಉಪಸ್ಥಿತರಿದ್ದರು.

ನಡೆಯದ ಚುನಾವಣೆ, ಅವಿರೋಧ ಆಯ್ಕೆ:- ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿಗೆ ನೂತನ ನಿರ್ದೇಶಕರ ಆಯ್ಕೆಗೆ ಜುಲೈ 14 ರಂದು ಚುನಾವಣೆಗೆ ಸಮಯ ನಿಗದಿ ಪಡಿಸಲಾಗಿತ್ತು. ಆದರೆ ನಾಮಪತ್ರ ಹಿಂಪಡೆಯುವ ದಿನವಾದ ಜುಲೈ 5 ರಂದು ಮದೆನಾಡು ವ್ಯಾಪ್ತಿಯನ್ನು ಹೊರತು ಪಡಿಸಿ ಉಳಿದೆಲ್ಲಾ ಕ್ಷೇತ್ರಗಳಿಂದ ಸ್ಪರ್ಧಿಸಿದ್ದ ಪ್ರತಿಸ್ಪರ್ಧಿಗಳು ನಾಮಪತ್ರ ವಾಪಸ್ಸು ಪಡೆದ ಕಾರಣ ಆ ಎಲ್ಲಾ ಕ್ಷೇತ್ರಗಳಿಂದ ಅವಿರೋಧವಾಗಿ ನಿರ್ದೇಶಕರು ಆಯ್ಕೆಯಾಗಿದ್ದರು. ಆದರೆ ಮದೆನಾಡು ಕ್ಷೇತ್ರದಿಂದ ಹುದೇರಿ ನಾಗೇಶ ಮತ್ತು ಪಟ್ಟಡ ಶಿವಕುಮಾರ್‌ರವರು ಸ್ಪರ್ಧಿಸಿ ಚುನಾವಣೆ ಅನಿವಾರ್ಯವೆನಿಸಿತು. ಆದರೆ ಕೊನೆಯ ಗಳಿಗೆಯಲ್ಲಿ ಚುನಾವಣಾ ಕಣದಿಂದ ಹಿಂದೆ ಸರಿದಿರುವುದಾಗಿ ಘೋಷಿಸಿದ ಶಿವಕುಮಾರರವರೂ ನಾಗೇಶರವರ ಆಯ್ಕೆಯನ್ನು ಸುಗಮಗೊಳಿಸಿದ್ದಲ್ಲದೆ, ಚುನಾವಣೆಯಿಲ್ಲದೆ ನಿರ್ದೇಶಕರ ಆಯ್ಕೆಗೆ ಅನುವು ಮಾಡಿಕೊಟ್ಟರು. ಚುನಾವಣಾಧಿಕಾರಿ ಸೂದನ ನಾಣಯ್ಯನವರು ನೂತನ ನಿರ್ದೇಶಕರಿಗೆ ಪ್ರಮಾಣ ಪತ್ರಗಳನ್ನು ವಿತರಿಸಿದರು.

ಕೋಡಿ ಚಂದ್ರಶೇಖರ್, ಮಂಞಾಂಡ್ರ ರೇಖಾ ಉಲ್ಲಾಸ್ ನಿರ್ಗಮನ :-

ಕಳೆದ ನಾಲ್ಕುವರ್ಷ, ಎಂಟು ತಿಂಗಳಿಂದ ಅಕಾಡೆಮಿಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ ಕೋಡಿ ಚಂದ್ರಶೇಖರ್‌ರವರು ನಿರ್ದೇಶಕ ಸ್ಥಾನಕ್ಕೆ ಸ್ಪರ್ಧಿಸದೆ ಹೊರಗುಳಿಧರು. ಇದೇ ಸಂದರ್ಭದಲ್ಲಿ ಮಾತನಾಡಿದ ಅವರು ಈವರೆಗೂ ಕಾರ್ಯ ನಿರ್ವಹಿಸುವಾಗ ಸಹಕರಿಸಿದ ಬಂಧುಗಳಿಗೆ, ಅಧ್ಯಕ್ಷರಿಗೆ, ನಿರ್ದೇಶಕರುಗಳಿಗೆ ಧನ್ಯವಾದ ಅರ್ಪಿಸಿದರು. ಅದೇ ರೀತಿ ಉಪಾಧ್ಯಕ್ಷೆಯಾಗಿ ಕಾರ್ಯ ನಿರ್ವಹಿಸಿದ್ದ ಮಂಞಾಂಡ್ರ ರೇಖಾ ಉಲ್ಲಾಸ್‌ರವರೂ ಸಹ ನಿರ್ದೇಶಕ ಸ್ಥಾನದಿಂದ ಹೊರಗುಳಿದು ಇನ್ನು ಮುಂದೆ ಸಾಮಾನ್ಯ ಸದಸ್ಯೆಯಾಗಿ ಅಕಾಡೆಮಿಯ ಕಾರ್ಯಕಲಾಪಗಳಲ್ಲಿ ಸಕ್ರೀಯವಾಗಿ ಭಾಗವಹಿಸುವುದಾಗಿ ಭರವಸೆಯಿತ್ತರು.

ಅಕಾಡೆಮಿ ವಾರ್ಷಿಕ ಸಭೆಯಲ್ಲಿ ಹೇಳಿದ್ದು "ಸಂಗಾತಿ" ಆಲಿಸಿದ್ದು.

ಹೊಸೂರು ರಮೇಶ್ ಜೋಯಪ್ಪ:- ಅಕಾಡೆಮಿ ಸ್ಥಾಪನೆಯಾದಾಗ ನಮ್ಮ ಜನಾಂಗದ ಸ್ವಾತಂತ್ರ್ಯ ಸೇನಾನಿ ಗುಡ್ಡೆ ಮನೆ ಅಪ್ಪಯ್ಯಗೌಡರ 'ಸ್ಮರಣೆ' ಕಾರ್ಯಕ್ರಮವನ್ನು ನಡೆಸುವುದಾಗಿ ಘೋಷಿಸಿದ್ದಿರಿ, ಆದರೆ ಆ ವಿಷಯ ಈಗ ನಿಮ್ಮ ಕಾರ್ಯಸೂಚಿಯಲ್ಲಿ ಕಾಣಿಸುತ್ತಿಲ್ಲ.

ಪಟ್ಟಡ ಪ್ರಭಾಕರ :- ಗುಡ್ಡೆ ಮನೆ ಅಪ್ಪಯ್ಯಗೌಡರ ಬಗ್ಗೆ ಪುಸ್ತಕವನ್ನೂ ಹೊರತರಬೇಕು, ಶಾಲಾ ಪಠ್ಯ ಪುಸ್ತಕದಲ್ಲಿಯೂ ಅವರ ವಿಚಾರ ಅಳವಡಿಸಬೇಕು. ಹತ್ತು ಕುಟುಂಬ ಹದಿನೆಂಟು ಗೋತ್ರದ ಸಂಸ್ಕೃತಿ, ಆಚಾರ -ವಿಚಾರಗಳ ಬಗ್ಗೆ ಸಂಶೋಧನೆ ನಡೆಸಬೇಕು. ನಮ್ಮ ಹಿರಿಯರು ಬಳಸುತ್ತಿದ್ದ ವಸ್ತುಗಳ ವಸ್ತು ಸಂಗ್ರಹಾಲಯ, ಅರೆಗನ್ನಡ ಭಾಷೆಯ ಪುಸ್ತಕ ಭಂಡಾರದ ಹಾಗೂ ಸಂಸ್ಕೃತಿ ಬಗ್ಗೆ ಅರಿಯು ಮೂಡಿಸಿ ಆಚರಿಸಲು ಕನಿಷ್ಠ 25 ಜೊತೆ ಸಿದ್ಧ ಉಡುಪುಗಳ ಭಂಡಾರದ ಅಗತ್ಯತೆ ಅನಿವಾರ್ಯದಾಗಿದೆ.

ಕೂಂಕಾಗದ ಅತ್ತೆಗೆ ಎಳಿಕಾಗದ ಸೊಸೆ

ಪರ್ಲಕೋಟಿ ಕಾಂತ :- ಮೊದಲು ಮಡಿಕೇರಿಯ ಜೂನಿಯಾರ್ ಕಾಲೇಜ್ ಬಳಿಯ 'ಅಪ್ಪಯ್ಯ ಗೌಡರ ರಸ್ತೆ' ನಾಮಫಲಕವನ್ನು ಮೇಲಕ್ಕೇರಿಸಬೇಕು. ಅದು ಈಗ ಚಮ್ಮಾರನ ಅಂಗಡಿಯ ಹಿಂದೆ ಸೊರಗಿರುವ ಹಾಗೆ ನಮ್ಮ ಜನಾಂಗದ ಸ್ಥಿತಿಯೂ ಆಗಿದೆ.

ಮೊಟ್ಟನ ಜ್ಯೋತಿ ಶಂಕರ್ :- 'ಕೊಡವ ಅಕಾಡೆಮಿ'ಯಲ್ಲಿ ನಮಗೆ ಅವಕಾಶವಿದೆಯೇ ಎಂಬುದನ್ನು ಪರಿಶೀಲಿಸಬೇಕು. ಕ್ರೀಡಾಕೂಟಗಳನ್ನೂ ನಡೆಸುವಾಗ ನಮ್ಮದೆ ಆದ ಕ್ರೀಡಾ ತಂಡವೊಂದನ್ನು ಕಟ್ಟಲು ಪ್ರಯತ್ನಿಸಬೇಕು. ಮದುವೆ ಕಾರ್ಯಕ್ರಮಗಳಲ್ಲಿ ಏಕ ರೀತಿ ತರಲು ಪ್ರಯತ್ನಿಸಬೇಕು.

ಮಂಞಂಡ್ರ ರೇಖಾ ಉಲ್ಲಾಸ್ :- ಕೊಡಗಿನಲ್ಲಿ ಗೌಡ ಜನಾಂಗದ ಇರುವಿಕೆ ಹೊರನಾಡಿಗೆ ಗೊತ್ತೇ ಇಲ್ಲ. ನಮ್ಮ ಅಸ್ತಿತ್ವಕ್ಕಾಗಿ ನಮ್ಮ ಹೋರಾಟ ಅನಿವಾರ್ಯವಾಗಿದೆ.

ಪಟ್ಟಡ ಶಿವಕುಮಾರ್ :- ಗೌಡ ಸಂಸ್ಕೃತಿ, ಸಂಪ್ರದಾಯಗಳ ಬಗ್ಗೆ ಇರುವ ಜಿಜ್ಞಾಸೆಗಳನ್ನು 'ಗೌಡ ಸಮಾಜ' ಕೊನೆಗಾಣಿಸಬೇಕು. ಗೌಡ ಸಂಸ್ಕೃತಿಯ ಬಗೆಗಿನ ಅಧ್ಯಯನ ಸಂಶೋಧನೆಗಳಿಗೆ 'ವಿದ್ಯಾಸಂಘ' ಆದ್ಯತೆ ನೀಡಬೇಕು. ಅಲ್ಲಿಂದ ಹೊರ ಹೊಮ್ಮಿದ ಸಂಸ್ಕೃತಿಯನ್ನು ಬೆಳೆಸುವ ಕೆಲಸ ಅಕಾಡೆಮಿಯಿಂದಾಗಬೇಕು.

ಕೋಳುಮುಡಿಯನ ಅನಂತಕುಮಾರ್ :- ಪಟ್ಟಡ ಶಿವಕುಮಾರ್‌ರವರ ಮಾತುಗಳನ್ನೆ ಠರಾವು ಮಾಡಿ ಗೌಡ ಸಮಾಜ ಮತ್ತು ವಿದ್ಯಾಸಂಘಕ್ಕೆ ಕಳುಹಿಸಿಕೊಡಬೇಕು. ಗೌಡ ಸಮ್ಮೇಳನವನ್ನು ನಡೆಸಲು ಪ್ರಯತ್ನಿಸಬೇಕು. ವಿದ್ಯಾಸಂಘದಿಂದ ತಾತ್ಕಾಲಿಕ ಕಛೇರಿಗಾಗಿ ಮನವಿ ಸಲ್ಲಿಸಬೇಕು. ಸದಸ್ಯತ್ವವನ್ನೂ ಹೆಚ್ಚು ನೋಂದಾಯಿಸಿಕೊಳ್ಳಬೇಕು.

ಹೊಸೂರು ಸತೀಶ ಜೋಯಪ್ಪ :- ಗೌಡ ಜನಾಂಗ ಹೆಚ್ಚಾಗಿರುವ ಭಾಗಮಂಡಲ, ಮದೆನಾಡು ಸಾಲಿನಲ್ಲಿ ಸದಸ್ಯತ್ವವನ್ನು ಹೆಚ್ಚುಗೊಳಿಸಲು ಏಕೆ ಸಾಧ್ಯವಾಗಿಲ್ಲ? ಸದಸ್ಯತ್ವವನ್ನು ಹೆಚ್ಚುಗೊಳಿಸಲು ಕ್ರಮ ಕೈಗೊಳ್ಳಬೇಕು.

ಪಾರ್ತಲೆ ಸೋಮಣ್ಣ :- ವಿದ್ಯಾಸಂಘದಲ್ಲಿ ಹಿಂದೆ ಸದಸ್ಯತ್ವ ನೋಂದಾವಣೆಗಾಗಿ ನಿರ್ದೇಶಕರಿಗೆ ಜವಾಬ್ದಾರಿಯನ್ನು ನೀಡಿ, ಬಹುಮಾನ ಯೋಜನೆಯನ್ನು ಹಮ್ಮಿಕೊಂಡಿದ್ದರು. ಅದೇ ನಿಯಮವನ್ನು ಇಲ್ಲಿಯೂ ಹಮ್ಮಿಕೊಳ್ಳಬೇಕು. ಮೊಟ್ಟನ ಅಮಲ್‌ತ್ ದೇವಯ್ಯ, ಕಾಳೇರಮ್ಮನ ದೇವಯ್ಯ, ಸೂದನ ಈರಪ್ಪನವರು ಮೊದಲಾದ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು. ಅಕಾಡೆಮಿಯ ಆಡಳಿತ ಮಂಡಳಿ ಸದಸ್ಯರ ಅಭಿಪ್ರಾಯಗಳಿಗೆ ಸಕಾರಾತ್ಮಕ ಪ್ರತಿಕ್ರಿಯೆ ನೀಡುತ್ತಿತ್ತು.

ವರದಿ : ಪಟ್ಟಡ ಶಿವಕುಮಾರ್, ಉಪನ್ಯಾಸಕ.

ಹುತಾತ್ಮ ಯೋಧ ಸುರೇಶ - ಸತ್ಯಕತೆ

ಪುಟ್ಟ ಕಂದ ಬರುತ್ತಾನೆ
ಎನ್ನುತ್ತ ಅಕ್ಕ ಕುಣಿತ್ತಾಳೆ,
ಪುಟ್ಟ ಪುಟ್ಟ ಹೆಜ್ಜೆ ಹಾಕುತ್ತಾನೆ
ಅಲ್ಲಿ ಇಲ್ಲಿ ಬೀಳುತ್ತಾನೆ.

ಕೈಯ ಬೀಸಿ ಕರೆಯುತ್ತಾನೆ
ನಮ್ಮ ನೋಡಿ ನಗುತ್ತಾಳೆ,
ನಿತ್ಯವು ಶಾಲೆಗೆ ಹೋಗುತ್ತಾನೆ
ಎಲ್ಲಾರ ಮೆಚ್ಚುಗೆ ಪಡೆಯುತ್ತಾನೆ

ಪಾಠವ ಚೆನ್ನಾಗಿ ಕಲಿಯುತ್ತಾನೆ
ಶಾಲೆಗೆ ರ್‍ಯಾಂಕ್ ತರುತ್ತಾನೆ
ಎಲ್ಲಾ ಗೆಳೆಯರ ಜೊತೆಯಾಗಿ
ಹರುಷದಿ ಮನೆಗೆ ಬರುತ್ತಾನೆ

ಅಕ್ಕನ ಪ್ರೀತಿಯು ತನಗಾಗಿ
ತಂದೆ ತಾಯಿಯ ಜೊತೆಯಾಗಿ
ಧ್ಯೇಯವು ನನ್ನ ಪ್ರಜೆಗಾಗಿ
ನನ್ನ ಸೇವೆ ದೇಶಕ್ಕಾಗಿ

ದುಡಿಮೆಯು ಧೈರ್ಯದ ಗುರಿಯಾಗಿ
ಪ್ರಜೆಗಳ ರಕ್ಷಣೆಯ ಹಿತಕ್ಕಾಗಿ
ರೆಜಿಮೆಂಟಿಗೆ ಅರ್ಜಿಯ ಹಾಕಿದನು
ಅರ್ಹತೆ ಪತ್ರವ ಪಡೆದನು

ಕೆಲಸವು ಸಿಕ್ಕಿತು ತನಗಿಂದು
ಎನ್ನುತ್ತ ಹರುಷದಿ ಕುಣಿ ಕುಣಿದು
ವೆಂಕಟೇಶನ ನೆನೆದನು ಮನದಲ್ಲಿ
ಹೊರಡಲು ಅಣಿಯಾದ ಶ್ರೀಘ್ರದಲ್ಲಿ

ಗುರು ಹಿರಿಯರ ಆರ್ಶೀವಾದ ಪಡೆದನು
ರೈಲು ಭೋಗಿಯ ಹತ್ತಿದನು
ಹಿಂದೂಸ್ಥಾನ್ ಪಾಕಿಸ್ತಾನ ಕಾಳಗದಲ್ಲಿ
ರಿಜಿಮೆಂಟಿನ ಮುಂದಾಳತ್ವದಲ್ಲಿ

ಸಿಡಿಯಿತು ಗುಂಡಿನ ಚಕಮುಖಿಯೂ,
ಎರಡು ದೇಶಗಳ ಗಡಿಯಲ್ಲಿ
ಹಿರಿಯರ ನೆನೆದನು ಮನದಲ್ಲಿ
ದೇವರ ನೆನೆದನು ಕದನದಲ್ಲಿ

ಹೆಂಡತಿ ಮಕ್ಕಳ ನೆನಪುಗಳು
ಕಣ್ಣಿನ ನೀರು ಧಾರೆಯಲ್ಲಿ,
ಕದನವು ನಡೆಯಿತು ನೆಲದಲ್ಲಿ
ಸಿಡಿಯಿತು ಬಾಂಬಾ ನೆಲದಲ್ಲಿ


ಎದೆಯಲ್ಲಿ ನಾಟಿತು ಗುಂಡಿನ ಸುರಿಮಳೆ
ಚಿಲ್ಲನೆ ಚಿಮ್ಮಿತು ರಕ್ತದ ಹೊಳೆಯೂ
ಜೈಹಿಂದ್ ನಾಮವ ಪಠಿಸುತ್ತಲಿ
ಯೋಧರು ಅವನನ್ನು ಹರಸುತ್ತಲಿ

ಪ್ರಾಣವ ತೆತ್ತನು ನಾಡಿಗಾಗಿ
ಹಿರಿಯರು ನೊಂದರು ಮಗನಿಗಾಗಿ
ಕೀರ್ತಿಯ ತಂದನು ದೇಶಕ್ಕಾಗಿ
ಹೆತ್ತವರ ಪ್ರೀತಿಯ ಮಗನಾಗಿ

-ಆಜಡ್ಕ ರಾಣಿ ಬಾಲಕೃಷ್ಣ.

ಚೋಟುದ್ದ ವಂಗೆ ಮಾರುದ್ದ ಚೇಷ್ಟೆ

ಐಕ್ಯತೆ ಸಂಘಟನೆಯ ಆಟಿ ತಿಂಗಳ ಕಂಬಳ ಮುತ್ತಾರ್ಮುಡಿಯಲ್ಲಿ ಕೆಸರು ಕ್ರೀಡೋತ್ಸವ



ಜುಲೈ 21 ರಂದು ತುಂತುರು ಮಳೆಯ ಸಿಂಚನದ ನಡುವೆ ಮುತ್ತಾರ್ಮುಡಿಯ ದೇರಜೆ ಕುಟುಂಬಸ್ಥರ ಗದ್ದೆಯಲ್ಲಿ ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿಯ ವತಿಯಿಂದ ಏರ್ಪಾಟಾಗಿದ್ದ ಕೆಸರು ಗದ್ದೆ ಕ್ರೀಡೋತ್ಸವ ಗಮನ ಸೆಳೆಯಿತು.

ಮುತ್ತಾರ್ಮುಡಿಯ ದೇರಜೆ ಬಿದ್ದಪ್ಪ, ಬೋಪಣ್ಣ ಹಾಗೂ ಹೇಮಾವತಿ ಅವರುಗಳಿಗೆ ಸೇರಿದ ಗದ್ದೆಯಲ್ಲಿ ಆಯೋಜಿತವಾಗಿದ್ದ ಕ್ರೀಡೋತ್ಸವವನ್ನು ಕೊಂಪುಳಿರ ಪುಟ್ಟಯ್ಯ ಅವರು ದೀಪ ಬೆಳಗುವುದರ ಮೂಲಕ ಉದ್ಘಾಟಿಸಿ ಚಾಲನೆ ನೀಡಿದರು.

ಕೆಸರಿನಿಂದಾವೃತವಾದ ಗದ್ದೆಯಲ್ಲಿ ಅಬಾಲ ವೃದ್ಧಾರಾದಿಯಾಗಿ ಪುರುಷರು, ಮಹಿಳೆಯರು, ಬಾಲಕ ಬಾಲಕಿಯರು, ಯುವಕ ಯುವತಿಯರು ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಿ ನೆರೆದಿದ್ದ ಕ್ರೀಡಾಸಕ್ತರನ್ನು ರಂಜಿಸಿದರು.

ಮಹಿಳೆಯರ ವಿಭಾಗದ ಹಗ್ಗ ಜಗ್ಗಾಟ ಸ್ಪರ್ಧೆಯಂತೂ ಅದ್ಭುತವಾಗಿತ್ತು. ಆಕಾಶದಿಂದ ತುಂತುರು ಮಳೆಯ ಸಿಂಚನವಾಗುತ್ತಿದ್ದರೂ ಅದನ್ನು ಲೆಕ್ಕಿಸದ ಸ್ಪರ್ಧಾಳುಗಳು ಪ್ರಶಸ್ತಿಗಾಗಿ ಪಣತೊಟ್ಟು ಹೋರಾಡುತ್ತಿರುವಂತೆ ಭಾಸವಾಗುತ್ತಿತ್ತು. ಈ ವಿಭಾಗದಲ್ಲಿ ಉತ್ಕೃಷ್ಟ ಪ್ರದರ್ಶನ ನೀಡಿದ ಮುತ್ತಾರ್ಮುಡಿಯ ತಂಡ ಪ್ರಥಮ ಸ್ಥಾನ ಗಳಿಸಿದರೆ, ಐಕೋಳ ತಂಡ ದ್ವಿತೀಯ ಸ್ಥಾನಕ್ಕೆ ತೃಪ್ತಿ ಪಟ್ಟುಕೊಂಡಿತು.

ಪುರುಷರ ವಿಭಾಗದ ಹಗ್ಗ ಜಗ್ಗಾಟ ಸ್ಪರ್ಧೆಯಲ್ಲಿ ಒಟ್ಟು ೮ ತಂಡಗಳು ಭಾಗವಹಿಸಿದ್ದವು. ಈ ಪೈಕಿ ಕಳೆದ ಬಾರಿ ಫೈನಲ್‌ನಲ್ಲಿ ಮುಖಾಮುಖಿಯಾಗಿದ್ದ ಎರಡು ತಂಡಗಳು ಈ ಬಾರಿಯೂ ಎದುರಾಗಿದ್ದವು. ಆದರೆ ಫಲಿತಾಂಶ ಮಾತ್ರ ತಿರುವು ಮುರುವಾಯಿತು.

ಕಳೆದ ಬಾರಿಯ ವಿಜೇತ ಕಾಂತೂರು ತಂಡವನ್ನು ಈ ಬಾರಿ ಪಾರಾಣೆ ಗೌಡ ಸಮಾಜದ ತಂಡ ಪರಾಭವಗೊಳಿಸಿ ಪ್ರಶಸ್ತಿಗೆ ಭಾಜನವಾಯಿತು.

ಐವತ್ತು ವರ್ಷಕ್ಕಿಂತ ಮೇಲ್ಪಟ್ಟವರಿಗೆ ಆಯೋಜಿತವಾಗಿದ್ದ ಕೆಸರು ಗದ್ದೆ ಕ್ರೀಡಾ ಕೂಟದಲ್ಲಿ ಬೈಮನ ವಿಶ್ವನಾಥ ಪ್ರಥಮ, ಕಡ್ಲೇರ ಉತ್ತಪ್ಪ ದ್ವಿತೀಯ. ಕರ್ಣಯ್ಯನ ಚಿಣ್ಣಪ್ಪ ತೃತೀಯ ಬಹುಮಾನ ಪಡೆದರೆ, ಮಹಿಳೆಯರ ವಿಭಾಗದಲ್ಲಿ ತೆಕ್ಕಡೆ ಶೀಲಾ, ಕೋಂಪುಳಿರ ಚಂದ್ರಮ್ಮ, ಬೈತಡ್ಕ ಸುಶೀಲಾ ಅನುಕ್ರಮವಾಗಿ ಮೂರು ಸ್ಥಾನಗಳನ್ನು ಹಂಚಿಕೊಂಡರು.

ಮುಕ್ತ ಪುರುಷರ ಕೆಸರುಗದ್ದೆ ಓಟದಲ್ಲಿ ಅಮೆ ಮನೆ ನವೀನ ಪ್ರಥಮ, ಕರ್ಣಯ್ಯನ ಗಣೇಶ ದ್ವಿತೀಯ, ಅಳಪೆಮನೆ ಶಶಿಕುಮಾರ್ ತೃತೀಯ, ಮಹಿಳೆಯ ವಿಭಾಗದಲ್ಲಿ ಮುಕ್ಕಾಟಿರ ಸರಿತಾ ಪ್ರಥಮ, ಕುಂಬೇರ ಬಿಂದು ದ್ವಿತೀಯ, ಕೊಂಪುಳಿರ ಜಯಶ್ರೀ ತೃತೀಯ ಸ್ಥಾನ ಪಡೆದರು.

ಪ್ರೌಢಶಾಲಾ ವಿಭಾಗದ ಬಾಲಕ ಬಾಲಕಿಯರ ಸ್ಪರ್ಧೆಗಳಲ್ಲಿ ಕಾವೇರಿ ಮನೆ ಭರತ್‌ಕುಮಾರ್, ಮುಕ್ಕಾಟಿಶ್ವೇತಾ ಪ್ರಥಮ, ಕುಕ್ಕೇರ ದಿಲೀಪ್, ದೊಡ್ಡೇರ ರಮ್ಯ ದ್ವಿತೀಯ ಬೊಳ್ತಜ್ಜಿ ಪವನ ಮತ್ತು ಮೂಡೇರ ಶೀರಾ ತೃತೀಯ ಬಹುಮಾನಗಳನ್ನು ಗಳಿಸಿದರು. ಐದರಿಂದ ಏಳನೇ ತರಗತಿವರೆಗಿನ ಬಾಲಕ ಬಾಲಕಿಯರ ಕೆಸರುಗದ್ದೆ ಓಟದಲ್ಲಿ ದಂಬೆಕೋಡಿ ಡೈನಾ, ಕಾವೇರಿಮನೆ ಜೀವನಕುಮಾರ್ ಪ್ರಥಮ, ಪಾರೆಮಜಲು ಮೋನಿಕಾ ಮತ್ತುಜೆ. ಪುನೀತ ದ್ವಿತೀಯ, ಪಾರೆಮಜಲು ಬಿಂದ್ಯಾ, ಬೈತಡ್ಕ ವಿನು ತೃತೀಯ ಸ್ಥಾನ ಹಂಚಿಕೊಂಡರು.

ಒಂದರಿಂದ ನಾಲ್ಕನೇ ತರಗತಿಯ ಬಾಲಕರ ವಿಭಾಗದ ಸ್ಪರ್ಧೆಯಲ್ಲಿ ಊರುಬೈಲು ನವೀನ ಪ್ರಥಮ, ಕುಕ್ಕೇರ ಗಗನ ದ್ವಿತೀಯ ಕಾನಡ್ಕ ಚೇತನ ತೃತೀಯ, ಬಾಲಕಿಯರ ವಿಭಾಗದ ಸ್ಪರ್ಧೆಯಲ್ಲಿ ಕೊಂಬಾರನ ಡೇನಾ ಪ್ರಥಮ, ಕರ್ಣಯ್ಯನ ಮಮತಾ ದ್ವಿತೀಯ ಮತ್ತು ಪಿ. ಪುಷ್ಪಾಂಜಲಿ ತೃತೀಯ ಬಹುಮಾನ ಗಳಿಸಿದರು.

ಸ್ಪರ್ಧಾ ವಿಜೇತರುಗಳಿಗೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ದೇರಜೆ ಮೋಣಪ್ಪ ಗೌಡ್ರು, ಮಾಜಿ ಶಾಸಕ ದಂಬೆಕೋಡಿ ಎಸ್. ಮಾದಪ್ಪ, ತುಂತಜೆ ಗಣೇಶ, ದೇರಜೆ ಉತ್ತಯ್ಯ, ಕೂಡಕಂಡಿ ಅಪ್ಪಾಜಿ, ಹೊಸೂರು ರಮೇಶ ಜೋಯಪ್ಪ ಅವರುಗಳು ಬಹುಮಾನಗಳನ್ನು ವಿತರಿಸಿದರು. ದೇರಜೆ ಯೋಗೇಶ ಪ್ರಾರ್ಥಿಸಿದರೆ, ತುಂತಜೆ ಗಣೇಶ ಸ್ವಾಗತಿಸಿದರು. ಮೊಟ್ಟನ ಅಮುಲ್ ದೇವಯ್ಯ ವಂದಿಸಿದರು.

-ಸಂಗಾತಿ

ಮಕ್ಕಳ ಹೇಳಿ ನಿದ್ದೆ, ನೆಂಟ್ರ ಹೇಳಿ ಊಟ

ಸಂಪಾಜೆಯ ದೇವಿಪ್ರಸಾದ್ : ಸಾಂಸ್ಕೃತಿಕ ಸಾಧಕ

ಈ ದೇಶದ ಶೇ 20 ರಷ್ಟಿರುವ ಶ್ರೀಮಂತರು ದೇಶದ ಒಟ್ಟು ಸಂಪತ್ತಿನಲ್ಲಿ ಶೇ 80 ರಷ್ಟನ್ನು ತಾವೇ ಕೂಡಿ ಹಾಕಿ ಅದನ್ನು ಸಂರಕ್ಷಿಸಿಡುವುದು ಹೇಗೆಂದು ಮಾತ್ರ ಯೋಚಿಸುತ್ತಿರುವುದೇ ಈ ದೇಶದ ಬಡತನ ನಿರುದ್ಯೋಗ ಮತ್ತು ಆರ್ಥಿಕ ಅಸಮಾನತೆಗೆ ಕಾರಣ. ಎಲ್ಲೋ ಅಲ್ಲೊಬ್ಬರು ಇಲ್ಲೊಬ್ಬರು ಕಲೆ, ಸಾಹಿತ್ಯ, ಸಂಗೀತ, ನಾಟಕವೆಂದು ತಮ್ಮ ಸಂಪತ್ತನ್ನು ಸಾಂಸ್ಕೃತಿಕ ಸಮೃದ್ಧಿಗಾಗಿ ಬಳಸುತ್ತಾರೆ. ಸಂಪಾಜೆಯ ಎನ್. ಎಸ್. ದೇವಿ ಪ್ರಸಾದ್ ಅಂತಹ ಅಪೂರ್ವರಲ್ಲೊಬ್ಬರು.

ಅವರಿಗೀಗ 60 ರ ಹರೆಯ "ವಯಸ್ಸನ್ನು ನಿನ್ನ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಾಧನೆಯಿಂದ ನಿರ್ಧರಿಸಬೇಕಾಗುತ್ತದೆ" ಎನ್ನುತ್ತದೊಂದು ಅಸ್ಸಿರಿಯನ್ ನಾಣ್ನುಡಿ. ಹೇಗೆ ನೋಡಿದರೂ ದೇವಿ ಪ್ರಸಾದರದು ಸಾಧನೆಯ ಬದುಕು. ಲಯನ್ ಆಗಿ, ರಾಜಕಾರಣಿಯಾಗಿ ಸಹಕಾರಿ ರಂಗದ ಧುರೀಣನಾಗಿ, ಸಾಹಿತಿ, ನಾಟಕಕಾರ ಮತ್ತು ಚಿತ್ರ ನಿರ್ಮಾಪಕರಾಗಿ ಅವರ ಸಾಧನೆ ಉಲ್ಲೇಖಾರ್ಹವಾದದ್ದೆ ಆದರೆ ಸಮಸ್ತ ಕರ್ನಾಟಕದ ಮಟ್ಟಿಗೆ ಮುಖ್ಯವಾಗುವುದು ಅವರು ಅಮರ ಕ್ರಾಂತಿ ಉತ್ಸವ ಸಮಿತಿಯ ಮತ್ತು ಕೊಡಗು ಪ್ರಜಾವೇದಿಕೆಯ ಅಧ್ಯಕ್ಷರಾಗಿ ಮಾಡಿದ ಸಾಧನೆಗಳು.

1837 ರಲ್ಲಿ ಬ್ರಿಟಿಷರ ವಿರುದ್ಧ ಅಮರ ಸುಳ್ಯ ಸೀಮೆಯ ರೈತರು ಬಂಡೆದ್ದು, ಕೊಡಗು ಮತ್ತು ಕೆನರಾ ಜಿಲ್ಲೆಗಳ ಸ್ವಾತಂತ್ರ್ಯ ಪ್ರೇಮಿಗಳ ನೆರವಿನಿಂದ ಸುಳ್ಯದಿಂದ ಮಂಗಳೂರುವರೆಗೆ ದಂಡೆಯ್ದು ಬ್ರಿಟಿಷರನ್ನು ಓಡಿಸಿ ಎರಡು ವಾರ ಆಡಳಿತ ನಡೆಸಿದ್ದರು. ಬಂಡಾಯವನ್ನು ಕುಟಿಲೋಪಾಯದಿಂದ ಬ್ರಿಟಿಷರು ಹತ್ತಿಕ್ಕಿ ಅದನ್ನು ಕಲ್ಯಾಣಪ್ಪನ ಕಾಟಕಾಯಿ (ದರೋಡೆ) ಎಂದು ಕರೆದು ಅವಮಾನಿಸಿದ್ದರು.

ತಮಗೆ ಲಭ್ಯವಾದ ಮಾಹಿತಿಗಳಿಂದ 1837 ರ ಘಟನೆ ಸ್ವಾತಂತ್ರ್ಯ ಹೋರಾಟ ಎಂಬುದನ್ನು ಜನರಿಗೆ ತಿಳಿಸಲು 1998 ರಲ್ಲಿ ದೇವಿಪ್ರಸಾದ್ ಅಮರ ಕ್ರಾಂತಿ ಉತ್ಸವ ಸಮಿತಿಯನ್ನು ರಚಿಸಿದರು. ಅದರ ನೆರವಿನಿಂದ ಸುಳ್ಯದಿಂದ ಮಂಗಳೂರಿಗೆ ಕಾಲ್ನಡಿಗೆ ಜಾಥಾ ಸಂಘಟಿಸಿದರು. ಅಮರ ಸುಳ್ಯದ ಸ್ವಾತಂತ್ರ್ಯ ಸಮರ ಎಂಬ ಕೃತಿ ಹೊರ ತಂದರು. ಆಗಿನ ಮುಖ್ಯಮಂತ್ರಿ ಜೆ. ಹೆಚ್. ಪಟೇಲರನ್ನು ಭೇಟಿಯಾಗಿ ಹುತಾತ್ಮರಿಗೊಂದು ಸ್ಮಾರಕ ನಿರ್ಮಿಸಬೇಕೆಂದು ಒತ್ತಾಯಿಸಿದರು. ಸರ್ಕಾರದಿಂದ ಇನ್ನೂ ನೆರವು ಸಿಗದಿದ್ದರೂ ಹುತಾತ್ಮರ ನೆನಪು ಚಿರಕಾಲ ಉಳಿಯುವಂತಹ ಬೃಹತ್ ಯೋಜನೆಯೊಂದನ್ನು ಅವರು ರೂಢಿಸುತ್ತಿದ್ದಾರೆ. ಕೊಡಗಿನ ಪ್ರತ್ಯೇಕ ರಾಜ್ಯದ ಕೂಗೆದ್ದಾಗ ಪ್ರಜಾಪ್ರಭುತ್ವವಾದಿಗಳ ನೆರವಿನಿಂದ ಕೊಡಗು ಪ್ರಜಾವೇದಿಕೆ ರಚಿಸಿ ಪ್ರಜಾಸತ್ತಾತ್ಮಕವಾಗಿ ಪ್ರತ್ಯೇಕತಾವಾದಿಗಳ ಸೊಲ್ಲಡಗಿಸಿದ್ದು ದೇವಿ ಪ್ರಸಾದರ ಇನ್ನೊಂದು ಸಾಧನೆ. ಇದಕ್ಕಾಗಿ ಅವರು ಮತ್ತು ಅವರ ಆತ್ಮೀಯ ಮಿತ್ರರು ಅನೇಕ ಅಪಾಯಗಳನ್ನು ಎದುರು ಹಾಕಿಕೊಂಡಿದ್ದರು. ಪ್ರತ್ಯೇಕ ರಾಜ್ಯದ ಚಳುವಳಿಗೆ ಅವರು ವಿಚಲಿತರಾಗಲಿಲ್ಲ. ದೇವಿ ಪ್ರಸಾದರಿಗೆ 60 ತುಂಬಿರುವ ಈ ಸಂದರ್ಭದಲ್ಲಿ ಕರ್ನಾಟಕದ ಅಖಂಡತೆಗಾಗಿ ಹೋರಾಡಿದಕ್ಕಾಗಿ ಅವರನ್ನು ಅಭಿವನಂದಿಸಬೇಕಾಗಿದೆ. ಸಂಪತ್ತನ್ನು ಸುಮ್ಮನೆ ಕೂಡಿ ಹಾಕಿ ಸಮಾಜಕ್ಕೆ ದುಗ್ಗಾಣಿ ಉಪಕಾರ ಮಾಡದ ಮಂದಿಗೆ ಮಾದರಿಯಾಗಬೇಕು ಅವರ ಸಾಧನೆ.

ಲೇಖಕರು : ಡಾ॥ ಪ್ರಭಾಕರ ಶಿಶಿಲ, ಸುಳ್ಯ.

ಕುದುರೆ

ಉಪೇಂದ್ರನ ಕುದುರೆ ಕಳ್ದ್‌ಹೋತ್, ತಕ್ಷಣ ಅಂವ ಬಸವನ ಗುಡಿ ದೊಡ್ಡ ಗಣೇಶನ ದೇವಸ್ಥಾನಕ್ಕೆ ಹೋಗಿ ಉರುಳ್ ಸೇವೆ ಶುರುಮಾಡ್ದೆ. ಅಲ್ಲಿಗೆ ಸೂಪರ್ ಸ್ಟಾರ್ ಜೋಡಿ ಶಿವರಾಜ್‌ಕುಮಾರ್ ಬಂದ್, ಯಾಕೆರ ಉರುಳ್ ಸೇವೆ ಮಾಡ್ತೊಳತ ಕೇಳ್ಕನ 'ಕುದುರೆ ಕಳ್ದೋತ್'ರ'ತ ಹೇಳ್ದೆ. ಕುದುರೆ ಕಳ್ದೋದಕ್ಕೆ ಉರುಳ್‌ಸೇವೆ ಯಾಕೆ ಮಾಡ್ದುತ ಕೇಳ್ಕನ ಉಪ್ಪಿ ಹೇಳ್ದೆ.

'ದೇವರು ದೊಡ್ಡೋನು, God is Great, ಕುದುರೆ ಕಳ್ದೋಕನ ನಾನ್ ಕುದುರೆ ಮೇಲಿತ್ತ್‌ಲೆ, ಇಲ್ದಿದ್ರೆ ನಾನು ಸ ಮಿಸ್ಸಾಗಿ ಬಿಟ್ಟಿರಂವ! ಗಾಡ್ ಈಸ್ ಗ್ರೇಟ್! ಏನ್ ಹೇಳಿಯಾ?

ಚೀಯಪನ ಚರಣ್ (ಮಿಥುನ್), ಬಲಮುರಿ.

---

2 ನೇ ಪುಟದಿಂದ

ಕೆಲವೆಡೆಗಳಲ್ಲಿ ಆಟಿಸೊಪ್ಪು ತನ್ನ ಮಹತ್ವವನ್ನು ಕಳೆದುಕೊಂಡಿದ್ದರೆ ಇನ್ನೂ ಕೆಲವೆಡೆ ವಿಪರೀತ ಬೆಲೆಯಿಂದಾಗಿ ಜನತೆಗೆ ಕೈಗಟುಕದ ವಸ್ತುವಾಗಿದೆ. ಈ ರೀತಿಯ ಪರಿಸ್ಥಿತಿ ನಿರ್ಮಾಣಕ್ಕೆ ಪ್ರಮುಖ ಕಾರಣವೆಂದರೆ ಎಲ್ಲೆಡೆಯಲ್ಲೂ ತಲೆ ಎತ್ತಿ ನಿಂತಿರುವ ಕಾಫಿ ತೋಟಗಳು ಎಂದರೆ ತಪ್ಪೆನಿಸದು. ಇಂದು ಎಲ್ಲೆಂದರಲ್ಲಿ ಕಾಫಿ ತೋಟಗಳನ್ನು ನಿರ್ಮಿಸುತ್ತಿರುವ ಜನತೆ ಪ್ರಕೃತಿ ದತ್ತವಾಗಿ ದೊರೆಯುವ ಇಂತಹ ಹಲವಾರು ಔಷಧ ಸಸ್ಯಗಳನ್ನು ನಾಶಗೊಳಿಸುತ್ತಾ ಬಂದಿರುವದು ವಿಷಾದನೀಯ. ಇದು ಹೀಗೆ ಮುಂದುವರೆದರೆ ಮುಂದೊಮ್ಮೆ ಈ ಆಟಿ ಸೊಪ್ಪನ್ನು ಕೇವಲ ಚಿತ್ರಗಳ ಮೂಲಕ ನೋಡಿ ಸವಿಯಬೇಕಷ್ಟೆ.

ಲೇಖನ: ಬೈತಡ್ಕ ಜಾನಕಿ ಬೆಳ್ಯಪ್ಪ, ಮಡಿಕೇರಿ.

ಹಳ್ಳಿಕಾರ್ ಒಕ್ಕಲಿಗರು

ಹಳ್ಳಿಕಾರ ಒಕ್ಕಲಿಗರು ಕರ್ನಾಟಕದ ತುಮಕೂರು, ಬೆಂಗಳೂರು, ಹಾಸನ, ಮೈಸೂರು ಜಿಲ್ಲೆಗಳಲ್ಲಿ ನೆಲೆಸಿದ್ದಾರೆ. ಇವರು ಶಿರ, ಗುಬ್ಬಿ, ಮಧುಗಿರಿ, ಮತ್ತು ಚಿಕ್ಕ ನಾಯಕನ ಹಳ್ಳಿ ತಾಲ್ಲೂಕುಗಳಲ್ಲಿ ವಾಸಿಸುತ್ತಿದ್ದಾರೆ. ಕೆಲವು ಸ್ಥಳಗಳಲ್ಲಿ ಇವರನ್ನು ನೆರವೆಗಾರರು ಎಂದು ಕರೆಯುತ್ತಾರೆ. ನೆರವೆಗಾರರೆಂದರೆ ಹೈನುಗಳ ಮುಖ್ಯಸ್ಥ ಎಂದರ್ಥ.

ಇವರ ಮುಖ್ಯ ವೃತ್ತಿ ಹೈನುಗಾರಿಕೆ,ಇವರ ಹೆಸರಿನ ಮುಂದೆಗೌಡ ಯಾ ನಾಯಕ ಎಂಬ ಪದವನ್ನು ಬಳಸುತ್ತಾರೆ.

ಇವರು ಗಂಗಡಿಕಾರರೊಡನೆಯಾಗಲೀ ಮರಸ್ಸು ಒಕ್ಕಲಿಗರೊಡನಾಗಲೀ ಸಂಬಂಧವಿಲ್ಲ. ಇವರನ್ನು ಕಾಡುಗೊಲ್ಲ, ಗೊಲ್ಲ ಮತ್ತು ಕುರುಬರೆಂದು ಕರೆಯುತ್ತಾರೆ.

ಇವರ ವಿಜಯನಗರ ರಾಜರ ಸೈನ್ಯದಲ್ಲಿ ಕೆಲಸ ಮಾಡುತ್ತಿದ್ದರೆಂದು ಹೇಳುತ್ತಾರೆ.

ಇವರಲ್ಲಿ ಎರಡು ಉಪಜಾತಿಗಳಿವೆ. ಹಳಬರು ಮತ್ತು ಹೊಸಬರು. ಇವರು ಸತ್ತವರನ್ನು ಸುಡುತ್ತಾರೆ. ಇವರಿಗೆ 9 ಗೋತ್ರಗಳಿವೆ. ಜಾತಿಯ ಪದ್ಧತಿಯ ಜಗಳಗಳನ್ನು ತೀರಿಸಲು ಒಬ್ಬ ಯಜಮಾನನನ್ನು ಮತ್ತು ಗೌಡನನ್ನು ನೇಮಿಸುತ್ತಾರೆ.

ಒಬ್ಬ ಯಜಮಾನನ ಅಧಿಕಾರ ವ್ಯಾಪ್ತಿಗೆ ಒಳಪಟ್ಟದಕ್ಕೆ ಕಟ್ಟೆಮನೆ ಎಂದು ಕರೆಯುತ್ತಾರೆ. ಇಂತಹ ಕಟ್ಟೆಮನೆಗಳು ಬೇಲೂರು ನಾಗಮಂಗಲ ಕಡೂರು ತಾಲ್ಲೂಕುಗಳಲ್ಲಿವೆ.

ಮೈಸೂರು, ಬೆಂಗಳೂರು, ಚಿಕ್ಕ ಮಂಗಳೂರು, ತರೀಕೆರೆ ಮತ್ತು ತುಮಕೂರುನಲ್ಲಿ ಇವೆ.

ಇವರು ಸಾಮಾನ್ಯವಾಗಿ ವೈಷ್ಣವರಾಗಿದ್ದಾರೆ. ಇವರು ನರಸಿಂಹ, ಕೃಷ್ಣ, ಲಕ್ಷ್ಮೀ, ಯಲ್ಲಮ್ಮ, ಮಾಸ್ತಮ್ಮ, ಹಂಪಾಪುರದಮ್ಮ, ನಗರದ ಹುಚ್ಚಮ್ಮ, ಮುಂತಾದ ದೇವತೆಗಳನ್ನು ಪೂಜಿಸುತ್ತಾರೆ. ಇವರು ಕನ್ನಡವನ್ನು ಮಾತಾಡುತ್ತಾರೆ.

ಪದ್ಧತಿಗಳ ವ್ಯತ್ಯಾಸ

	ಗೌಡರ ಪದ್ಧತಿ	ಹಳ್ಳಿಕಾರ್ ಒಕ್ಕಲಿಗರ ಪದ್ಧತಿ
ಭಾಷೆ	ತುಳು ಭಾಷೆ, ಅರೆಗನ್ನಡ ಭಾಷೆ	ಕನ್ನಡ
ಗೋತ್ರ	18 ಗೋತ್ರಗಳಿವೆ.	9 ಗೋತ್ರಗಳಿವೆ.
ಉಪಜಾತಿ	ಗೌಡರಿಗೆ ಉಪ ಜಾತಿಗಳಿಲ್ಲ	ಇವರಲ್ಲಿ ಉಪಜಾತಿಗಳು ಇವೆ. 1) ಹಳಬರು 2) ಹೊಸಬರು
ಆರಾಧನೆ	ಇವರು ವೆಂಕಟರಮಣನನ್ನು ಮನೆ ದೇವರಾಗಿ ಪೂಜಿಸುತ್ತಾರೆ. ಇವಲ್ಲದೆ ಚಾಮುಂಡೇಶ್ವರಿ, ಕೆಂಚಿರಾಯ, ಜೋಗಿ ಅಲ್ಲದೆ ಗುಳಿಗ, ಪಂಜುರ್ಲಿ ಪಾಶಾಣ ಮೂರ್ತಿ, ಭೂತ ಇತ್ಯಾದಿಗಳನ್ನು ಆರಾಧಿಸುತ್ತಾರೆ.	ಇವರಲ್ಲಿ ನರಸಿಂಹ, ಲಕ್ಷ್ಮಿ, ಕೃಷ್ಣ, ಹುಚ್ಚಮ್ಮ, ಯಲ್ಲಮ್ಮ ದೇವ ದೇವತೆಗಳನ್ನು ಪೂಜಿಸುತ್ತಾರೆ.
ಶವ ಸಂಸ್ಕಾರ	ಇವರು ಸತ್ತವರನ್ನು ಸುಡುತ್ತಾರೆ.	ಇವರು ಸತ್ತವರನ್ನು ಸುಡುತ್ತಾರೆ.

ವಿ.ಸೂ.: ಹಳ್ಳಿಕಾರ್ / ಕಾಡುಗೊಲ್ಲರ ಬಗ್ಗೆ ಮಾಹಿತಿ ಸಂಗಾತಿ ಸಂಗ್ರಲಾಯದಲ್ಲಿದೆ. ಲೇಖನ : ಪ್ರೊ॥ ಪೂಜಾರಿ ಮೊಣ್ಣಪ್ಪ

ಕರೆ ಒಕ್ಕಲಿಗರು :-

ಇವರು ಶಿವಮೊಗ್ಗ ಜಿಲ್ಲೆಯ ಸಾಗರ ಮತ್ತು ಸೊರಬ ತಾಲ್ಲೂಕುಗಳಲ್ಲಿ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ನೆಲೆಸಿದ್ದಾರೆ. ಇವರು ಕನ್ನಡವನ್ನು ಮಾತಾಡುತ್ತಾರೆ. ಇವರು ತಮ್ಮ ಹೆಸರಿನ ಮುಂದೆ ಗೌಡ ಎಂಬ ಪದವನ್ನು ಸೇರಿಸುತ್ತಾರೆ.

ಉದಾ:- ಶಿವಗೌಡ, ವೆಂಕಟಗೌಡ, ಮುಂತಾಗಿ. ಇವರಿಗೆ 7 ಗೋತ್ರಗಳಿವೆ. ಈ ಗೋತ್ರಗಳನ್ನು ಪ್ರಾಣಿಗಳ ಮತ್ತು ಮರಗಳ ಹೆಸರು ಸೂಚಿಸಿ ಗೋತ್ರಗಳನ್ನು ಕರೆಯುತ್ತಾರೆ.

ಇವರ ಜಾತಿ ಪದ್ಧತಿಯ ಜಗಳಗಳನ್ನು ತೀರಿಸಲು ಮೂರು ಕಟ್ಟೆಮನೆಗಳಿವೆ (1) ಘುಟ್ಟ ಸೀಮೆಯ ಕಟ್ಟೆ ಮನೆ (2)ಸೊರಬ ಸೀಮೆಯ ಕಟ್ಟೆ ಮನೆ(3) ಬುಜ್ಜಿ ಸೀಮೆಯ ಕಟ್ಟೆ ಮನೆ. ಇವರ ಮುಖ್ಯಸ್ಥನಿಗೆ ಗೌಡ ಎಂದು ಕರೆಯುತ್ತಾರೆ. ಪ್ರತಿ ಗ್ರಾಮದಲ್ಲಿ ಒಬ್ಬ ಮುಖ್ಯಸ್ಥನಿದ್ದು ಅವನನ್ನು ಬುದ್ಧಿವಂತನೆಂದು ಕರೆಯುತ್ತಾರೆ.

ಕರೇ ಒಕ್ಕಲಿಗರು ಶಿವ ಮತ್ತು ವಿಷ್ಣುವನ್ನು

ಪ್ರಮುಖವಾಗಿ ಪೂಜಿಸುತ್ತಾರೆ.ಇವರ ಮುಖ್ಯ ದೇವರು ತಿರುಪತಿಯ ವೆಂಕಟರಮಣ ಸ್ವಾಮಿ.

ಕರೇ ಒಕ್ಕಲಿಗರು ಸತ್ತ ಹೆಣವನ್ನು ಹೂಳುವುದೂ ಉಂಟು, ಅಥವಾ ಸುಡುವ ಪದ್ಧತಿಯೂ ಇದೆ.

ಬರಹ- ಪ್ರೊ॥ ಪೂಜಾರಿ ಮೊಣ್ಣಪ್ಪ

ಪದ್ಧತಿಗಳ ವ್ಯತ್ಯಾಸ

	ಗೌಡರ ಪದ್ಧತಿ	ಕರೇ ಒಕ್ಕಲಿಗರ ಪದ್ಧತಿ
ಭಾಷೆ	ಅರೆಗನ್ನಡ ಭಾಷೆ, ತುಳು ಭಾಷೆ	ಕನ್ನಡ, ಕೊಂಕಣಿ
ಗೋತ್ರ	18 ಗೋತ್ರಗಳಿವೆ. ಇವರು ಮನುಷ್ಯನ ಗುಣ ಮತ್ತು ಜಾತಿಯ ಹೆಸರಿನಿಂದ ಹೆಸರಿಸುತ್ತಾರೆ.	7 ಗೋತ್ರಗಳಿವೆ. ಗೋತ್ರಗಳಿಗೆ, ಪ್ರಾಣಿಗಳ ಮತ್ತು ಮರಗಳ ಹೆಸರು ಹೇಳಿ ಗೋತ್ರ ಹೇಳುತ್ತಾರೆ.
ಉಪಜಾತಿ	ಗೌಡರಿಗೆ ಉಪ ಜಾತಿಗಳಿಲ್ಲ	ಇವರು ಉಪಜಾತಿಗಳು ಇಲ್ಲ.
ಆರಾಧನೆ	ಇವರು ವೆಂಕಟರಮಣನನ್ನು ಮನೆ ದೇವರಾಗಿ ಪೂಜಿಸುತ್ತಾರೆ. ಇವಲ್ಲದೆ ಚಾಮುಂಡೇಶ್ವರಿ, ಕೆಂಚಿರಾಯ, ಜೋಗಿ ಅಲ್ಲದೆ ಗುಳಿಗ, ಪಂಜುರ್ಳಿ ಪಾಶಾಣ ಮೂರ್ತಿ, ಭೂತ ಇತ್ಯಾದಿಗಳನ್ನು ಆರಾಧಿಸುತ್ತಾರೆ.	ಇವರು ತಿರುಪತಿ ವೆಂಕಟೇಶ್ವರ ಮತ್ತು ಶಿವನನ್ನು ಪೂಜಿಸುತ್ತಾರೆ.
ಶವ ಸಂಸ್ಕಾರ	ಇವರು ಸತ್ತವರನ್ನು ಸುಡುತ್ತಾರೆ.	ಇವರು ಸತ್ತವರನ್ನು ಸುಡುತ್ತಾರೆ. ಲೇಖನ : ಪ್ರೊ॥ ಪೂಜಾರಿ ಮೊಣ್ಣಪ್ಪ

ನಾವು ವೈಷ್ಣವರಲ್ಲ

ಗೌಡ ಜನಾಂಗದ ಆರಾಧ್ಯ ದೈವ ಯಾರು? ಶಿವನೇ ವಿಷ್ಣುವೇ ಅಥವಾ ದೇವಿಯೇ?ನಾವು ವೈಷ್ಣವರೇ ಶೈವರೇ, ಶಾಕ್ತರೇ ಯಾವ ಪಂಥಕ್ಕೆ ಸೇರಿದವರು? ನನ್ನಲ್ಲಿ ಅನೇಕರು ಈ ಪ್ರಶ್ನೆಗಳನ್ನು ಕೇಳುತ್ತಿರುವ ಕಾರಣ - ಈ ಬಗ್ಗೆ ಚಿಂತಿಸೋಣ.

ಗೌಡರು ದ್ರಾವಿಡರೆಂದು ಒಪ್ಪಿಕೊಂಡರೆ- ಶಿವನ ಆರಾಧಕರೆಂದು ಒಪ್ಪಿಕೊಳ್ಳಬೇಕಾಗುತ್ತದೆ. ದಕ್ಷಿಣಾ ಪಥಕ್ಕೆ ಬಂದ ವಿಷ್ಣುವಿನ ಅವತಾರ- ಶ್ರೀರಾಮಚಂದ್ರನೆ ಶಿವಲಿಂಗ ಸ್ಥಾಪಿಸಿ, ರಾಮೇಶ್ವರದಲ್ಲಿ ಶಿವನನ್ನು ಆರಾಧಿಸಬೇಕಾಯಿತೆಂದು ರಾಮಾಯಣದಲ್ಲಿಯೇ ಇದೆ. ತಿರುಪತಿಯಲ್ಲಿರುವ ಶಿವಲಿಂಗಕ್ಕೆ ಆಭರಣ ತೊಡಿಸಿ ವೆಂಕಟೇಶ್ವರನ ವೆಂಕಟ + ಈಶ ಸ್ವರೂಪ ನೀಡಿರುವುದು ಹೌದಾದರೆ, ದಕ್ಷಿಣ ಭಾರತೀಯರೆಲ್ಲರು ಪುರಾತನ ಕಾಲದಲ್ಲಿ ಶಿವನ ಆರಾಧಕರೆ- ಎಲ್ಲವೂ ಶಿವಾಲಯಗಳೇ ಆಗಿದ್ದಿರಬೇಕು, ವೆಂಕಟ + ಈಶನೊಂದಿಗೆ ವೆಂಕಟೇಶನಾಗಿ - ಈಶ್ವರನೊಂದಿಗೆ ವೆಂಕಟೇಶ್ವರನಾಗಿ- ಶೈವರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತಾ ವೈದಿಕ ಧರ್ಮ ನಿಧಾನವಾಗಿ ದಕ್ಷಿಣ ಭಾರತಕ್ಕೆ ಪಸರಿಸಿದೆ.

ಗಂಗರ ಕಾಲದಲ್ಲಿ ಜೈನ ಧರ್ಮ ದಕ್ಷಿಣಕ್ಕೆ ಬಂತು. ಅವರೆ ಗಂಗಡಿಕಾರ ಒಕ್ಕಲಿಗರು. ಹೊಯ್ಸಳ ರಾಜ ಜೈನಧರ್ಮ ತ್ಯಜಿಸಿ ವೈಷ್ಣವನಾಗುವ ಮೂಲಕ ವಿಷ್ಣು ಆರಾಧನೆಗೆ ಪ್ರೋತ್ಸಾಹ ಸಿಕ್ಕಿತು. ರೈತಾಪಿ ಜನರು - ಕೋರ, ಕೋಟ್ಲೆ, ಸಿಡುಬು ಮೊದಲಾದ ನಾನಾ ವಿಧದ ಕಾಯಿಲೆಗಳಿಗೆ ಹೆದರಿ ಮಾರಿಯಮ್ಮ- ದುರ್ಗೆ - ಚಾಮುಂಡಿ ಮೊದಲಾದ ಶಕ್ತಿ ಆರಾಧನೆಯಲ್ಲಿ ಭೂತಾರಾಧನೆಯಲ್ಲಿಯೇ ಜೀವಿಸುತ್ತಿದ್ದರು.

12 ನೇ ಶತಮಾನದಲ್ಲಿ ಬ್ರಾಹ್ಮಣಿಕೆಯ ಶೋಷಣೆ ವಿರೋಧಿಸಿ ಸ್ವತಹ ಬ್ರಾಹ್ಮಣನೇ ಆಗಿದ್ದ ಬಸವಣ್ಣನ ಪ್ರಭಾವದಿಂದ ಶಿವಾರಾಧನೆಗೆ ಬೆಂಬಲ ಸಿಕ್ಕಿತು. ಮಲೆನಾಡಿನ ರೈತರು ಹಿಂದೂ ಆಚಾರ- ಬ್ರಾಹ್ಮಣ ಮತ, ವಿಧಿಗಳನ್ನು ತೊರೆಯ ತೊಡಗಿದರು. ಅವರನ್ನು ಗೌಡ ಲಿಂಗಾಯಿತರೆಂದು ಗುರುತಿಸಲಾಯಿತು. ಆಗ ಶೃಂಗೇರಿ ಮಠ ಎಚ್ಚೆತ್ತು - ನೀವು "ನಾಮಧಾರಿ ಗೌಡರು" ಗೌಡ ಲಿಂಗಾಯಿತರಿಂದ ಮೇಲ್ಜಾತಿ ಅಂತ ಓಲೈಸಿ ಉಳಿಸಿಕೊಳ್ಳುವ ಪ್ರಯತ್ನ ಮಾಡಿತು.

ಇಷ್ಟಾದರೂ ಶೃಂಗೇರಿ ಮಠವನ್ನು ಯಾವತ್ತೂ ಎಲ್ಲಾ ಗೌಡರು ಒಪ್ಪಿರಲಿಲ್ಲ. ಇದಕ್ಕೆ "ಸಿದ್ದವೇಷ"ವೆಂಬ ಜಾನಪದ ಕುಣಿತ ಆಧಾರ, ಪ್ರತಿ ವರ್ಷ ಸುಗ್ಗಿ ಹುಣ್ಣಿಮೆ ಕಾಲ ಗೌಡರ ಗುಂಪು ರಾತ್ರಿ ಹೊತ್ತು ಮನೆ ಮನೆ ತಿರುಗಾಡಿ ಸಿದ್ದ ವೇಷ ಪ್ರದರ್ಶನ ನೀಡುವ ವಾಡಿಕೆ ಇದೆ. "ಶೃಂಗೇರಿ ಮಠಕ್ಕಾಗಿ" ಎನ್ನುವ ಸೊಲ್ಲನ್ನು ಹಾಡುವಾಗ ಸನ್ಯಾಸಿಯ ಪ್ರವೇಶ. ಬ್ರಾಹ್ಮಣ ಮತ್ತು ದಾಸಯ್ಯ ವೇಷಧಾರಿಗಳನ್ನು

ಅವಮಾನಿಸುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಸನ್ಯಾಸಿ ನಾಥ ಪಂಥದ ಪ್ರತಿನಿಧಿ ಎಂದು ಒಪ್ಪಿಕೊಂಡಿದ್ದಾರೆ.

ಗೌಡರು ಆರಾಧಿಸುವ ಪುರುಷಭೂತ ಕೂಡ ನಾಥ ಪಂಥದ ಜೋಗಿ ಎಂದು ಹೇಳಿಕೊಳ್ಳುತ್ತದೆ. ತ್ರಿಶೂಲ, ಕಿನ್ನರಿ, ಕುಂಡಲ-ಭಂಗಿ ಸೇದುವುದು ಮಾತ್ರವಲ್ಲದೆ- ಕಾಶಿಮಠ, ಕದ್ರಿಮಠ, ಇಟ್ಟೇಲ್ (ವಿಟ್ಲ) ಮೊದಲಾದ ನಾಥ ಪಂಥದ ಮಠಗಳು ಹೇಳುತ್ತದೆ. ಚುಂಚನಗಿರಿ ಇದೇ ಸಾಲಿನಲ್ಲಿ ದಾಖಲಿಸಲ್ಪಟ್ಟಿದೆ.

ಶೃಂಗೇರಿ ಮಠದ ಬಗ್ಗೆ ಗೌಡರಲ್ಲಿ ಒಮ್ಮತ ಇರಲಿಲ್ಲ. ಸುಮಾರು 50 ವರ್ಷಗಳ ಹಿಂದೆ ಕೂಡಾ - ಮಠದಿಂದ ಮುದ್ರಿತ ಅಧಿಕಾರ ಪತ್ರ ಬರುತ್ತಿತ್ತು. ವಸೂಲಿನ ಹಕ್ಕುದಾರನ ಮತ್ತು ಗ್ರಾಮಗಳ ಹೆಸರು ಕೈ ಬರಹದಲ್ಲಿರುತ್ತಿತ್ತು. ಆದರೆ ವಸೂಲಿ ಕೆಲಸಕ್ಕೆಲ್ಲರೂ ತಿರಸ್ಕರಿಸುವ ಮೂಲಕ ಅರ್ಧ ಶತಮಾನಕ್ಕೂ ಹಿಂದೆ ಶೃಂಗೇರಿ ಮಠ ಸಂಬಂಧ ಸಂಪೂರ್ಣ ತ್ಯಜಿಸಲಾಗಿದೆ.

"ಹರಿಸೇವೆ" ಗೌಡರ ಆರಾಧನಾ ಪದ್ಧತಿಯೊಳಗೆ ಸೇರಿದ್ದರೂ, ನಾವು ಶಿವನ ಆರಾಧಕರಾಗಿರುವ ಕಾರಣ "ಹರಿಸೇವೆ ಮಾಡಿಸಿದವರು ನಂತರ "ಕೆಂಚಕಾಯ ಸೇವೆ" ಮಾಡಿಸಲೇ ಬೇಕೆನ್ನುವುದು ರೂಢಿಯಲ್ಲಿದೆ. ಕೆಂಚರಾಯನೆಂದರೆ ಕಾಲಭೈರವ.

ಅನಾಧಿ ಕಾಲದಿಂದ ಗೌಡರು ಶಿವನ ಆರಾಧಕರಾದ ದ್ರಾವಿಡರು, ಇತ್ತೀಚಿನ ಕೆಲವು ಶತಮಾನಗಳಿಂದ ವೈದಿಕರು ಗೌಡ ಜನಾಂಗದ ಮೇಲೆ ವಿಷ್ಣುವಿನ ಆರಾಧನೆಯನ್ನು ಹೇರಲು ಪ್ರಯತ್ನಿಸಿದ್ದಾರೆಯೇ ಎನ್ನುವ ಸಂಶಯ ಹುಟ್ಟುವುದು ಸಹಜ. ದಕ್ಷಿಣ ಭಾರತದಲ್ಲಿ ವರ್ಣಾಶ್ರಮ ಧರ್ಮಕ್ಕೆ ಅವಕಾಶ ಇರಲಿಲ್ಲ. ಇಲ್ಲಿ ರೈತರೇ ಅರಸರು. ಗೌಡಾಳಿತ ಪದ್ಧತಿ ವ್ಯವಸ್ಥಿತವಾಗಿತ್ತು. ವೈದಿಕರ ಪ್ರಕಾರ ಗೌಡರು ಶೂದ್ರರು, ಅದನ್ನು ಒಪ್ಪಿಕೊಂಡು ಅವಮಾನಿಸಿಕೊಳ್ಳುವ ಅವಕಾಶ ನಾವೇ ತಂದುಕೊಳ್ಳಬೇಕೆ?

ಶ್ರೀ ಕ್ಷೇತ್ರ ಆದಿಚುಂಚನಗಿರಿ ಮಠ ರೈತರಿಂದ ಕಟ್ಟಲ್ಪಟ್ಟು, ರೈತರಿಗಾಗಿಯೇ ಇರುವ- ರೈತರ ಮಠ. 1979 ರಿಂದ ಗೌಡ ಸಮಾಜದ ಪ್ರಮುಖ ಕಟ್ಟಡಗಳ ಉದ್ಘಾಟನೆ, ಗೌಡ ಸಮ್ಮೇಳನಗಳಲ್ಲಿ ಶ್ರೀ ಶ್ರೀ ಶ್ರೀ ಬಾಲ ಗಂಗಾಧರನಾಥ ಸ್ವಾಮೀಜಿಯವರ ಆಶೀರ್ವಾದ ಪಡೆದುದು ದಾಖಲಿಸಲ್ಪಟ್ಟಿದೆ. ಅವರು ನಮ್ಮ ಪ್ರಶ್ನಾತೀತ ಗುರುಗಳು.

-ಎನ್. ಎಸ್. ದೇವಿಪ್ರಸಾದ್.

ನಾಡಿನ ಆಗುಹೋಗುಗಳಿಗಾಗಿ ತಪ್ಪದೆ
ಸಂಗಾತಿಯನ್ನು ಒಲೆಗೊಂದರಂತೆ ಸದಸ್ಯರಾಗಿ
ಕೊಂಡು ಓದುವುದನ್ನು ಮರೆಯದಿರಿ
- ಸಂಗಾತಿ

ರಾಮಾ ; ನಿನಗೊಂದು ಪ್ರಶ್ನೆ

ಓ....., ಕೀರ್ತಿವಂತ ರಾಮಾ...,
ದೈವಿಕ, ನೈತಿಕ, ಪುರುಷನೇ...,
ಎಲ್ಲಿ ಕಳೆದ ಆ... ದಿನಗಳು?
ಆನಂದಮಯ ಕ್ಷಣಗಳು.

ನಿನ್ನ ಆ .. ಪ್ರಸನ್ನ ವದನದ ಹಿಂದೆ,
ಮುರಿದ ಹೃದಯದ ಬಡಿತವಿತ್ತೆ?
ನೀನು ಜಗದ್ವಿಖ್ಯಾತವಾದಂತೆ,
ಬಾಳಿನೊಳು ಒಂಟಿತನ ನುಸುಳುತ್ತಿತ್ತೆ?

ಆ.... ಮುಗ್ಧ ನಗುವಿನ ಸೀತಾ,
ಚಂಚಲ....ಮೃಗ ನಯನೆ,
ನಿನ್ನೆಡೆಗೆ ಹರಿಸಿದ್ದ, ಅಕ್ಕರೆ ಅನುರಾಗ,
ನಿನಗೀಗ ಅವೆಲ್ಲವೂ ಕನಸಾಯಿತೆ?

ಲೋಕಕ್ಕಂಜಿ, ಅಡವಿಗಟ್ಟಿದ,
ಆ ಪತಿವ್ರತೆ, ತುಂಬು ಗರ್ಭಿಣಿ,
ಸೀತಾ-ಮಾತೆ, ದೋಷಿ ಹೇಗಾದಳು?
ನೀ.... ಜಗದೊಳು ಮಾದರಿಯೆ?

ಓ.... ದೈವ ಸ್ವರೂಪಿ ರಾಮ,
ನೀ......ಕೊಂಚವೂ ಅರಿಯದಾದೆಯಾ.....?
ಶಾಪ ಗ್ರಸ್ತ ಆ ಎರಡೂ ಆತ್ಮಗಳ.,
ಜಾನಕಿಯ ಪಿತ ದಶಕಂಠಿಯಾ?

ಸ್ಪಷ್ಟೀಕರಣ :-

ರಾವಣನಿಗೆ ಜನಿಸಿದ ಹೆಣ್ಣುಮಗುವಿನ ಜಾತಕ ನೋಡಿ ಜೋಯಿಸರು ಈ ಮಗುವಿನಿಂದಲೇ ತಂದೆಗೆ ಮರಣವಿದೆ ಎಂದಾಗ, ರಾವಣ ಮುಚ್ಚಿದ ಪೆಟ್ಟಿಗೆಯೊಂದರಲ್ಲಿ ಮಗುವನ್ನು ಇಟ್ಟು ಪ್ರವಾಹದಲ್ಲಿ ತೇಲಿ ಬಿಟ್ಟನು. ಈ ಪೆಟ್ಟಿಗೆ ಜನಕ ರಾಜನ ಹೊಲದಲ್ಲಿ ಹುದುಗಿ ಹೋಗಿದ್ದೂ, ನಂತರ ಸಿಕ್ಕಿ ಆಕೆ ಜಾನಕಿಯಾದಳು. ವಿಧಿ ನಿಯಮ ಹೀಗಿರುವಾಗ, ಮಗಳಿಂದಲೇ ತಂದೆಯ ಮರಣ ಶತಸಿದ್ಧವಿದ್ದಾಗ ದೈವ ಸ್ವರೂಪಿಯಾದ ರಾಮನಿಗೆ ತಿಳಿಯದೇ ಹೋಯಿತೆ? ಇದು ಪುರಾಣದಲ್ಲಿನ ಕಥೆ.

ಬರಹ: ಮೂಡಗದ್ದೆ ಕೃಪಾ, ತಿತಿಮತಿ.

ವ್ಯತ್ಯಾಸ

ಬಡವ ಕದ್ದರೆ ಆದಾದೆ ಕಳ್ಳತನ!
ರಾಜಕಾರಣಿ ಕೊಳ್ಳೆ ಹೊಡೆದರೆ
ಆದಾದೆ ಭಾರಿ ದೊಡ್ಡ ಹಗರಣ!!
ಸ್ವದೇಶಿಲಿ ಯೂರಿಯ ಹಗರಣ
ವಿದೇಶಿಲಿ ಲೈಂಗಿಕ ಹಗರಣ
ನಾಡಲಿ ಮರ ಹಗರಣ

-ಆಮ್ಮೆ, ಗಾಂಧಿ ನಗರ.

ಮಹಿಳಾ ಲೋಕ : ಸಿಸೇರಿಯನ್ ಶಸ್ತ್ರ ಚಿಕಿತ್ಸೆ - ಹಾಗೆಂದರೇನು?

ತಾಯಿಯ ಕೆಳಹೊಟ್ಟೆಯ ಭಾಗದಲ್ಲಿ ಶಸ್ತ್ರ ಚಿಕಿತ್ಸೆ ಮಾಡಿ ಶಿಶುವನ್ನು ಗರ್ಭಕೋಶದಿಂದ ಹೊರ ತೆಗೆಯುವ ಕ್ರಿಯೆಯೇ ಸಿಸೇರಿಯನ್ ಶಸ್ತ್ರ ಚಿಕಿತ್ಸೆ.

ಯಾವಾಗ ?

ಕೆಲವೊಂದು ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಶಿಶುವಿಗೆ ಅಥವಾ ತಾಯಿಗೆ ಅಪಾಯವಿದ್ದಾಗ ಈ ಶಸ್ತ್ರ ಚಿಕಿತ್ಸೆ ನಡೆಸಬೇಕಾಗುತ್ತದೆ.

ಸಾಮಾನ್ಯ ಕಾರಣಗಳೆಂದರೆ: ಮಗುವಿನ ತಲೆಯು ತಾಯಿಯ ಕೆಳಗುಳಿಯ (Pelvis) ಮೂಲಕ ಹಾದುಹೋಗಲು ಸಾಧ್ಯವಿಲ್ಲದ ಸ್ಥಿತಿ, ಅಥವಾ ಸಾಧ್ಯವಿದ್ದರೂ ಅದರಿಂದ ಮಗುವಿಗೆ ಇಲ್ಲವೆ ತಾಯಿಗೆ ಅಪಾಯ, ಮೊದಲ ಬಾರಿ ಗರ್ಭಿಣಿಯಾದವರಲ್ಲಿ ಮಗು ಕುಳಿತಿರುವ ಭಂಗಿಯಲ್ಲಿದ್ದರೆ, ಮಗು ಅಡ್ಡಲಾಗಿ ಮಲಗಿದ್ದರೆ, ಮಗುವಿನ ಹೃದಯ ಬಡಿತ ತೀರಾ ಕಡಿಮೆಯಾಗುತ್ತಾ ಬರುವುದು ಅಥವಾ ತೀರಾ ಜಾಸ್ತಿಯಾಗುವುದು, ಮಗುವಿನ ಕೈ ಹೊಕ್ಕುಳ ಬಳ್ಳಿ ಹೊರಗೆ ಬಂದಿರುವುದು, ಮಗು ತಾಯಿಯ ಹೊಟ್ಟೆಯಲ್ಲಿರುವಾಗಲೇ ಮಲವಿಸರ್ಜನೆ ಮಾಡಿ ಕೊಂಡಿದ್ದು, ತಕ್ಷಣ ಹೆರಿಗೆಯಾಗುವ ಲಕ್ಷಣವಿಲ್ಲದಿದ್ದಲ್ಲಿ, ಹೆರಿಗೆಗೆ ಮೊದಲೇ ಅತಿಯಾದ ರಕ್ತಸ್ರಾವ ವಾಗುತ್ತಿದ್ದರೆ (ಮಾಸ Placenta) ಮಗುವಿನ ತಲೆಗಿಂತ ಮುಂದೆ ಬಂದಿರುವುದು ಅಥವಾ ಮಾಸ ಸರಿಯಾದ ಸ್ಥಳದಲ್ಲೇ ಇದ್ದು, ಹೆರಿಗೆಗೆ ಮುಂಚೆ ಬೇರ್ಪಟ್ಟಿದ್ದಲ್ಲಿ) ನೀರ ಚೀಲ ಒಡೆದು ಹಲವಾರು ಗಂಟೆಗಳಾದರೂ ಔಷಧ ನೀಡಿಯೂ ಹೆರಿಗೆಯಾಗುವ ಲಕ್ಷಣಗಳಿಲ್ಲದಿದ್ದಲ್ಲಿ, ತಾಯಿಗೆ ಬಸುರಿನ ನಂಜಿ (ಅತಿಯಾದ ರಕ್ತದೊತ್ತಡ) ವಿದ್ದು ರಕ್ತದೊತ್ತಡದಿಂದ ತಾಯಿಗೆ ಅಪಾಯವಾಗುವಂತಿದ್ದರೆ, ಮುಂಚೆ ಎರಡು ಬಾರಿ ಸಿಸೇರಿಯನ್ ಶಸ್ತ್ರ ಚಿಕಿತ್ಸೆ ಆಗಿದ್ದರೆ, ಗರ್ಭಕೋಶ ಅಥವಾ ಅಂಡಾಶಯದಲ್ಲಿ ದೊಡ್ಡ ಗೆಡ್ಡೆಯಿದ್ದು, ಅವು ಶಿಶು ಕೆಳಗೆ ಬರಲು ತಡೆಯುವಂತಿದ್ದರೆ ಇತ್ಯಾದಿ, ಇನ್ನೂ ಹಲವಾರು ವಿರಳ ಕಾರಣಗಳೂ ಇವೆ.

ಅಂಕಿ ಅಂಕ್ಯಾಂಶ :

ನೂರರಲ್ಲಿ ಸಾಮಾನ್ಯವಾಗಿ ಶೇ. 85 ರಷ್ಟು ಪ್ರಕೃತಿ ಸಹಜ ಹೆರಿಗೆಯಾಗುತ್ತದೆ. ಅಂದರೆ ಉಳಿದ ಶೇ. 15 ರಷ್ಟು ಸ್ತ್ರೀಯರಲ್ಲಿ ಸಿಸೇರಿಯನ್ ಬೇಕಾಗಬಹುದು. ಈ ಅಂಕಿ ಅಂಶ ಆಸ್ಪತ್ರೆ, ವೈದ್ಯರು, ಅಲ್ಲಿರುವ ಸೌಕರ್ಯ, ಅಲ್ಲಿಗೆ ಬರುವ ರೋಗಿಯ ಮಟ್ಟ, ಮನೋಭಾವ, ಅಪೇಕ್ಷೆ ಈ ಅಂಶಗಳನ್ನು ಅನುಸರಿಸಿರುತ್ತದೆ. ವೈದ್ಯರು ಹಣಕ್ಕಾಗಿ ಸಿಸೇರಿಯನ್ ಮಾಡುತ್ತಾರೆ ಎಂಬ ಅಪವಾದ ಇಂದು ಕೇಳಿ ಬರುತ್ತಿದೆ.ಇದು ನಿಜವೇ ಆದರೆ ಅದು ವೈದ್ಯ ವೃತ್ತಿಗೇ ಅಪರಾಧ ಎಸಗಿದಂತೆ ಹಾಗೂ ತೀರಾ ಖಂಡನೀಯ. ವೈದ್ಯರ ಕಳಪೆ ಗುಣಮಟ್ಟವೂ ಅಧಿಕ ಸಿಸೇರಿಯನ್ ಸಂಖ್ಯೆಗೆ ದಾರಿಯಾಗಬಹುದು.

ತಾಯಿ, ಮಗು ಇಬ್ಬರಲ್ಲಿ ಯಾರಿಗಾದರೂ ಸಣ್ಣ ಪ್ರಮಾಣದ ತೊಂದರೆಯಾದರೂ, ವೈದ್ಯರ ವಿರುದ್ಧ ನ್ಯಾಯಾಲಯದ ಮೊರೆ ಹೋಗುವ ಪ್ರವೃತ್ತಿ ಇಂದು ಹೆಚ್ಚುತ್ತಿದೆ. ಹಾಗಾಗಿ ಖಾಸಗಿ ನರ್ಸಿಂಗ್ ಹೋಂಗಳಲ್ಲಿ ವೈದ್ಯರು ತೀರಾ ಸಣ್ಣ ಪ್ರಮಾಣದ ರಿಸ್ಕ್ ತೆಗೆದುಕೊಳ್ಳಲೂ ಇಷ್ಟ ಪಡುವುದಿಲ್ಲ. ಸಿಸೇರಿಯನ್ ಸಂಖ್ಯೆಗಳು ಜಾಸ್ತಿಯಾಗಲು ಇದೂ ಒಂದು ಪ್ರಧಾನ ಕಾರಣವಾಗಿದೆ. ಬೆಂಗಳೂರಿನ ಪ್ರತಿಷ್ಠಿತ ಆಸ್ಪತ್ರೆಗಳಲ್ಲಿ ಸಿಸೇರಿಯನ್ ಶಸ್ತ್ರ ಚಿಕಿತ್ಸೆಯ ಸಂಖ್ಯೆ ಶೇ. 30 ರಿಂದ 40 ರಷ್ಟು ಇದೆ. ನಾನು ಸೇವೆ ಸಲ್ಲಿಸುತ್ತಿರುವ ಆಸ್ಪತ್ರೆಯಲ್ಲಿ ತಿಂಗಳಿಗೆ ಸುಮಾರು 300 ಕ್ಕೂ ಅಧಿಕ ಪ್ರಸವ ನಡೆಯುತ್ತಿದ್ದು, ಇದರಲ್ಲಿ ಕೇವಲ ಶೇ. 8ರಿಂದ 10ರಷ್ಟು ಮಾತ್ರ ಸಿಸೇರಿಯನ್ ಶಸ್ತ್ರ ಚಿಕಿತ್ಸೆ ನಡೆಸಲಾಗುತ್ತಿದೆ ಎಂದು ಹೇಳಲು ಹೆಮ್ಮೆಯಾಗುತ್ತಿದೆ.

ತಾಯಿ ಹಾಗೂ ಮನೆಯವರ ಇಚ್ಛಾನುಸಾರವಾಗಿ ಸಿಸೇರಿಯನ್ ಮಾಡಬಹುದೆ ?

ಇಲ್ಲ, ಸಿಸೇರಿಯನ್ ಶಸ್ತ್ರ ಚಿಕಿತ್ಸೆ ಬೇಕೇ ಅಥವಾ ಬೇಡವೇ?ಎಂಬುದನ್ನು ನಿರ್ಧರಿಸಬೇಕಾದವರು ಸ್ತ್ರೀರೋಗ ತಜ್ಞರು. ಆದರೆ ದುರಾದೃಷ್ಟವಶಾತ್ ಇಂದು ವೈದ್ಯರು, ರೋಗಿ ಹಾಗೂ ಮನೆಯವರ ಒತ್ತಡಕ್ಕೆ ಮಣಿದು ಕೆಲವೊಮ್ಮೆ ಅಗತ್ಯವಿಲ್ಲದಿದ್ದರೂ ಸಿಸೇರಿಯನ್ ಮಾಡಬೇಕಾದ ಪರಿಸ್ಥಿತಿ ಬಂದೊದಗಿದೆ.

ಒಮ್ಮೆ ಸಿಸೇರಿಯನ್ ಆದಲ್ಲಿ ಮುಂದಿನ ಹೆರಿಗೆಯಲ್ಲಿ ಸಿಸೇರಿಯನ್ ಆಗಲೇಬೇಕೆ ?

ಒಮ್ಮೆ ಸಿಸೇರಿಯನ್ ಆದಲ್ಲಿ ಮುಂದಿನ ಬಾರಿ ಸಹಜ ಹೆರಿಗೆ (Normal) ಯಾಗಲು ಖಂಡಿತ ಸಾಧ್ಯ. (ಶೇ. 70 ರಷ್ಟು) ಆದರೆ, ಈ ಪ್ರಸವ ಸುಸಜ್ಜಿತ ಆಸ್ಪತ್ರೆಯಲ್ಲಿ ತಜ್ಞ ವೈದ್ಯರ ನೆರಳಿನಲ್ಲಿಯೇ ನಡೆಯಬೇಕಾಗುತ್ತದೆ. ಮುಂಚೆ ಸಿಸೇರಿಯನ್‌ಗೆ ಕಾರಣವಾಗಿದ್ದ ಅಂಶ ಈಬಾರಿಯೂ ಪುನಾವರ್ತಿಯಾಗಿದ್ದರೆ, ಅಥವಾ ಮೇಲೆ ತಿಳಿಸಿದ ಕಾರಣಗಳಿದ್ದಲ್ಲಿ ಸಿಸೇರಿಯನ್ ಮಾಡಬೇಕಾಗುತ್ತದೆ.

ಸಿಸೇರಿಯನ್ ಶಸ್ತ್ರ ಚಿಕಿತ್ಸೆ ಹೇಗೆ ?

ಕಿಬ್ಬೊಟ್ಟೆಯ ಮಧ್ಯ ಭಾಗದಲ್ಲಿ ಚರ್ಮವನ್ನು ಅಡ್ಡಲಾಗಿ ಕತ್ತರಿಸಿ, ಉಳಿದ ಪದರಗಳನ್ನೆಲ್ಲಾ ಪ್ರತ್ಯೇಕವಾಗಿ ಕತ್ತರಿಸಿ ನಂತರ ಗರ್ಭಕೋಶದ ಕೆಳಭಾಗದಲ್ಲಿ ಸುಮಾರು 10 ಸೆಂ. ಮೀ. ನಷ್ಟು

ಬೆಳ್ಳಗೆ ಇರ್ದು ಎಲ್ಲಾ ಹಾಲಲ್ಲ

ಅಡ್ಡಲಾಗಿ ಕತ್ತರಿಸಿದಾಗ ಶಿಶುವಿನ ತಲೆಯ ಭಾಗ ಗೋಚರವಾಗುತ್ತದೆ. ತಲೆಯ ಭಾಗವನ್ನು ಮೊದಲು ಹೊರತೆಗೆದು ನಂತರ ಪೂರ್ಣ ಶಿಶುವನ್ನು ಗರ್ಭಕೋಶದಿಂದ ಹೊರಕ್ಕೆ ತೆಗೆಯಲಾಗುತ್ತದೆ. ನಂತರ ಹೊಕ್ಕಳ ಬಳ್ಳಿಯನ್ನು ಕತ್ತರಿಸಿ, ತಾಯಿಯ ಮಾಸವನ್ನು ಹೆಪ್ಪು ಗಟ್ಟಿದ ರಕ್ತವನ್ನು ಸಂಪೂರ್ಣವಾಗಿ ಹೊರ ತೆಗೆದು ಕತ್ತರಿಸಿದ ಗರ್ಭಕೋಶದ ಪದರಿನ ಅಂಚುಗಳನ್ನು ಗುರುತಿಸಿ ಹೊಲಿಯಲಾಗುತ್ತದೆ. ಕೊನೆಯ ಚರ್ಮದ ಅಂಚುಗಳನ್ನು ಸೇರಿಸಿ ದಾರದಿಂದ ಹೊಲಿದ ನಂತರ ಉದರ ಭಾಗ ಮೊದಲಿನಂತಾಗುತ್ತದೆ.

ಶಸ್ತ್ರ ಚಿಕಿತ್ಸೆ ಸಮಯದಲ್ಲಿ ನೋವಾಗುತ್ತದೆಯೇ? ಎಷ್ಟು ಸುರಕ್ಷಿತ ?

ಶಸ್ತ್ರ ಚಿಕಿತ್ಸೆಯ ಮುಂಚೆ ಅರಿವಳಿಕೆ ತಜ್ಞರು ಬೆನ್ನಿನ ಮೂಲಕ ಔಷಧವನ್ನು ಚುಚ್ಚಿ, ಅಲ್ಲಿ ಹಾದು ಹೋಗುವ ನರಗಳು ಮರಗಟ್ಟುವಂತೆ ಮಾಡುತ್ತಾರೆ. ಇದರಿಂದಾಗಿ ನೋವಾಗುವ ಪ್ರಶ್ನೆಯೇ ಇಲ್ಲ. ಶಸ್ತ್ರ ಚಿಕಿತ್ಸೆಯ ಸಮಯದಲ್ಲಿ ತಾಯಿಗೆ ಪೂರ್ಣ ಪ್ರಜ್ಞೆ ಇದ್ದು, ಮಾತಾಡಿಕೊಂಡು ಇರಬಹುದು. ಶಸ್ತ್ರ ಚಿಕಿತ್ಸೆ ಮುಗಿದೊಡನೆಯೇ ಮಗುವಿಗೆ ಎದೆಹಾಲನ್ನು ಉಣಿಸಲು ಸಾಧ್ಯ.

ಕೆಲವೊಂದು ಸಂದರ್ಭಗಳಲ್ಲಿ ಮಾತ್ರ ಶ್ವಾಸದ ಮೂಲಕ ಔಷಧ ನೀಡಿ ತಾಯಿಯ ಪ್ರಜ್ಞೆಯನ್ನು ತಪ್ಪಿಸಲಾಗುತ್ತದೆ. ಈ ಶಸ್ತ್ರ ಚಿಕಿತ್ಸೆಯನ್ನು ನುರಿತ ವೈದ್ಯರು 1/2 ಗಂಟೆಯೊಳಗೆ ಮುಗಿಸಬಲ್ಲರು. ಇದು ಅತ್ಯಂತ ಸುರಕ್ಷಿತ ಶಸ್ತ್ರ ಚಿಕಿತ್ಸೆಯಾಗಿದ್ದು ಇದರಿಂದ ತಾಯಿಗೆ ಭವಿಷ್ಯದಲ್ಲಿ ಯಾವುದೇ ತೊಂದರೆಯಾಗದು.

ಶಸ್ತ್ರ ಚಿಕಿತ್ಸೆಯ ನಂತರ :

ಶಸ್ತ್ರ ಚಿಕಿತ್ಸೆಯ ಮೊದಲನೆಯ ದಿನ ಸಾಮಾನ್ಯವಾಗಿ ಯಾವುದೇ ಆಹಾರ ಕೊಡದೆ ಡ್ರಿಪ್ ಕೊಡಲಾಗುತ್ತದೆ. ಎರಡನೆಯ ದಿನ ದ್ರವಾಂಶದ ಆಹಾರವನ್ನೂ, ಮೂರನೆಯ ದಿನ ಮೆತ್ತಗಿನ ಆಹಾರ ಹಾಗೂ ನಂತರ ಎಲ್ಲಾ ರೀತಿಯ ಆಹಾರವನ್ನೂ ನೀಡಬಹುದು. ಎರಡನೆಯ ದಿನದಿಂದಲೇ ತಾಯಿ ಓಡಾಡಬಹುದು. 6 ರಿಂದ 8 ನೇ ದಿನದ ಅವಧಿಯಲ್ಲಿ ಚರ್ಮದ ಹೊಲಿಗೆ ತೆಗೆದು ಮನೆಗೆ ಹೋಗಬಹುದಾಗಿದೆ. ಮನೆಯಲ್ಲಿ ಎಲ್ಲರಂತೆ ಆಹಾರ ಕೊಡಬಹುದು. ಎಲ್ಲಾ ರೀತಿಯ ಸಣ್ಣ ಕೆಲಸಗಳನ್ನು ಮಾಡಬಹುದು. 3 ತಿಂಗಳವರೆಗೆ ಅಧಿಕ ಭಾರ ಎತ್ತಬಾರದು ಅಷ್ಟೇ. ಶಸ್ತ್ರ ಚಿಕಿತ್ಸೆಯ 45 ದಿನಗಳ ನಂತರ ಲೈಂಗಿಕ ಸಂಪರ್ಕವೂ ಸಾಧ್ಯ. ನಂತರ ಹೆರಿಗೆಗೆ ಕನಿಷ್ಠ 3 ವರ್ಷದ ಅಂತರ ಕೊಡುವುದು ಸುರಕ್ಷಿತ.

ಬರಹ : ಡಾ. ಪ್ರವೀಣ್ ಯನ್. ಎಸ್., ಶಾಂತಿ ಆಸ್ಪತ್ರೆ, ಕ್ಯಾಲಿಕಟ್, ಕೇರಳ.

ರಾಷ್ಟ್ರ ಮಟ್ಟದ ಕ್ರೀಡಾ ಕೂಟದಲ್ಲಿ ಜಿಲ್ಲೆಯ ಪಿ. ಎಂ. ಆನಂದ ಸಾಧನೆ



ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಮೇ. 13,14 ಮತ್ತು 15 ರಂದು ಜರುಗಿದ ರಾಷ್ಟ್ರ ಮಟ್ಟದ ಹಿರಿಯ ಅಥ್ಲೆಟಿಕ್ಸ್ ಕ್ರೀಡಾ ಕೂಟದಲ್ಲಿ ಪಾಲ್ಗೊಂಡಿದ್ದ ಕೊಡಗಿನ ಪಿ.ಎಂ.ಆನಂದ ಆನಂದ ಅವರು 800 ಮೀಟರ್ ಓಟದಲ್ಲಿ ಕಂಚು ಹಾಗೂ 1,500 ಮೀಟರ್ ಓಟದಲ್ಲಿ ಬೆಳ್ಳಿ ಪದಕ ಗೆದ್ದು ಕೊಂಡಿದ್ದಾರೆ. ಗಾಳಿ ಬೀಡುವಿನ ಪೂಜಾರೀರ ದಿ. ಮೊಣ್ಣಪ್ಪ ಮತ್ತು ಸೀತಮ್ಮ ಅವರ ಪುತ್ರರಾದ ಆನಂದ್ ಅವರು, ಪ್ರಸ್ತುತ ಮಂಗಳೂರಿನ ಭಾರತೀಯ ಸ್ಟೇಟ್ ಬ್ಯಾಂಕ್‌ನ ಕಂಕನಾಡಿ ಶಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

-ಸಂಗಾತಿ

ಸಂಗಾತಿ

ಸಂಗಾತಿ ಸಂಗಾತಿ ನೀನೇ ನಮ್ಮೆಲ್ಲರ ಗೆಳತಿ.
ತಿಂಗಳು ತಿಂಗಳು ಮನೆ ಬಾಗಿಲ್‌ಗೆ ಬರುತಿ
ನೀನು ಕಥೆ ಕವನ ವಿಚಾರಗಳ ತುಂಬಿರುತಿ.
ನಾವು ನಿನ್ನ ಚಂದವ ಕೊಡದಿದ್ದರೂ ಬರುತ್ತೀರುತಿ

ಇದರಿಂದ ನನಗಾಯ್ತು ನಿನ್ಮೇಲೆ ಅತೀ ಪ್ರೀತಿ.
ಇನ್ಮೇಲೆ ಕೊಟ್ಟೇ ಕೊಡುತ್ತೇನೆ ನಿನ್ನಯ ವಂತಿ.
ಎಲ್ಲವರೂ ನಿನ್ನಯ ಚಂದವ ತೀರಿಸುತಿರಲಿ,
ಎಲ್ಲವರ ಮನೆ ಮನೆಗೆ ಸೇರುತಾ ಇರಲಿ

ಎಲ್ಲವರು ನಿನ್ನಯ ಶ್ರೇಸ್ಸಿಗೆ ಸಹಕರಿಸುತಿರಲಿ
ನಿನ್ನಯ ಆಯುಷ್ಯ ತಾಕತ್ತು ಹೆಚ್ಚುತಾ ಇರಲಿ
ಗೌಡ ಜನಾಂಗದ ಹಿರಿಮೆ ಹೆಚ್ಚುತಾ ಬರಲಿ
ಕೊಡಗು ಸಂಗಾತಿ ಎಲ್ಲೆಲ್ಲು ಕೀರ್ತಿ ತರಲಿ

ಈ ಕವನ ಸರಿ ಇದ್ದರೆ ಪ್ರಕಟಿಸಿ, ಇಲ್ಲದಿದ್ದರೆ ಕಸದ ಬುಟ್ಟಿಗೆ ಹಾಕಿಸಿ.

ಕಟ್ರತನ ಎಂ. ದೇವಯ್ಯ, ಮೂಡಿಗೆರೆ.

ವಿಪರೀತ ಪೋಂತಿರ ತಲೆ ಮ್ಯಾಲೆ ಕೂರ್‌ದು ಕಂಡಿತ

ಬಯಕೆ ಮೊದುವೆ

ಪರಂಪರೆನ ಟೀಕೆ ಮಾಡ್ದು ಬಾಳ ಸುಲಬ. ಆದರೆ ಪರ಼಼ಪರೆನ ನಿರ್ಮಿಸಿಕೇ ಅಷ್ಟೇ ಬಂಗ ಉಟ್ಟು. ಪರಂಪರೆಗೆ ಪಕ್ಕ ಪ್ರತ್ಯಕ್ಷ ಅದೂ ಇಲ್ಲೆ ಮಾಯ ಅದೂ ಇಲ್ಲೆ. ಹೊಸ್ತ್ ಹಳ್ತ್‌ನೊಟ್ಟಿಗೆ ಸೇರಿಕಣ್ದೆ. ಹಳ್ತ್ ಬದಲಾದೆ, ಕೆಲವು ಹೆಚ್ಚಿಗೆ ಅರ್ಥ ಕೊಡ್‌ವಂತದಾದೆ, ಇನ್ನ್ ಕೆಲವು ಅರ್ಥಹೀನ ಆದೆ. ಇವುಗಳ ಪೈಕಿ ಪ್ರಾಚೀನ ಯಾದ್, ಅರ್ವಾಚೀನ ಯಾದ್, ಸುಳ್ಳ್ ಯಾದ್, ಯಾಗ ಬಂದದ್, ಹೆಂಗೆ ಬಂದದ್ ಎಂಬಂತ ಸಂಗತಿ ಮೂಲ ಪರಂಪರೆನ ಹೊಂದಿದ್ದದೆ.

ಸಂಸ್ಕೃತಿ ಮತ್ತೆ ಸಂಸ್ಕಾರ ಒಂದೇ ಅರ್ಥನ ಕೊಟ್ಟದೆ. 'ಸಂಸ್ಕಾರ' ಎಂಬ ಶಬ್ದಕ್ಕೆ 'ಕರ್ಮ' ಎಂಬ ಅರ್ಥಸಾ ರೂಡಿಲಿ ಉ಼ಟ್ಟು. ಈ ಸಂಸ್ಕಾರ ಕರ್ಮಗಳ ವೇದ, ಸೂತ್ರ, ಧರ್ಮಶಾಸ್ತ್ರ', ಸ್ಮೃತಿ ಇವುಗಳ್‌ಲಿ ವಿವರಿಸಿದ್ದ್ ವಿಧಿಸಿ ಆಗುಟು. ಇಂತ ಸಂಸ್ಕಾರಗಳ್‌ಲಿ ಮುಖ್ಯ ಆಗಿ ಹನ್ನೆರ್ಡ್ ಕರ್ಮಗ ಆಚರಣೆಲಿ ಉಟ್ಟು. 1) ಗರ್ಭದಾನ 2) ಸೀಮಂತೋನ್ನಯನ 3) ಜಾತಕ ಕರ್ಮ 4) ನಾಮಕರಣ 5) ಅನ್ನ ಪ್ರಾಶನ 6) ಚೂಡಾಕರ್ಮ ಅಕ್ಷರಾಭ್ಯಾಸ 7) ಉಪನಯನ ಸಮಾವರ್ತನ (8) ವಿವಾಹ 9) ಜಾಪಾಸನ 10) ತ್ರೇತಾಗ್ನಿಗಳ ದಾನ 11) ದಶಪೂರ್ಣ ಮಾಸಾದಿ ಇಷ್ಟಯಾಗ 12) ಅಪರ ಕರ್ಮ ಅಂತ್ಯಷ್ಟ ಕರ್ಮ, ಆದರೆ ಈ ಪೈಕಿ ಕೆಲವೊಂದ್ ಮಾತ್ರ ಆಚರಣೆಲಿ ಉಟ್ಟು. ನಮ್ಮ ದೇಶಲಿ ಇರ್‌ವ ಧರ್ಮಲಿ ಅವುಗಳ ಬೇರೆ ಬೇರೆ ಜಾತಿ ಪಂಗಡಗ ರೂಡಿ ಮಾಡ್ಕಂಡ್ ಬಂದ ಸಂಪ್ರದಾಯ ಸಂಸ್ಕಾರಗಳ್‌ಲಿ ಈಗ ಸಾ ವೆತ್ಯಾಸಗ ಉಟ್ಟು. ಕೆಲವೊಂದರ್‌ಲಿ ಹೋಲಿಕೆ ಕಂಡ್ರೂ ತಮ್ಮದೆ ಆದ ವಿಶೇಷ ಪದ್ಧತಿಗಳ ಕೆಲವು ಜಾತಿ ಪಂಗಡಗ ಆಚರ್‌ಸುದರ ನಾವೆಲ್ಲ ಗಮನಿಸಕ್. ಹಿಂದೂ ಸಂಪ್ರದಾಯದ ಕಟ್ಟ್ ಕಟ್ಟಳೆಗಳ ಪಾಲ್‌ಸುವ ಗೌಡ ಜನಾಂಗ ತನ್ನದೇ ಆದ ವಿಶೇಷ ಸಂಸ್ಕೃತಿನ ಬೆಳ್ಸಿ ಕಂಟು. ಹೆರಿಗೆ, ನಾಮಕರಣ, ಋತುಶಾಂತಿ, ಬಯಕೆ ಮೊದುವೆ, (ಸೀಮಂತ) ಸಾವು ಅವೆಲ್ಲಾಗೌಡ ಜನಾಂಗದೊವು ಆಚರ್‌ಸುವ ಸಾಂಸ್ಕೃತಿಕ ಪದ್ಧತಿಗ. ಇದರ್ಲಿ ಬಯಕೆ ಮೊದುವೆ ಸಾ ಒಂದು.

ಬಯಕೆ ಮೊದುವೆ ಅಥವ ಸೀಮಂತತ ಹೇಳ್ರೆ ಚೊಚ್ಚ್‌ಲ್ ಬಸಿರಿಗೆ ಮಾಡ್‌ವ ಒಂದು ಸಂಸ್ಕಾರ. ಮೇಲೆ ತಿಳಿಸಿದ್ಧಂಗೆ ಮನುಷ್ಯ ಬೇರೆ ಬೇರೆ ಹಂತಗಳ್‌ಲಿ ಬೇರೆ ಬೇರೆ ಸಂಸ್ಕಾರಗಳ್ನ ನಡ್ಸುವ ಕ್ರಮ ಉಟ್ಟು, ಹೆಣ್ಣ್ ಸುರೂಲಿ ಬಸಿರಿ ಆಕನ (ಗರ್ಭಿಣಿ) ತಿಂಗ ಕಳ್ದಂಗೇ ಅವುಳಿಗೆ ಹೊಸ ರೀತಿನ ಬಯಕ್ಕೆ ಉಂಟಾಗಿ ಅದ್ ದಿನಂದಿನಕ್ಕೆ ಬೆಳ್‌ಕಂಡೇ ಹೋದೆ. ಸಾಮಾನ್ಯಾಗಿ ಬಸರಿ ಆದ ಎಳ್ನೆ ತಿಂಗಲಿ ಅವುಗಳಿಗೆ ಬಾಳಷ್ಟ್ ಆಸೆಗ ಉಂಟಾದ್ದೆ. ಇದ್ ಬವುಸ ಅವಳ ಗರ್ಭಲಿ ಬೆಳ್ಕಂಡಿರ್‌ವ ಕೂಸುನ ಅಗತ್ಯದ ಪರಿಣಾಮದಿಂದಾಗಿ, ಅವಳ ಹೊಟ್ಟೆಲಿ ಹುಟ್ಟಿಕಂಬ ಅಪೂರ್ವ ಆದ ಬಯಕೆ ಇರ್ದೊಂತೇಳಿ ಒಪ್ಪಕಾದ ವಿಚಾರ. ಇಂತ ಬಯಕೆನ ಪೂರೈಸುವ ಒಂದ್ ಕ್ರಮಕ್ಕೆ ಸೀಮಂತ ಅಥವ ಬಯಕೆ ಮೊದುವೆಂತೇಳ್ದು ವಾಡಿಕೆ. ಹಿಂದೂ ಧರ್ಮದ ಪ್ರಕಾರ ಇದ್ ಸುರೂಲಿ ನಡ್ಸುವ ಧಾರ್ಮಿಕ ಸಂಸ್ಕಾರ. ಸಾಮಾನ್ಯ ಗರ್ಭವತಿಗೆ ಎಳ್ನೆ ತಿಂಗಲಿ ಬಯಕೆ ಮೊದುವೆನ ಮಾಡ್ವ ಕ್ರಮ. ಈ ಕಾರ್ಯಕ್ರಮನ ತವುರು ಮನೆವು ನಡ್ಸುವೆ. ಅದ್‌ಕೆಂತ ಏಳ್ನೆ ತಿಂಗ ತವರು ಮನೆವು ಒಳ್ಳೆ ದಿನ ಮತ್ತೆ ಶುಭಮೂರ್ತ ನೋಡಿ ದಿನ ನಿಘಂಟ್ ಮಾಡಿ ಗರ್ಭೀಣಿನ ಕರ್ಕಂಡ್ಹೋಕೆ ಬಂದವೆ. ಬಸಿರಿ ಹೆಣ್ಣ್ ಮನೆಂದ ಹೊರ್ಡ್‌ಕನ ಕುಲದೇವ್ರುಗೆ ಕೈ ಮುಗ್ದ್ ಮನೆ ಹಿರಿಯವರ ಕಾಲ್ ಹಿಡ್ದ್ ಆಶೀರ್ವಾದ ಪಡ್‌ದ್ ತವುರು ಮನೆಗೆ ಹೋದೆ. ಇದೇ ತಿಂಗಲಿ ಬಯಕೆ ಮೊದುವೆನ ಮಾಡ್ದು. ಒಂದ್ ವೇಳೆ ಆ ತಿಂಗ ಏನಾರ್ ಅನ್‌ಕೂಲ ಆಗದ್ದರೆ ಒಂಬತ್ನೆ ತಿಂಗಲಿ ಮಾಡ್‌ವೆ. ಈ ಕಾರ್ಯಕ್ರಮಕ್ಕೆ ಏಳ್ ದಿನಕ್ಕೆ ಮುಂದೆ ತವುರು ಮನೆವು ಮತ್ತೆ ಬಾಕಿ ಎಲ್ಲಾ ನೆಂಟ್‌ರಿಷ್ಟರ್‌ನ ಕರ್ಸಿಕಂಡವೆ. ಬಯಕೆ ಮೊದುವೆಗೆ ಸಮ್ಮಂದಪಟ್ಟವು ಹೋಕನ ಹೊಸ್ತ್ ಸೀರೆ, ರವಿಕೆ, ಹೂವು, ಚಿನ್ನಾಭರಣ ಸ್ಥಿತಿಂಡಿ ಇಂತದೆಲ್ಲತಕಂಡ್ ಹೋಗ್ವ ಪದ್ಧತಿ ಉಟ್ಟು. ಬಸಿರಿನ ತಿಂಗಳ ನೋಡಿಕಂಡ್ ಅಂದರೆ ಏಳ್ ಆದರೆ ಏಳ್ ಬಗೆನ, ಒಂಬತ್ತ್, ಆದರೆ ಒಂಬತ್ತ್ ಬಗೆನ ಚಿನ್ನಾಭರಣ ಹಾಂಗೆ ಅಷ್ಟೇ ಬಗೆನ ಹೂವುನ ತಕಂಡ್ ಹೋಕು.

ಕಾರ್ಯಕ್ರಮ ಸುರು ಆಕನ ಕಾಯೆಣ್ಣೆ ದೀಪ ಹಚ್ಚಿ ನಾಕ್ ಚಾಪೆಗಳ ಚೌಕಟ್ಟಿಗೆ ಹಾಕಿ ಅದರ್‌ಲಿಗಂಡನ ಮನೆವರ ಊರ್ ಗೌಡ ಮತ್ತೆ ಮುಖ್ಯ ನೆಂಟ್ರ್‌ಗಳ್‌ನ ಕುದ್ರಿಸಿ ಗಂಡನ ಮನೆವು ತಂದ ಹೂವು, ವಸ್ತ್ರ ಹಾಂಗೆ ಚಿನ್ನಾಭರಣಗಳ ಹರಿವಾಣಲಿ ಹಾಕಿ ಚೌಕಟ್ಟಲಿ ನಡುಲಿ ಮಣೆ ಮೇಲೆ ಇಸೂಕು. ಆಮೇಲೆ ಎಲ್ಲವರ್‌ದ ಹರ್‌ಸಲ್ಪಟ್ಟ ಆ ಹೂವು ವಸ್ತ್ರ ಹಾಂಗೆ ಚಿನ್ನಾಭರಣಗಳ ಕುದ್ದಂತ್ಹವು ಗಂಡನ ಪೈಕಿಯವುಕ್ಕೆ ತೆಗ್ದ್‌ಕೊಟ್ಟವೆ. ಹಿಂಗೆ ಮಾಡ್ದ ಮೇಲೆ ಸ್ವೀಕಾರ ಮಾಡ್ದ ಅಲಂಕಾರವಸ್ತ್‌ಗಳ್‌ದ ಮೂರು ಇಲ್ಲರೆ ಐದ್ ಜೆನ ಮುತ್ತೈದೆ ಹೆಣ್ಮಕ್ಕ ಮೀದ್ ಕುದ್ದ ಬಸಿರಿ ಹೆಣ್ಣೆನ ಹೊಸ ಬಟ್ಟೆ ಚಿನ್ನಾಭರಣ ಮತ್ತೆ ಹೂವುಗಳ್‌ಂದ ಅಲಂಕಾರ ಮಾಡಿ ಸೋಬಾನೆ ಹಾಡಿಕಂಡ್ ಅರ್ಸಿನ ಕುಂಕಮದ ಬೊಟ್ಟು ಹಾಕಿ ಗಂಧ ಶಾಸ್ತ್ರ ಮಾಡ್ವ ಕ್ರಮ ಉಟ್ಟು. ಹೀಂಗೆ ಸರ್ವಲಂಕಾರ ಭೂಷಿತೆ ಆದ ಗರ್ಭೀಣಿಗೆ ಮುತ್ತೈದೆ ಹೆಣ್ಮಕ್ಕ ಆರತಿ ಮಾಡಿ ಆದ ಮೇಲೆ ದೀಪಕ್ಕೆ ಕೈ ಮುಗ್ದ್‌ಗಂಡನೊಟ್ಟಿಗೆ ಹೊಸ ಚಾಪೆಲಿ ಕುದ್ರುಸೊಕು. ಮತ್ತೆ ಬಂದವೆಲ್ಲಾ ಗರ್ಭಿಣಿನ ತಲೆಗೆ ಅಕ್ಕಿ ಹಾಕಿ ಆಶೀರ್ವಾದ ಮಾಡ್ವ ಕ್ರಮ ಉಟ್ಟು. ಆ ಮೇಲೆ ಅಪ್ಪ ಅಥವಾ ಕುಟುಂಬದ ಯೆಜಮಾನ,ಇಬ್ಬರ ತುಳ್ಸಿ ಕಟ್ಟೆ ಹಕ್ಕಲೆ ಕರ್ಕಂಡ್ ಬಂದ್ ಐದ್ ಎಲೆ ಒಂದ್ ಅಡಿಕೆನ ಗರ್ಭಿಣಿನ ಕೈಲಿ ಕೊಟ್ಟ್ ಅದರ ಮೇಲೆಂದ ಐದ್ ಸರ್ತಿ ದೇವರ ಹೆಸ್ರ್‌ಲಿ ಭೂಮಿ ತಾಯಿಗೆ ನೀರ್ ಬುಡೋಕು. ಈಗೆ ಗಂಡ ಮತ್ತೆ ಹೆಣ್ಣ್ ಒಟ್ಟಿಗೆ ಇದ್ದ್ ಇಬ್ರೊರು ಮೂಡು ಸೂರ್ಯಂಗೆ,ಪಡುಚಂದ್ರಂಗೆ, ತೆಂಕ ಸಲಿಯಾಂದ್ರ, ಬಡಗು ಬಾಲಪುತ್ರ ಮತ್ತೆ ಕುಲದೇವ್ರು ಹೀಂಗೆ ಒಟ್ಟು ಐದ್ ಸರ್ತಿ ಭೂಮಿ ತಾಯಿಗೆನೀರ್ ಬುಡ್‌ವ ಕ್ರಮ

ಹಾವು ಸಣ್ಣದಾದರು ವಿಷ ಕಮ್ಮಿ ಇರ್ದುಲೆ

ಉಟ್ಟು, ಮತ್ತೆ ಗರ್ಭಿಣಿ, ಅಕ್ಕಿನ ತನ್ನ ತಲೆ ಸುತ್ತ್ ತಂದ್ ಕೋಳಿ ಲಾಕಿ ಒಂದಕ್ಕೆ ತಿನ್ನಿ ಬುಡ್‌ವ ಕ್ರಮ ಉಟ್ಟು, ಬವುಸ ತನ್ನ ಮೇಲೆ ಉಂಟಾಗ್‌ವ ಕೆಟ್ಟ ದೃಷ್ಟಿ ಶನಿಪರಿಹಾರಕ್ಕಾಗಿ ಈ ರೀತಿ ಮಾಡಿರಿಕೂ ಸಾಕ್. ಅಲ್ಲರೆ ಸಂಸಾರಾಭಿವೃದ್ಧಿ ದೃಷ್ಟಿಲಿ ಆ ಕೋಳಿನ ಉದಾಹರಣೆಗೆ ಬೇಕಾಗಿ ನೋಡುಂತ ಕಲ್ಪಿಸಿ ಆ ಕೋಳಿಗೆ ಅಕ್ಕಿ ತಿನ್ನಿ ಬುಡ್‌ವೊಂದು ಕ್ರಮನ ಮಾಡಿರಿಕೂ ಸಾಕ್.ಇದ್ ಕೆಲವು ಜೆನಗಳ ಅಭಿಪ್ರಾಯ.

ಆ ಮೇಲೆ ಮನೆ ಒಳಗೆ ಗರ್ಭಿಣಿ ಮತ್ತೆ ಅವಳ ಗಂಡನ, ಮೂರ್ ಜೆನ ಮುತ್ತೈದೆಯವರೊಟ್ಟಿಗೆ ಚಾಪೆಲಿ ಕುದ್ರಿಸಿ ಬಾಳಲೆ ಹಾಕಿ ಇಕ್ಕ್‌ವೆ. ಗರ್ಭಿಣಿಗೆ ಐದ್ ಅಥವ ಎಳ್ ಸರ್ತಿ ಹೊದ್‌ರಿ,ಬಾಳೆಣ್ಣ್ ಮತ್ತೆ ಬೇರೆ ಎಲ್ಲಾ ಬಗೆ-ಬಗೆ ತಿಂಡಿಗಳ ಇಕ್ಕೊಕು. ಅವಳ ಹತ್ರ ಕುದ್ದವುಕು ಸಾ ಇಕ್ಕೊಕು. ಉಂಬಕೆ ಮುಂದೆ ಗಂಡ ಮತ್ತೆ ಹೆಣ್ಣ್ ಇಬ್ಬೊರು ಪದಾರ್ಥನ ಕಲ್ಸಿ ಒಂದೊಂದು ಉಂಡೆ ಮಾಡಿ ಹೆಣ್ಣ್ ಒಂದ್ ಗಂಡ್ ಕೂಸಿಗೂ ಗಂಡ ಒಂದು ಹೆಣ್ಣ್ ಕೂಸಿಗೂ ಕೊಡ್‌ವ ರೂಡಿ ಉಟ್ಟು. ಮುಂದೆ ಹುಟ್ಟ್‌ವ ಗಂಡ್ ಕೂಸಾಗಲಿ ಹೆಣ್ಣ್ ಕೂಸಾಗಲಿ ಇವುಕೆ ಅವರ ಮೇಲೆ ಪ್ರೀತಿ ಇರೊಕುಂತೇಳಿ ತೋರ್ಸುವ ಕ್ರಮ ಇದ್. ಮತ್ತೆ ಉಂಬಕೆ ಸುರುಮಾಡ್‌ದು. ಗರ್ಭಿಣಿಗೆ ಮಾತ್ರ ಅವಳ ಬಯಕೆಗಿಂತ ಜಾಸ್ತಿ ಇಕ್ಕೊಕು. ಆಮೇಲೆ ಸಮಾರಂಭಕ್ಕೆ ಬಂದ ನೆಂಟರಿಷ್ಟ್‌ಗೆ ಇಕ್ಕ್‌ವೆ. ಊಟ ಮುಗ್ದ ಮೇಲೆ ಬಂದವೆಲ್ಲ ಗರ್ಭಿಣಿನ ಹರ್‌ಸಿ ಹೋದವೆ. ಇಲ್ಲಿಗೆ ಈ ಕಾರ್ಯಕ್ರಮ ಮುಗ್ದದೆ.

ವಟ್ಟಾರೆ ಗರ್ಭಿಣಿಗೆ ಅವ ಹೊಸ ಹೊಸ ಬಯಕೆಗಳ ತೃಪ್ತಿ ಪಡ್ಸಿಕೆ ಮಾಡ್‌ವ ಈ ವಿಧಿ ನಿಯಮನೆ ಬಯಕೆ ಮೊದುವೆ. ಗಂಡಿಗೆ ಒಂಧೇ ಮೊದುವೆ ಆದರೆ ಹೆಣ್ಣಿಗೆ ಮೂರ್ ಮೊದುವೆ, ಅಂದರೆ 1)ಋತುಶಾಂತಿ 2) ವಿವಾಹ 3) ಬಯಕೆ. ಈ ಬಯಕೆ ಮೊದುವೆನ ಏಳ್ ಅಥವ ಒಂಬತ್ ತಿಂಗಳ್‌ಲೆ ಮಾಡೊಕು. ಸೆರಿ ತಿಂಗಲಿ ಮಾತ್ರ ಮಾಡಿಕೆ ಬೊತ್ತ್. ಇದ್ ತಿಳ್‌ದವರ ಅಭಿಪ್ರಾಯ. ಸುರೂಗೆ ಬಸಿರಿ ಆಕನ ಅಂತರ್ಗತವಾಗಿ ಮೂಡ್ಕನ ವಿಶಿಷ್ಟ ರೀತಿನ ಬಯಕೆ ಬೇಡಿಕೆಗೆ ಗರ್ಭಿಣಿಲಿ ಕಂಡ್ ಬಂದದೆ.

ಬಸಿರಿ ಆದ ಪ್ರತಿ ತಿಂಗಳ್ಲೂ ಕೂಡ ಅವಳ ಬೇಡಿಕೆಲಿ ಬದಲಾವಣೆ ಆದೆ. ತಿಂಗ ಕಳ್ದಂಗೆ ಅವಳ ಆಸೆ ಜಾಸ್ತಿ, ಜಾಸ್ತಿ ಆಕಂಡೇ ಹೋದೆ. ಕೆಲವು ಸಲ ಅವುಳಿಗೆ ಇಷ್ಟಾದ ತಿಂಡಿ ತಿನ್ಸ್ ಪಡಿಯಕೆ ಅವುಳು ಚಡ್‌ಪಡ್‌ಸುದರ ಕಾಣಕ್, ಗರ್ಭಿಣಿನ ಎದ್‌ರ್ ಎಸಾರ್ ತಿಂಡಿ, ಹಣ್ಣ್‌ಗಳ ತಿಂಬಕೆ ಬೊತ್ತ್‌ತ ಹಿರಿಯೊವು ಹೇಳ್‌ವೆ. ಅದ್ ಸತ್ಯನೂ ಹವುದು. ಅಂತೂ ಗರ್ಭಿಣಿನ ಭಾರಿ ಆಶೆನ ಪೂರೈಸಿಕೆ ಬಯಕೆ ಮೊದುವೆ ಒಂದ್ ಒಳ್ಳೆ ಪದ್ಧತಿ. ಹೊಸ ಸೀರೆ, ರವಿಕೆ, ಬೇರೆ ಬೇರೆ ಚಿನ್ನಾಭರಣಗ, ತರತರದ ಹೂವು, ಗಂಧ ಇವುಗಳಂದ ಅವಳ ಅಲಂಕಾರ ಮಾಡಿ ನಾನಾ ತರದ ತಿಂಡಿಗಳ ತಿಂಬಕೆ ಕೊಡುದರ್‌ಂದ ಅವಳ ಬಯಕೆ ಖಂಡಿತಾ ಪೂರೈಸಿದೆಂತೇಳ್ರೆ ತೊಪ್ಪಲ್ಲ.

ಗರ್ಭಿಣಿನ ತವುರು ಮನೆಗೆ ಅಣ್ಣ ತಮ್ಮಂದ್ರ್ ಯಾರು ಕರ್ಕಂಡ್ ಹೋವಾ ಕ್ರಮ ಇಲ್ಲೆ. ಹಿರಿಯರ್ನ ಕೇಳ್ರೆ ಇದ್ ಯಾಕೆ ಬೊತ್ತ್‌ತ ಒಂದ್ ಕತೆನೇ ಸುರು ಮಾಡ್‌ವೆ.

ಹಿಂದೊಮ್ಮೆ ಗರ್ಭಿಣಿನ ಒಡಹುಟ್ಟಿದ ಅಣ್ಣ ಏಳ್ನೆ ತಿಂಗಲಿ ತವುರಿಗೆ ಕರ್ಕಂಡ್ ಬಾಕನ ಮುಂದೆ ನಡ್ಕಂಡ್ ಹೋತಿದ್ದ ಅಣ್ಣನ ಕಾಲ್‌ನ ನೋಡಿ ಅವುಳಿಗೆ ಅವನ ಕಾಲ್‌ನ ಮಾಸ ಖಂಡನ ತಿಂಬಕೂಂತ ಆಸೆ ಆತ್. ಇವುಳು ಅಣ್ಣನೊಟ್ಟಿಗೆ ನಿನ್ನ ಕಾಲ್‌ನ ಮಾಸನ ನಂಗೆ ತಿಂಬಕೆ ಕೊಡುತಾ ಕೇಳ್ತ್‌ಗಡ! ಅಣ್ಣ ಅವನ ಕಾಲ್‌ನ ಮಾಸನ ತಂಗೆಗೆ ಕೊಟ್ಟದೆ ಅವುಳು ಮಾಸ ತಿಂದ್ ತೃಪ್ತಿಪಟ್ಟದೆ. ಆದರೆ ಈ ಘಟನೆಂದ ಅಣ್ಣಂಗೆ ಏನೋ ಒಂದು ರೀತಿನ ಸೊಂಸಯ ಮೂಡಿ ಅವಳ ಹೊಟ್ಟೆ ಒಳಗೆ ನೋಡ್ರೆ ಆ ಮಾಸದ ತುಂಡು ಗರ್ಭಲಿರ್‌ವ ಕೂಸುನ ಬಾಯಿಲಿ ಉಟ್ಟು! ಹಾಂಗಾಗಿ ಬಯಕೆ ಎಲ್ಲ ಕೂಸುದ್‌ತೇಳಿ ಅವಂಗೆ ಅರ್ಥ ಆದೆ. ಹಂಗಾಗಿ ಆಮೇಲೆ ಅಣ್ಣ-ತಮ್ಮಂದರ್ ತವುರಿಗೆ ಗರ್ಭಿಣಿನ ಕರ್ಕಂಡ್ ಬಾವ ಕ್ರಮ ನಿತ್ತೋತು. ಆದರೆ ಇಲ್ಲಿ ನಾವುಗೆ ಈ ಕಟ್ಟ್ ಕತೆನ ಹಾಂಗಿರ್‌ನ ನಿರೂಪಣೆ ಮುಖ್ಯ ಅಲ್ಲ. ಗರ್ಭಿಣಿಗೆ ಬಯಕೆ ಉಂಟಾದು ಮಾತ್ರ ಖಂಡಿತ. ಇತರ ಸಮೆಲಿ ಇಲ್ಲದ ಅವಳ ಬಯಕೆ ಈ ಸಂದ್ರ್‌ಪಲಿ ಹುಟ್ಟಿಕಂಬಕ್ಕೆ ಅವಳ ಹೊಟ್ಟೆಲಿರ್ಸ್ ಕೂಸೇ ಮೂಲಕಾರಣಂತ ಹೇಳಕ್. ಈ ಹಂತಲಿ ಗರ್ಭಿಣಿಗೆ ಸಂತೋಸ, ವಿಶ್ರಾಂತಿ, ತೃಪ್ತಿ ಅಲ್ಲದೆ ಪೌಷ್ಟಿಕ ಆಹಾರ, ಇದರೊಟ್ಟಿಗೆಒಳ್ಳೆ ವಾತಾವರಣ ತೀರಾ ಅಗತ್ಯ. ಇದ್ ವೈಜ್ಞಾನಿಕ ದೃಷ್ಟಿಲೂ ಸಾ ಸೆರಿಂತಳೇ ಕಂಡದೆ.

ಆದರೆ ಇಂತ ಹಲವಾರ್ ವಿಧಿವತ್ತಾಗಿ ಇರ್‌ವ ಕ್ರಮಗಳ ಬಗ್ಗೆ ಇಂದ್‌ನ ಜೆನ ಉದಾಸೀನ ತೋರ್ಸಿ ಕೆಲವೊಂದು ಮುಖ್ಯ ಪದ್ಧತಿಗಳ್ಳೇ ಕೈ ಬುಟ್ಟದ್ ಬೇಜರದ ಸಂಗತಿ. ವೈಜ್ಞಾನಿಕ ಮತ್ತೆ ಶಾಸ್ತ್ರೀಯವಾಗಿ ರೂಪಿಸಿದಂತ ನೂರಾರ್ ವಿಧಿ ನಿಯಮಗಳ ಮರ್ತದ್ ಮಾತ್ರ ಅಲ್ಲದೆ ಆ ಬಗ್ಗೆ ಏನೂ ತಿಳಿಯದೆ ಇರ್‌ವ ಇಂದ್‌ನ ಜನಾಂಗಕ್ಕೆ ಈ ಇಸಯಲಿ ತಿಳ್‌ವಳಿಕೆ ನೀಡ್ದು ಅಗತ್ಯ. ನಾವುಗೆ ಗೊತ್ತಿದ್ದ ವಿಚಾರ ಪದ್ಧತಿಗ ನಮ್ಮೊಟ್ಟಿಗೆ ಅಂತ್ಯ ಆಗದೆ ಅದ್ ಹೊಸಪೀಳಿಗೆಲೂ ಚಿಗ್‌ರ್ ಒಡಿಯಕು. ಆಬಗ್ಗೆ ಹೈದಂಗ ಮತ್ತೆ ಗೂಡೆಗಳಿಗೆ ಆಸಕ್ತಿ ಹುಟ್ಟೊಕು. ಹೆತ್ತ ಅವ್ವಂದರ್‌ಸ ಇಸಯಲಿ ಮುತ್‌ವರ್ಜಿ ವಹಿಸೋಕು. ಸಂಪ್ರದಾಯಗ ಬರ್ ಕುರುಡು ಸಂಪ್ರದಾಯಗಳಾಂಗೆ ಮುಂದ್‌ವರಿಯದೆ ಅವುಗಳ ಸತ್ಯಾಸತ್ಯತೆಗಳ ಕುರ್ತ್ ಅರಿವು ಮೂಡೋಕು. ಹಿಂದೂ ಸಂಸ್ಕೃತಿನ ಗೌಡ ಪರಂಪರೆಲಿ ಹಾಸ್ ಹೊಕ್ಕ ಸಾಂಪ್ರಾದಾಯಿಕ ವಿಧಿ ನಿಯಮಗಳ ಬಗ್ಗೆ ಎಲ್ಲಾ ಗೌಡ ಜೆನಗ ಆಸಕ್ತಿ ಪಟ್ಟ್ ತಿಳ್ದ್, ಅವುಗಳ ರೂಪಿಸಿ ಕಂಡ್ರೆ 'ಗೌಡ' ಸಂಸ್ಕೃತಿ ಸರ್ವಶ್ರೇಷ್ಠಂತ. ಹೇಳ್ಸಿಕಂಬದರ್ಲಿ ಖಂಡಿತ ಸೊಂಸಯನೇ ಇಲ್ಲೆ.

ಬರಹ: ಪದ್ಮ ಕಾರ್ಕಳ, ಕುತ್ಯಾಳ ಮನೆ, ಜಾಲ್ಸೂರು, ಸುಳ್ಯ ತಾಲ್ಲೂಕು.

ಕಂಡದ್ ಹೇಳಿರೆ ಕೆಂಡದಂತ ಕೋಪ

ಬ್ಯಾಡದ ಅಸೂಯೆ

ಒಂದು ದೇವಾಲಯದ ಬದಿಲಿ ಒಂದು ಕುಂಬಳಕಾಯಿ ಬಳ್ಳಿ ಇತ್ತ್. ಸೆಗಣಿ ನೀರ್ ಧಾರಾಳ ಆಗಿ ಸಿಕ್ಕಿ ಅದ್ ಲಾಯಿಕಲಿ ಬೆಳ್‌ದಿತ್ತ್. ಅದರ್ಲಿ ತುಂಬಾ ಕಾಯಿಗಸನಾ ಇತ್ತ್.

ಅದೇ ದೇವಾಲಯದ ಬದಿಲಿ ಒಂದು ತೆಂಗಿನ ಗಿಡಸನ ಇತ್ತ್.ಅದ್ ಆಕಾಶದೆತ್ತರಕೆ ಬೆಳ್ದ್, ತನ್ನ ಹಸಿರ್‌ಗರಿಗಳನ್ನ ಇಲ್ಲಿಂದಲ್ಲಿಗೆ ಹೊಯ್ದಾಡ್ಸಿಕಂಡ್ ಖುಷಿಲಿ ಇತ್ತ್. ಮರದ ತುಂಬಾ ತೆಂಗಿನ ಕಾಯಿಗ ಇದ್ದೊ.

ಕುಂಬಳ ಕಾಯಿ ಬಳ್ಳಿಗೆ ತೆಂಗಿನ ಕಾಯಿ ಮರನ ನೋಡಿಕಾಕನ ಹೊಟ್ಟೆ ಚುರು ಚುರುತ್ತೇಳ್‌ತಿತ್ತ್. ಕಾರಣ, ತೆಂಗಿನ ಮರಕ್ಕೆಒಳ್ಳೆ ಗಾಳಿ ಬೆಳಕ್ಕ್ ಸಿಕ್ಕಿದೆ. ಅದ್‌ಕ್ಕೆ ಆನಂದಲಿ ವಿಹರಿಸ್ತಾ ಉಟ್ಟು ಅದರ ಭಾಗ್ಯ ನನಗಿಲ್ಲೆಲ್ಲ ಅಂತ.

ನಾನಂತು ದೇವಸ್ಥಾನದ ವಿಸರ್ಜನ ಮಲಿನ ವಸ್ತುಗಳ ಮಧ್ಯೆ ಜೀವಿಸ್ತಾ ಒಳೆ. ಈಶ್ವರ ಎಷ್ಟ್ ನಿರ್ದಯಿತ ಗ್ಯಾನ ಮಾಡ್ತ್. ಈಶ್ವರ ನನ್ನ ವಿಷಯಲಿ. ತುಂಬಾ ಅನ್ಯಾಯ ಮಾಡಿಟ್ಟುತ ಗ್ಯಾ ನ ಮಾಡ್ತ್. ಅಂದ್ ರಾತ್ರಿ ಕುಂಬಳ ಬಳ್ಳಿ ಈಶ್ವರನ ಭಕ್ತಿಲಿ ಪ್ರಾರ್ಥನೆ ಮಾಡ್ತ್. ನಂಗೂ ತೆಂಗಿನ ಮರದಂಗೆ ಉನ್ನತ ಜೀವನನ ಕೊಡುತ ಕೇಳ್ತ್. ಈಶ್ವರ ಕುಂಬಳ ಬಳ್ಳಿ ದೇವಾಲಯದ ಗೋಪುರನ ಪೂರ್ತಿ ವ್ಯಾಪಿಸಿ ಹಬ್ಬಿತ್. ಈಗ ಕುಂಬಳ ಬಳ್ಳಿಗೂ ಧಾರಾಳ ಗಾಳಿ ಬೆಳಕ್ಕ್ ಸಿಕ್ಕಿ ಆನಂದ ಅನುಭವಿಸಿ ಈಶ್ವರಂಗೆ ಕೃತಜ್ಞತೆ ಹೇಳ್ತ್.

ಒಂದು ದಿನ ಗಾಳಿ ಜೋರಾಗಿ ಬೀಸಿಕೆ ಸುರು ಆತ್. ಕುಂಬಳದ ಒಂದು ಕೈ ಕೆಳಗೆ ಬಿದ್ದ್ ಕಾಯಿಗ ಚೂರಾದೊ. ಗಾಳಿ ಇನ್ನೂ ಜೋರಾತ್. ಆಗ ಮತ್ತಷ್ಟು ಕುಂಬಳಕಾಯಿಗ ಬಳ್ಳಿ ಸಮೇತ ಕೆಳಗೆ ಬಿದ್ದ್ ಚೂರ್ ಚೂರಾಗಿ ಸಾಯಂಕಾಲದ ಹೊತ್ತಿಗೆ ಪೂರಾ ಕಾಯಿಗ ನೆಲಸಮ ಆಗೋದೆ. ಕುಂಬಳ ಬಳ್ಳಿಗೆ ತುಂಬಾ ಶೋಕ ಆದೆ. ಆಗ ದೇವಾಲಯದ ವ್ಯವಸ್ಥಾಪಕ ನಾಳೆನೆ ಈ ಬಳ್ಳಿನೆಲ್ಲಾ ಕತ್ತ್‌ರ್‌ಸೋಕುತಾ ಗ್ಯಾನ ಮಾಡ್ದೆ. ಪ್ರದಕ್ಷಿಣೆ ಹಾಕುವ ಭಕ್ತರಿಗೆ ಕಷ್ಟ ಅದೆತಾ. ಅದರ್ನ ಕೇಳಿ ಕುಂಬಳ ಬಳ್ಳಿಗೆ ಇನ್ನಿಲ್ಲದ ದುಃಖ ಉಂಟಾದೆ. ಅದ್ ಪುನಃ ಈಶ್ವರಸ ಪ್ರಾರ್ಥಿಸಿ ನನ್ನದ್ ಸರ್ವತಪ್ಪಾತ್ ದಯವಿಟ್ಟು ನನ್ನ ಕ್ಷಮಿಸಿ ಮೊದ್‌ಲಿನ ತರನೇ ಮಾಡ್‌ತ ಕೇಳ್ತ್. ಸಂತುಷ್ಟ ಈಶ್ವರ ಬಳ್ಳಿನ ಮೊದ್‌ಲಿನ ತರನೇ ಮಾಡ್ತ್. ಮತ್ತೆ ಹೇಳ್ತ್, ಅವರವರ ಗುಣಧರ್ಮಗಳಿಗೆ ಸರಿಯಾಗಿ ಸೃಷ್ಟಿಲಿ ಬೇರೆ ಬೇರೆ ಸ್ಥಾನಮಾನ ಇದ್ದದೆ. ಈ ಕಾರಣಕ್ಕಾಗಿ ಸ್ಪರ್ಧೆ ಮಾಡಿಕ್ಕಾಗದ್ ಎಲ್ಲರೂ ಅವರವರ ಕರ್ತವ್ಯನ ಮಾಡಿಕಂಡೋದರೆ ಜಗದ ಕಲ್ಯಾಣ ಆದೆತ್ತೇಳ್ತ್. ಈಶ್ವರನ ಮಾತ್ ಕೇಳಿಕುಂಬಳ ಬಳ್ಳಿಗೆ ಖುಷಿ ಆದೆ. ಮತ್ತೆ ಎಂದೂ ಅಸೂಯೆ ಮಾಡಿಕೆ ಹೋತ್ಲೆ.

-ಬಿಟ್ಟೀರ ಚೋಂದಮ್ಮ ಶಂಭು, ಬೆಂಗಳೂರು

ಶಾಲೆಲಿ ಹೇಳಿಕೊಟ್ಟದ್ದೆಲ್ಲಾ ನಿಜ ಅಲ್ಲ.
ಶೂನ್ಯ (ಸೊನ್ನೆ) ಜ್ಞಾನ -3

ಅಂಕೆಗಳ ಸ್ಥಾನನ ಆಧರಿಸಿ ಸಂಖೆಯ ಬೆಲೆ ನಿಶ್ಚಯ ಮಾಡುವ ಪದ್ಧತಿನೇ ಶೂನ್ಯದ ಸಂಶೋಧನೆಗೆ ಕಾರಣ ಆತ್. ZERO ತೇಳ್ದು ವಸ್ತುನ ಇಲ್ಲದಿರುವಿಕೆ (ಅಭಾವ)ನ ಸೂಚಿಸಿದೆ. ಸಂಸ್ಕೃತ ಭಾಷೆಯ ಶೂನ್ಯಮ್ ಶಬ್ಧ ಕೂಡ ಅಸ್ತಿತ್ವ ಇಲ್ಲದಿರುವಿಕೆಗೆ ಸೂಚಿಸಿದೆ. Zero ಶಬ್ಧದ ಮೂಲ ರೂಪ ಶೂನ್ಯವೇ. ಸಂಸ್ಕೃತದ ಈ ಶಬ್ಧ ಅರಬ್ಬಿ ಭಾಷೆಗೆ ಹೋಗಿ ಅಲ್ಲಿಂದ ಲ್ಯಾಟಿನ್ ಭಾಷೆಗೆ ಬಂದು ಮುಂದೆ ZERO ರೂಪನ ಪಡ್‌ತ್ ಅದ್ ಹೆಂಗೆತ್ತೇಳ್ರೆ?

ಸಂಸ್ಕೃತ → ಅರೇಬಿಕ್ → ಲಾಟಿನ್ → ಝೀರೊ
ಶೂನ್ಯಮ್→ಸಿಫರ್→ಜಿಫ್ರ/ ಸಿಫ್ರ→ZERO/CIPHER

ದಶಮಾನ ಪದ್ಧತಿನ ಆಧರಿಸಿ ಲೆಕ್ಕ ಮಾಡುವ ಕ್ರಮ ಬಂರ್ದಂದ ಹಾಗೂ ಅದರ ವಿಕಾಸದಿಂದಾಗಿ ಗಣಿತಕ್ಷೇತ್ರಲಿ ಅನೇಕ ಹೊಸ ಪ್ರಕ್ರಿಯೆಗ ಜನ್ಮ ತಳೆದೊ. ಅವು ಇಂದೂ ಸುರಕ್ಷಿತವಾಗಿ ವ್ಯವಹಾರಲಿ ಸನಾಉಟ್ಟು.

ವರ್ಗಮೂಲ ಮತ್ತೆ ಘನಮೂಲ

ನಮಿಗೆ ಬೇಕಾದ ಸಂಖೆದ್ ವರ್ಗಮೂಲವಾಗಲಿ ಘನಮೂಲವಾಗಲಿ ಕಂಡ್ ಹಿಡಿಯಕೆ ಆಧುನಿಕ ಗಣಿತ ಕ್ಷೇತ್ರಲಿ ಒಂದು ಪದ್ಧತಿನ ಅಳವಡಿಸಿಕೊಳ್ಳಲಾಗ್ಯುಟ್ಟು.

ವಾಸ್ತವಿಕವಾಗಿ ಈ ಪದ್ಧತಿನ ಐದನೇ ಶತಕಲಿದ್ದ ಆರ್ಯಭಟ ಸಂಶೋಧನೆ ಮಾಡ್ದ್ ಆರ್ಯಭಟನ ಶ್ಲೋಕ ಹಿಂಗೆ ಉಟ್ಟು.

ಭಾಗಂ ಹರೇದ್ವರ್ಗಾನ್ನಿತ್ಯಂ ದ್ವಿಗುಣೇನ ವರ್ಗಮೂಲೇನ।
ವರ್ಗಾದ್ವರ್ಗೇ ಶುದ್ಧೇ ಲಬ್ಧಂ ಸ್ಥಾನಾಂತರೇ ಮೂಲಮ್!!

ಈ ಪದ್ಧತಿ ಕ್ರಿ. ಶ.1613 ರವರೆಗೂ ಯೂರೋಪಿಯನ್ನರಿಗೆ ತಿಳಿದಿತ್ತಲೆ. ಹಿಂಗಿರ್‌ಕನ ಕೆಲವು ಶತಮಾನಗಳಷ್ಟ್ ಹಿಂದೆನೇ, ಭಾರತೀಯನೊಬ್ಬ ಕಂಡ್‌ಹಿಡ್ದ್ ಈ ಪದ್ಧತಿನ ವಿದೇಶಿಗ ಕಂಡ್‌ಹಿಡ್ದ್‌ದ್‌ತ (ಈ ವಸ್ತುಸ್ಥಿತಿ ಇಂದ್ ಹಲವರಿಗೆ ತಿಳ್‌ದಿದ್ದರೂ ಕೂಡ) ಇಂದಿಗೂ ಸಾರಿಕಂಡ್ ಮಕ್ಕಳಿಗೆ ಬೋಧನೆ ಮಾಡುವೆ. ನಮ್ಮ ಈ ಅಭಿಮಾನ ಶೂನ್ಯತೆನ ಏನ್‌ತ ಹೇಳೊಕು?

ತ್ರೈಮಾಸಿಕ ನಿಯಮ ಮತ್ತೆ ವ್ಯಸ್ತ ತ್ರೈರಾಶಿಕ ನಿಯಮನ ಅಂಕ ಗಣಿತ ಕ್ಷೇತ್ರಲಿ ಉತ್ಕೃಷ್ಟ ನಿಯಮಗತ ಪರಿಗಣಿಸುವೆ. ಈ ಎರಡೂ ನಿಯಮಗ ಪ್ರಾಚೀನ ಕಾಲದಿಂಧನೂ ಭಾರತಲಿ ಬಳಸಲ್ಪಟ್ಟವುಗಳೇ ಈ ಎರಡೂ ನಿಯಮಗ ಭಾರತಂದೇ ಪಶ್ಚಿಮ ದೇಶಕ್ಕೆ ಹೋದ್‌ತ ಹಲವು ವಿದ್ವಾಂಸಂಗ ಅಭಿಪ್ರಾಯ ಪಡ್‌ತೊಳೊ.

- ಬಿಟ್ಟೀರ ಚೋಂದಮ್ಮ

ಪತ್ರ ವಿಭಾಗ :-

To,
Kodagu
Sangathi

ಸಂಪಾದಕರಿಗೆ,

ಕೊಡಗು ಸಂಗಾತಿಯನ್ನು ಆಸಕ್ತಿಯಿಂದ ಓದುವ ಜನರಿಗೆ ನಿರಾಸೆಯಾದಂತಾಗಿದೆ. ಈ ಹಿಂದೆ ಪತ್ರ ವಿಭಾಗದಲ್ಲಿ ಬರೆದಂತಹ " ಮನಸ್ಸಿನ ಮಾರ್ಗ" ಎಂಬ Head line ನಲ್ಲಿ " ಮನಸ್ಸು" ಎಂಬುವುದು ಗಗನಕ್ಕೆ ಏರಬಲ್ಲದು, ಹಾಗೆಯೇ ಪಾತಳಕ್ಕೆ ತಳ್ಳಬಹುದು. ಪತ್ರಿಕೆ ಬಿಡಿ ಭಾಗಕ್ಕೆ 6 ರೂಗಳಂತೆ ಇದದ್ದು ಈವಾಗ 12 ರೂ ಕ್ಕೆ ಏರಲು ಕಾರಣವೇನು? ಪುಟ 20 ಇದ್ದರು ಕೆಲವು ಕಡೆಯಲ್ಲಿ ಕೊಡಗು ಸಂಗಾತಿ ಓದುಗರಿಗೆ ಪೆಟ್ಟು ಬಿದ್ದಂತಾಗಿದೆ. ಇನ್ನು ಕೊಡಗು ಸಂಗಾತಿ ನಮಗೆ ಬೇಡವೇ, ಬೇಡ ಎಂದು ಹೇಳುವವರು ಹೆಚ್ಚಾಗಿದೆ. "ಎತ್ತುವಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಇಟ್ಟಂತಾಗಿದೆ" ಕಾರಣ ಚೆಂದ ಕೊಡದಿದ್ದಲ್ಲಿ ಚೆಂದ ಕೊಟ್ಟವರಿಗೆ ಶಿಕ್ಷೆ ಏಕೆ? ಇದು ನ್ಯಾಯುವತವಲ್ಲ. ಇದಕ್ಕೆ ನೀವೇ ಕಾರಣ ಬದ್ಧರಾಗಿದ್ದೀರಿ ಎಂದು ನನ್ನ ಭಾವನೆ. ನೆಂಟರು, ಬಂಧು ಬಳಗದವರು ಮತ್ತು ಜನಾಂಗದವರು ಎಂದು ಚೆಂದ ವಸೂಲಿ ಆಗದಿದ್ದರು ಕೂಡ ಪತ್ರಿಕೆಯನ್ನು ಕಳುಹಿಸಿದಿರಿ, ಮತ್ತು ಅದು ಶಿಸ್ತು ಅಲ್ಲ ಹಾಗೂ ಕ್ರಮವು ಅಲ್ಲ. ವ್ಯವಹಾರದಲ್ಲಿ ಮುಂದುವರಿಯಬೇಕಾದರೆ ಜನಾಂಗ ಸ್ನೇಹ ನೋಡಬಾರದು. ನಿಮ್ಮ ಕೆಲಸದಲ್ಲಿ ತೊಡಕುಗಳು ಇದ್ದಲ್ಲಿ ಅದನ್ನು ನಾಜೂಕುವಾಗಿ ಮತ್ತು ತಾಳ್ಮೆಯಿಂದ ಜನರ ಮೆಚ್ಚುಗೆಯನ್ನು ಸಂಪಾದಿಸಬೇಕು. ನೆಚ್ಚಿನ ಕೊಡಗು ಸಂಗಾತಿಯರಿಗೆ ತುಂಬಾ ಬೇಸರ ತಂದಿದೆ. ಕೆಲವು ಜನರು ನನ್ನಲ್ಲಿ ಕೇಳುವಂತಾಗಿದೆ. ನಿಮ್ಮ ಈ ಅನಾನುಕೂಲಕ್ಕೆ ಕೆಲವೊಂದು ಮಾಹಿತಿಯನ್ನು ಪತ್ರಿಕೆಯಲ್ಲಿ ಪ್ರಕಟಿಸಿದ್ದಿರಾ ಆದರೆ ಅದು ಅವರಿಗೆ ಸ್ಪಂದಿಸುವಂತಿಲ್ಲಾ ಪತ್ರಿಕೆಗೆ 12 ರೂ ಅಂದರೆ ಜನರಲ್ಲಿ ಈವಾಗ ಆಸಕ್ತಿ ಇಲ್ಲದಂತಾಗಿದೆ ದಯವಿಟ್ಟು ಪತ್ರಿಕೆಯ ಬೆಲೆಯನ್ನು ಮೊದಲಿನಂತೆ ನವಿಕರಿಸಿ.

ಗೌಡ ಜನಾಂಗದ ಜನರಿಗೆ ಈವಾಗ ಸಂಗಾತಿಯ ಮೇಲೆ ಅಸೂಯೆ ಮತ್ತು ನೀರಾಸಕ್ತಿ ಕಾಣತೊಡಗಿದೆ ಮತ್ತು ಅದರಲ್ಲಿ ಬರುವ ಕತೆಗಳು ಸ್ವಾರಸ್ಯಗಳು ಕಡಿಮೆಯಾಗಿದೆ. ದಿನಪತ್ರಿಕೆ ಓದುವಂತಾಗಿದೆ.

ಕೆಲವೊಂದು ವಿಷಯಗಳು ದಿನಪತ್ರಿಕೆಯಲ್ಲಿ ಬರುವ ಸಾರಂಶಗಳು ಅಡಕವಾಗಿದೆ ಮತ್ತು ಮುಗ್ಧ ಜನರಿಗೆ ಆದರ್ಶವಾಗಿರುವ ಈ ಪತ್ರಿಕೆ ಎಲ್ಲೋ ಒಂದು ರೀತಿಯಲ್ಲಿ ತನ್ನ ಶಕ್ತಿಯನ್ನು ಕಳೆದುಕೊಳ್ಳುವುದೋ ಎಂಬ ಭಾವನೆಯು ಮೂಡಿಸುವಂತಾಗಿದೆ. ಗೌಡ ಜನರಿಗೆ ಆದರ್ಶವಾಗಿ ನಿಂತಿರುವ ಪ್ರೊ॥ ಪೂಜಾರಿ ವೊಣ್ಣಪ್ಪನವರು ಮತ್ತು ಡಾ॥ ಪುರುಷೋತ್ತಮನವರು ಮತ್ತು ಹೊದ್ದೇಟಿ ಭವಾನಿಶಂಕರ್ ಇವರ ಬರಹಗಳು ಕೂಡ ಕಡಿಮೆಯಾಗಿರುತ್ತದೆ ಕಾರಣವೇನು? ನನಗೂ ಕೂಡ ಕೆಲವೊಂದು ಕಥೆ ಕವನಗಳು ಪ್ರಕಟವಾಗದಿದ್ದಲ್ಲಿ ತುಂಬಾ ನಿರಾಶೆಯುಂಟಾಗಿದೆ. ಅದ್ದರಿಂದ ಬರಹಗಾರರಿಗೆ ಪ್ರೋತ್ಸಹ ನೀಡಿ ಎಂದು ನನ್ನ ಅಭಿಲಾಷೆ. ಕೊಡಗು ಸಂಗಾತಿಯು ಮಕ್ಕಳ ಮನಸ್ಸನ್ನು ಗೆಲ್ಲುವಂತಹ ಬರಹವಾಗಿರಬೇಕು. ಮಕ್ಕಳಲ್ಲಿ ಕೂಡ ನನಗೂ ಬರೆಯಬೇಕು ಎಂಬ ಸ್ಫೂರ್ತಿ ಹುಟ್ಟುವಂತದ್ದಾಗಿರಬೇಕೆಂದು ನನ್ನ ಆಸೆ.

"ಗೌಡ ಸ್ಮರಣೆ" ಎಂಬ ಕವನವು ಅರ್ಥಪೂರ್ಣವಾಗಿ ಸೊಗಸಾಗಿದೆ. ಕವನ ಬರೆದ ಪಟ್ಟಡ ಪ್ರಭಾಕರರಿಗೆ ನನ್ನ *ಧನ್ಯವಾದಗಳು.*

ಆಜಡ್ಕ ರಾಣಿ ಬಾಲಕೃಷ್ಣ, ಕುಶಾಲನಗರ.

ಉತ್ತರ ವಿಭಾಗ :

ಈ ಮೇಲಿನ ನಿಮ್ಮ ಅಭಿಪ್ರಾಯಗಳಿಗೆ ಈ ಹಿಂದೆಯೇ ನಾವುಗಳು ಸಾಕಷ್ಟು ಬಾರಿ ಸಮಜಾಯಿಕೆ ನೀಡಿದ್ದೇವು. ಹಲವು ಅನಿವಾರ್ಯ ಕಾರಣಗಳಿಂದ ಪತ್ರಿಕೆಯಲ್ಲಿ ಎಲ್ಲವನ್ನು ಪ್ರಕಟಿಸಲಾಗುವುದಿಲ್ಲ. ಬಿಡಿ ಪತ್ರಿಕೆಯ ಬೆಲೆ ರೂ 6/- ಇದ್ದರು ಸಹ ಆ ಬೆಲೆಗೆ ನೀಡಲು ಅಸಮರ್ಥರಾಗಿದ್ದೇವು. ಸದಸ್ಯತನದ ಹಣದ ಋಣ ಸಾಕಷ್ಟು ದೊಡ್ಡ ಮೊತ್ತವು ಪತ್ರಿಕೆ ನಿಲ್ಲಿಸಿದ ಚೆಂದಕಾರರ ಹತ್ತಿರವೇ ಇದೆ. ನಾಲ್ಕೈದು ಜ್ಞಾಪನ ಪತ್ರ ಹೋಗಿದೆ. ಹೋಗುತ್ತಿರುವು. ಇದೆ. ಪತ್ರಿಕೆಯ ಮುದ್ರಣವು ಸಾಕಷ್ಟು ಕಮ್ಮಿಯಾಗಿದ್ದು ಪತ್ರಿಕೆ ಇನ್ನೇನು ನಿಂತುಹೋಗುವುದೂ ಅನ್ನುವ ಹಂತಕ್ಕೆ ಬಂದಾಗ ವಿಧಿಯಿಲ್ಲದೆ ತಿಂಗಳಿಗೊಂದು ತೀರ್ಮಾನಿಸಿದ್ದೇವು. ಪತ್ರಿಕೆ ಪ್ರಾಕ್ಷಿಕ ಆದರೂ ಮಾಸಿಕವಾಗಿ ತರುತ್ತಿದ್ದೇವೆ. ಆದರೂ ಜನರಿಂದ ಬರಬೇಕಿದ್ದ ಹಣವು ಬರುತ್ತಿಲ್ಲ. ಪತ್ರಿಕೆಯ ಉಳಿಯು ಹಾಗೂ ಜನಾಂಗದ ಅಭಿವೃದ್ಧಿಯನ್ನೂ ಚಿಂತಿಸಿದಾಗ ಏನಾದರಾಗಲಿ ಪತ್ರಿಕೆಯು ನಿಲ್ಲಬಾರದೆನ್ನುವ ಏಕಾಭಿಪ್ರಾಯದಲ್ಲಿ ಕನಿಷ್ಠ ಈಗ ತಿಂಗಳಿಗೊಂದಂತೆ ನೀಡುತ್ತಿದ್ದೇವೆ. ಹಣ ಸರಾಗವಾಗಿ ಬಂದಲ್ಲಿ ತಿಂಗಳಿಗೆ ಕನಿಷ್ಠ 2 ಪತ್ರಿಕೆ ಮಾಡಬಹುದು. ಕೆಲವೊಮ್ಮೆ "ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ" ಅಷ್ಟೇ ಅಲ್ಲ ಅನಿವಾರ್ಯವಾದರೆ ಕರುವಿಗೂ ಸಹ ಬರೆ ಎಳೆಯಬೇಕಾಗುವುದು. ಅಂತೆಯೆ ನಮ್ಮ ವಿಧಿಯಾಗಿದೆ. ಇದಕ್ಕೇನು ಮಾಡಲು ಸಾಧ್ಯವಿಲ್ಲ.

ನಾವು ಯಾರಿಗೂ ಯಾರ ಇಚ್ಛೆಯ ವಿರುದ್ಧವಾಗಿ ಪತ್ರಿಕೆ ಕಳಿಸಿಲ್ಲ. ಜನರ ವಿನಂತಿ ಮೇರೆಗೆ ಪತ್ರಿಕೆ ಅವರಿಗೆ ಹೋಗುತ್ತಿದೆ. ನಂಬಿ ನಾವು ಕಳುಹಿಸುತ್ತೇವೆ. ಆ ನಂಬಿಕೆಯನ್ನು ಅವರು ಉಳಿಸಿಕೊಳ್ಳಲಿಲ್ಲ. ಹಣ ವಸೂಲಿ ಮನೆ ಮನೆಗೆ ಹೋಗಿ ಮಾಡುವುದು ಸಾಧುವೂ ಅಲ್ಲ. ಈಗ ನಮ್ಮ ಜನ ವಿದ್ಯಾವಂತರಲ್ಲವೇ Mo/DD/CASW ಮೂಲಕ ಕಳುಹಿಸಿಕೊಡಲು ಅಷ್ಟೇಕೆ ಉದಾಸೀನ ಗೌಡರು ಯಾವತ್ತು ಭಾರಿಯ ಜನಾಂಗವೆಂದು ಗೊತ್ತು. ನೆಂಟರು ನಾಡುಗಲೆಂದು ಬರುವಾಗ 500-1000 ಖರ್ಚು ಮಾಡುವುದಿಲ್ಲವೇ, ಅದನ್ನೇ ಉಳಿಸಿ ಇತ್ತ ಸಂಗಾತಿಗೆ ರವಾನಿಸಿದರೆ ಆಗುವುದಿಲ್ಲವೆ? ನಾವೇನು ಭಿಕ್ಷೆ ಕೇಳುತ್ತಿಲ್ಲ. ನಮ್ಮ ಪತ್ರಿಕೆಯ ಹಣವನ್ನಷ್ಟೇ ಕೇಳುತ್ತಿದ್ದೇವೆ. ಅಷ್ಟೆ.

ಸರ್ಕಾರದ ನೀತಿಯ ಪ್ರಕಾರ 50% ಮಾಹಿತಿ ಇತ್ತೀಚೆಗಿನ ಸುದ್ದಿಯಾಗಿರಬೇಕು. ಆಗ ನಾವುಗಳಿಗೆ ಪೋಸ್ಟ್ ಕನ್‌ಸಿಸನ್ 5 ರೂಪಾಯಿಯಿಂದ 0.25 ಪೈಸೆಗೆ ಸಿಗುತ್ತದೆ. ಇಲ್ಲವಾದರೆ ಖಾಸಗಿ ಪತ್ರಿಕೆಯಾಗಿರುವುದು. ಆಗ ಬಹಳ ಕಠಿಣವಾಗಿ ಪತ್ರಿಕೆ ನಡೆಸಲು ಆಗಲಿಕ್ಕಿಲ್ಲ. ಆ ಪ್ರಯುಕ್ತ ಬೇರೆ ಪತ್ರಿಕೆಗಳಲ್ಲಿ ಬಂದವುಗಳನ್ನು ಹಾಕಲೇಬೇಕಾಗುತ್ತೆ. 5000 ಪತ್ರಿಕೆ ನಡೆಸಿದರೆ ನೀವು ತಿಳಿಸಿದಂತೆ ಖಂಡಿತ ದರ ಕುಂಠಿತಗೊಳಿಸಲು ಸಾಧ್ಯವಿದೆ. ಇಲ್ಲವಾದರೆ ಇದೇ ಬೆಲೆ ಇನ್ನು ಮುಂದೆಯು ಸಹ ಮುಂದುವರಿಯುತ್ತೆ. ಈಗಿನ ಚೆಂದದಾರರು ಓದುಗರು ಸಹಕರಿಸಿ ಪತ್ರಿಕೆ ಅಭಿವೃದ್ಧಿಗೆ ಖಂಡಿತ ಸಹಾಯ ಮಾಡಬೇಕಾಗಿ ವಿನಂತಿಸುತ್ತೇವೆ. ಪತ್ರಿಕೆ ಮುದ್ರಣ ಖರ್ಚು

ಇತರ ವೆಚ್ಚಗಳನ್ನು ಲೆಕ್ಕ ಹಾಕಿದರೆ ರೂ 12/- ಸಾಲದು ಅಂತಿದೆ ಪರಿಸ್ಥಿತಿ. ಪತ್ರಿಕೆ ನಡೆಸುವವರಿಗೆ ಗೊತ್ತು ಅವುಗಳ ಪರಿಪಾಠ. ಟೀಕೆ ಟಿಪ್ಪಣಿ ಮಾಡುವುದು ಬಹಳ ಸುಲಭ. ಕಾರಣ ಪೆನ್ನು ಪೇಪರ್ ಸಾಕಲ್ಲವೇ? ನಾವು ಪ್ರತಿಯೊಬ್ಬರ ಲೇಖನಕ್ಕೂ ಅರ್ಹವಾಗಿದ್ದಲ್ಲಿ ಖಂಡಿತ ಆದ್ಯತೆ ನೀಡುತ್ತೇವೆ. ಆಯ್ದು ಆಯ್ದು ವರ್ಷಕ್ಕೆ ನಾಲ್ಕೈದು ಲೇಖನಗಳನ್ನಾದರು ಹಾಕುತ್ತಿರುತ್ತೇವೆ. "ಒಂದು ಕಣ್ಣಿಗೆ ಸುಣ್ಣ ಇನ್ನೊಂದು ಕಣ್ಣಿಗೆ ಬೆಣ್ಣೆ"ಸಂಗಾತಿ ಎಂದು ಮಾಡಿಲ್ಲ. ಇನ್ನೂ ಮುಂದಕ್ಕೂ ಮಾಡುವುದಿಲ್ಲ ಎಂಬ ಭರವಸೆಯೊಂದಿಗೆ ಜನಾಂಗವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಲು ಪತ್ರಿಕಾ ಮಾಧ್ಯಮದಿಂದ ಮಾತ್ರ ಸಾಧ್ಯ ಎಂಬ ನಿಲುವಿನಲ್ಲಿ ನಾವು ಮುಂದೆ ಸಾಗೋಣ. ತಮ್ಮ ಸಹಕಾರವಿರಲಿ -ಜೈ ಗೌಡ ಬಾಂಧವರೇ.

ಪಟ್ಟಡ ಪ್ರಭಾಕರ, ಗೌರವ ಸಂಪಾದಕ, ಕೊಡಗು ಸಂಗಾತಿ.

ಕೊಡಗು ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘ, ಮೈಸೂರು ವಾರ್ಷಿಕ ಮಹಾಸಭೆ

ದಿನಾಂಕ 07-07-02 ನೇ ಭಾನುವಾರದಂದು ಸರಿಯಾಗಿ 10-00 ಗಂಟೆಗೆ ಕೊಡಗು ಗೌಡ ವಿದ್ಯಾರ್ಥಿ ನಿಲಯ ಜಯಲಕ್ಷ್ಮಿಪುರಂ, ಮೈಸೂರಿನಲ್ಲಿ ಕೊಡಗು ಗೌಡ ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘದ ವಾರ್ಷಿಕ ಮಹಾ ಸಭೆಯನ್ನು ನಡೆಸಲಾಯಿತು.

ಸಂಘದ ಉಪಾಧ್ಯಕ್ಷರಾದ ಕಯ್ಯಮುಡಿ ರಾಮಪ್ಪನವರು ಸ್ವಾಗತ ಕೋರಿ ಸಭೆಗೆ ಚಾಲನೆ ನೀಡಿದರು.

ಸಂಘದ ಕಾರ್ಯದರ್ಶಿಯವರಾದ ಕೊಂಬಂಡ ಭೀಮಯ್ಯನವರು ಆಡಳಿತ ಮಂಡಳಿಯ ವರದಿಯನ್ನು ಓದಿದರು, ಹಾಗೂ 2001-2002ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಸದಸ್ಯರು ಗಳಿಂದ ಲೆಕ್ಕವನ್ನು ಪರಿಶೋಧಿಸಲಾಗಿ ಜಮಾ ಖರ್ಚುಗಳ ಬಗ್ಗೆ ಚರ್ಚೆ ನಡೆದು ನಂತರ ಸಭೆಯಲ್ಲಿ ಮಂಡಿಸಿ ಅನುಮೋದನೆ ಕೋರಲಾಯಿತು. ಸಂಘದ ಸದಸ್ಯರಾದಜ ಕೇಟೋಳಿರ ಕೇಶವಯ್ಯನವರು ಲೆಕ್ಕ ಪರಿಶೋಧನಾ ವರದಿಯನ್ನು ಅಂಗೀಕರಿಸಿದರೆ, ಮೇರ್ಕಜೆ ವಿಶ್ವನಾಥರವರು ಅನುಮೋದಿಸಿದರು.

ಆಡಳಿತ ಮಂಡಳಿಯ ಆಯ್ಕೆ :

2002-2003 ನೇ ಸಾಲಿಗೆ ಮಹಾಸಭೆಯು ಈ ಕೆಳಕಂಡವರನ್ನು ಆಡಳಿತ ಮಂಡಳಿಗೆ ಆಯ್ಕೆ ಮಾಡಿತು.

ತಡಿಯಪ್ಪನ ಕುಮಾರ ಜಯನವರನ್ನು ಅಧ್ಯಕ್ಷರನ್ನಾಗಿಯೂ,

ಕಯ್ಯುಮುಡಿ ರಾಮಪ್ಪನವರನ್ನು ಉಪಾಧ್ಯಕ್ಷರನ್ನಾಗಿಯೂ,

ಕೊಂಬಾರನ ಸುಬ್ಬಯ್ಯನವರನ್ನು ಕಾರ್ಯದರ್ಶಿಯನ್ನಾಗಿಯೂ,

ಕರ್ಣಯ್ಯನ ಮುದ್ದಯ್ಯನವರನ್ನು ಖಜಾಂಜಿಯನ್ನಾಗಿಯೂ ಹಾಗೂ ನಿರ್ದೇಶಕರುಗಳಾಗಿ, **ಕರ್ಣಯ್ಯನ ಲಕ್ಷ್ಮಣ**, **ಕೊಂಬಂಡ ಭೀಮಯ್ಯ**, **ಕಾಳೇರಮ್ಮನ ನಾಣಯ್ಯ**, **ಅಂಚೆಮನೆ ಗಣೇಶ**, **ಮುಕ್ಕಾಟಿ ತಮ್ಮಯ್ಯ**, **ಕರ್ಣಯ್ಯನ ಮನೋಹರ** ಹಾಗೂ ಮಡಿಕೇರಿಯಿಂದ **ಕೂಡಕಂಡಿ ಅಪ್ಪಾಜಿ**ಯನ್ನು ಆರಿಸಲಾಯಿತು.

ಪಟ್ಟಡ ಪ್ರಭಾಕರರವರನ್ನು ಸಂಘದ ಖಾಯಂ ಸಲಹೆಗಾರರನ್ನಾಗಿ ಮುಂದುವರಿಯುವಂತೆ ಸಂಘದ ಸದಸ್ಯರ ಒತ್ತಾಯದ ಮೇರೆಗೆ 2002-2003 ನೇ ಸಾಲಿಗೆ ಆರಿಸಲಾಯಿತು.

ನಂತರ ತುಂತಜೆ ಉಲ್ಲಾಸ, ಸಿದ್ದೇಟಿ ಪುಟ್ಟಯ್ಯ ಮೊಟ್ಟನ ಜೋಯಪ್ಪ, ಮಡಿಯನ ಮಾಚಯ್ಯ ಕೊಂಬನ ಬಿದ್ದಪ್ಪ, ಮೇರ್ಕಜೆ ವಿಶ್ವನಾಥ ಚೆಟ್ಟಿಮಾಡ ಜನಾರ್ಧನ ಇವರುಗಳನ್ನು ಮುಂದಿನ ಸಾಲಿನ ಸಕ್ರೀಯ ಕಾರ್ಯಕರ್ತರನ್ನಾಗಿ ಆರಿಸಲಾಯಿತು.

ಇತರ ವಿಷಯಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮೇರ್ಕಜೆ ವಿಶ್ವನಾಥರವರು, ಕರ್ಣಯ್ಯನ ಲಕ್ಷ್ಮಣರವರು, ಕೂಡಕಂಡಿ ಅಪ್ಪಾಜಿಯವರು ಅಲ್ಲದೆ ಕಾಳೇರಮ್ಮನ ನಾಣಯ್ಯನವರು ಮಾತನಾಡಿದರು. ಈ ಎಲ್ಲಾ ಸದಸ್ಯರ ಒತ್ತಾಯವೆಲ್ಲಾ ಒಂದೇ ಆಗಿದ್ದು ಸರ್ವ ಸದಸ್ಯರು ತಮ್ಮ ತಮ್ಮ ಸದಸ್ಯತನದ ಕರ್ತವ್ಯ ಅರಿತು ಸಭೆಗೆ ಹಾಜರಾಗಿ ಸಭೆಗೆ ಸೂಕ್ತ ಸಲಹೆ ಸೂಚನೆ ನೀಡಬೇಕೆಂದು, ಅಲ್ಲದೆ ಸಂಘದ ಏಳಿಗೆಗೆ ಸಂಪೂರ್ಣ ಬದ್ಧರಾಗಿರಬೇಕೆಂದು ಸಲಹೆ ನೀಡಿದರು.

ಸದಸ್ಯರಾದ ಕರ್ಣಯ್ಯನ ಲಕ್ಷ್ಮಣ, ಕೂಡಕಂಡಿ ಅಪ್ಪಾಜಿ, ಹಾಗೂ ಪಟ್ಟಡ ಪ್ರಭಾಕರರವರು ಮಾತನಾಡಿ ಸಂಘದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲು ಕರೆ ನೀಡಿದರಲ್ಲದೆ ಸದಸ್ಯರ ಗೈರು ಹಾಜರಿನ ಬಗ್ಗೆ ಅಸಮಾಧಾನ ವ್ಯಕ್ತ ಪಡಿಸಿ ಮುಂದೆ ಹೀಗಾಗದಂತೆ ಸರಿಪಡಿಸಿಕೊಳ್ಳಬೇಕೆಂದು ಸಲಹೆ ಇತ್ತರು.

ಸಭೆಯಲ್ಲಿ ನೆರೆದಿದ್ದ ಸರ್ವ ಸದಸ್ಯರು ಒಕ್ಕೊರಲಿನ ತಿದ್ದುಪಡಿಯನ್ನು ತಂದು ಸಂಘದ ಹೆಸರು "ಕೊಡಗು ಗೌಡ ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘ (ರಿ)" ಇದ್ದದನ್ನು ಮುಂದೆ ಈ ಹೆಸರು "ಕೊಡಗು ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘ" ಇರುವಂತೆ ತಿದ್ದುಪಡಿ ತರಲಾಯಿತು. ನಂತರ ಬೈಲಾದಲ್ಲಿ ನಮೂದಿಸಿರುವ 9 ಉದ್ದೇಶಗಳ ಜೊತೆಯಲ್ಲಿ 10ನೇಯದಾಗಿ ಅನಾಥ ಮಕ್ಕಳನ್ನು ಸಂಘ ದತ್ತು ತೆಗೆದುಕೊಂಡು ಅವರ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವುದು ಅಲ್ಲದೆ,ಸಮಾಜದ ಕಡು ಬಡ ಪ್ರತಿಭಾವಂತ ಮಕ್ಕಳ ವಿದ್ಯಾಭ್ಯಾಸಕ್ಕೆ ಹಾಗೂ ಇತರ ಚಟುವಟಿಕೆಗಳಿಗೆ ಸಹಾಯ ಮಾಡುವುದು. ಹಾಗೂ ಅಂಧ ಮತ್ತು ವಿಕಲ ಮತ್ತು ವಿಧವೆಯರ ಏಳಿಗೆಗೆ ದುಡಿಯುವುದು ಆಗಿದೆ. ಈ ಉದ್ದೇಶವನ್ನು ಹೆಚ್ಚುವರಿಯಾಗಿ ಸೇರಿಸಿಕೊಳ್ಳಲು ಸಭೆ ಸರ್ವಾನುಮತದ ಒಪ್ಪಿಗೆ ಸೂಚಿಸಿತು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಸಂಘದ ಹಾಲಿ ಅಧ್ಯಕ್ಷರಾದ ತಡಿಯಪ್ಪನ ಕುಮಾರ ಜಯನವರು ಮಾತನಾಡಿ ಸರ್ವ ಸದಸ್ಯರು ಕರ್ತವ್ಯ ಪ್ರಜ್ಞೆ ಬೆಳೆಸಿಕೊಳ್ಳಬೇಕೆಂದು, ಸಂಘದ ಅಭಿವೃದ್ಧಿಗೆ ಎಲ್ಲಾ ಸದಸ್ಯರು ಹೆಗಲುಕೊಟ್ಟು ದುಡಿಯಬೇಕೆಂದು, ಮುಂದಿನ ಸಾಲಿನಲ್ಲಿ ಸಂಘದ ಆರ್ಥಿಕ ಅಭಿವೃದ್ಧಿಗೆ ಎಲ್ಲರು ಸರಿ ಸಮಾನವಾಗಿ ದುಡಿಯಬೇಕೆಂದು ವಿನಂತಿಸಿದರು. ಮುಂದಿನ ಸರ್ವ ಸದಸ್ಯರ ಸಭೆಗೆ ಪ್ರತಿಯೊಬ್ಬರು ಹಾಜರಾಗಿ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡು ಹೋಗಬೇಕೆಂದು ಸಲಹೆ ಇತ್ತರಲ್ಲದೆ ಮುಂದಿನ ನವಂಬರ್ ಸುಮಾರಿಗೆ ಮಕ್ಕಳು ವಯೋವೃದ್ಧರಿಗೆ "ಕ್ವಿಜ್" ಸ್ಪರ್ಧೆಯನ್ನಿಡುವ ಅಭಿಪ್ರಾಯ ವ್ಯಕ್ತ ಪಡಿಸಿದರು.

ಕೊಂಬಂಡ ಭೀಮಯ್ಯನವರು ನೆರೆದಿದ್ದ ಸರ್ವ ಸದಸ್ಯರುಗಳಿಗೆ ವಂದನೆಯನ್ನು ಸಲ್ಲಿಸಿದರು. ಕೊನೆಯಲ್ಲಿ ರಾಷ್ಟ್ರಗೀತೆಯೊಂದಿಗೆ ಸಭೆಯು ಬರಖಾಸ್ತಾಯಿತು.

ವರದಿ: ಕೊಂಬಂಡ ಭೀಮಯ್ಯ, ಮೈಸೂರು.

ಗೌಡರು : 3 (A) 1 (j)

ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತರ ಹಿಂದುಳಿದ ವರ್ಗಗಳ ಪ್ರವರ್ಗ III (ಎ) ಗೌಡ (Gowda) ಜಾತಿ.

ಕೊಡಗು ಸಂಗಾತಿ ಪತ್ರಿಕೆಯಲ್ಲಿ ಸಂಪುಟ 2 ಸಂಚಿಕೆ 20 ಅಕ್ಟೋಬರ್ 16-31-1998 ಪುಟ 8-9 ರಲ್ಲಿ ಪ್ರಕಟವಾದ " ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಹಿಂದುಳಿದ ಪಂಗಡ ಗೌಡ ಪ್ರಜೆಗಳು" ಬಗ್ಗೆ ನಾನು ಸರಕಾರದ ಆದೇಶಗಳನ್ನು " ಗೌಡ ಜಾತಿ"ಯವರ ತಿಳುವಳಿಕೆಗೆ ನೀಡಿದ್ದೆ.

ಕರ್ನಾಟಕ ಸಮಾಜ ಕಲ್ಯಾಣ ಸಚಿವಾಲಯ, ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳ ಜನಾಂಗದವರಿಗೆ ಹೊಸ ಕೆನೆ ಪದರ ಮತ್ತು ಭಾರತದ ಸಂವಿಧಾನದ ಅನುಚ್ಛೇದ 15(4) ರಂತೆ ವಿದ್ಯಾ ಸಂಸ್ಥೆಗಳಲ್ಲಿ ಪ್ರವೇಶ ಮತ್ತು ಅನುಚ್ಛೇದ 16(4) ರ ಮೇರೆಗೆ ನೇಮಕಾತಿಗಳಲ್ಲಿ ಮೀಸಲಾತಿಗಳ ಸ್ಥಾನ ಮತ್ತು ಹುದ್ದೆಗಳ ವಿಷಯ ಸರಕಾರಿ ಆದೇಶ ಸಂಖ್ಯೆ : ಸಕಇ: 225 : ಬಿಸಿಎ: 2000, ಬೆಂಗಳೂರು ದಿನಾಂಕ : 30-3-2002 ರಲ್ಲಿ ಹೊರಡಿಸಲಾಗಿದ್ದು ಹಾಗೂ ವರ್ಗೀಕರಿಸಲಾದ ಜಾತಿಗಳ ಪಟ್ಟಿಯಲ್ಲಿ ಅನುಬಂಧ -1 ಪ್ರವರ್ಗ III (ಎ) ಕ್ರಮ ಸಂಖ್ಯೆ 1(j) " ಗೌಡ (Gouda) ಗೌಡ (Gowda) ಎಂದು ಬರೆದಿದ್ದು, ಸರ್ಕಾರದ ಅಧಿಕಾರಿಗಳು ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಗೌಡ (Gouda) : ಗೌಡ (Gowda) ಜಾತಿಯವರನ್ನು ಇತರೆ ಹಿಂದುಳಿದ ವರ್ಗಗಳ ಜನಾಂಗದ ಪಟ್ಟಿಗೆ ಸೇರಿಸಲಾಗಿದ್ದು, ಭಾರತ ಸಂವಿಧಾನದ ಅನುಚ್ಛೇದ 15 (4) ರಂತೆ ವಿದ್ಯಾ **ಸಂಸ್ಥೆಗಳಲ್ಲಿ ಪ್ರವೇಶ** ಮತ್ತು ಅನುಚ್ಛೇದ 16(4)ರ ಮೇಲೆಗೆ **ನೇಮಕಾತಿಗಳಲ್ಲಿ ಮೀಸಲಾತಿಗಳ ಸ್ಥಾನ** ಮತ್ತು **ಹುದ್ದೆಗಳಿಗೆ** ಗೌಡ ಜಾತಿಯವರಿಗೆ ಅವಕಾಶ ಕೊಟ್ಟಿರುತ್ತಾರೆ.

1016 ಕರ್ನಾಟಕ ರಾಜ್ಯ ಪತ್ರ, ಗುರುವಾರ, ಏಪ್ರಿಲ್ 11,2002 ಸಮಾಜ ಕಲ್ಯಾಣ ಸಚಿವಾಲಯ
ಸರ್ಕಾರಿ ಆದೇಶ ಸಂಖ್ಯೆ : ಸಕ ಇ ಬಿಸಿಎ : 2000, ಬೆಂಗಳೂರು, ದಿನಾಂಕ : 30-3-2002
ಅನುಬಂಧ -I (ಎಕ್ಸಾಟ್ರ್ಯಾಕ್ಟ್)
ಪ್ರವರ್ಗ - III (ಎ)

ಕ್ರ.ಸಂ.		ಜಾತಿಯ ಹೆಸರು	ಕ್ರ.ಸಂ.		ಜಾತಿಯ ಹೆಸರು
1)	a)	ಒಕ್ಕಲಿಗ	2)	-	ಕೊಡಗರು
	b)	ವಕ್ಕಲಿಗ			
	c)	ಸರ್ಪ ಒಕ್ಕಲಿಗ	3)	a)	ಬಲಿಜ
	d)	ಹಳ್ಳಿಕಾರ್ ಒಕ್ಕಲಿಗ		b)	ಬಲಜಿಗ:ಬಣಜಿಗ:ಗೌಡ ಬಣಜಿಗ
	e)	ನಾಮಧಾರಿ ಒಕ್ಕಲಿಗ		c)	ನಾಯ್ಡು
	f)	ಗಂಗಡಿಕಾರ್ ಒಕ್ಕಲಿಗ		d)	ತೆಲಗ ಬಲಿಜ:ತೆಲಗ ಬಣಜಿಗ:
	g)	ದಾಸ ಒಕ್ಕಲಿಗ		e)	ಶೆಟ್ಟಿ ಬಲಿಜ: ಶೆಟ್ಟಿ ಬಣಜಿಗ : ಬಣಜಿಗ ಶೆಟ್ಟಿ
	h)	ರೆಡ್ಡಿ ಒಕ್ಕಲಿಗ			
	i)	ಮರಸು ಒಕ್ಕಲಿಗ		f)	ದಾಸರ ಬಲಿಜ : ದಾಸರ ಬಲಿಜಿಗ : ದಾಸರ ಬಣಜಿಗ : ದಾಸ ಬಣಜಿಗ
	j)	ಗೌಡ (Gouda) ಗೌಡ (Gowda)			
	k)	ಹಳ್ಳಿಕಾರ್			
	l)	ಕುಂಚಿಟಿಗ		g)	ಕಸ್ಬನ್
	m)	ಗೌಡ		h)	ಮುನ್ನೂರು : ಮುನ್ನಾರೆ : ಮುನ್ನೂರೆ ಕಾಪು
	n)	ಕಾಪು			
	o)	ಹೆಗ್ಗಡೆ		i)	ಬಳೆಗಾರ : ಬಳೆ ಬಣಜಿಗ : ಬಳೆ ಬಲಿಜಿಗ : ಬಳೆ ಬಟ್ಟೆ : ಬಣಗಾರ
	p)	ಕಮ್ಮ			
	q)	ರೆಡ್ಡಿ		j)	ರೆಡ್ಡಿ (ಬಲಿಜ)
	r)	ಗೌಂಡರ್		k)	ಜನಪ್ಪನ್
	s)	ನಾಮಧಾರಿ ಗೌಡ		l)	ಉಪ್ಪಾರ (ಬಲಿಜ)
	t)	ಉಪ್ಪಿನ ಕೊಳಗ : ಉತ್ತಮ ಕೊಳಗ		m)	ತುಲೇರು (ಬಲಿಜ)

ಹತ್ತು ಕುಟುಂಬ ಹದಿನೆಂಟು ಗೋತ್ರದವರು ಈಗ ಹಿಂದುಳಿದ ವರ್ಗಗಳ ಪ್ರವರ್ಗ 3 (A) 1 (j) ಪಟ್ಟಿಯಲ್ಲಿದ್ದಾರೆ.

1018 ಕರ್ನಾಟಕ ರಾಜ್ಯ ಪತ್ರ ಗುರುವಾರ ಏಪ್ರಿಲ್ 11,2002 ಭಾಗ -1 ಸಮಾಜ ಕಲ್ಯಾಣ ಸಚಿವಾಲಯ, ಅನುಬಂಧ - II ಹೊಸ ಸಮಗ್ರ ಕೆನೆ ಪದರ ಸರ್ಕಾರಿ ಆದೇಶದಂತೆ ಸಂಖ್ಯೆ : ಸಕಇ: 225 : ಬಿಸಿಎ 2000 ದಿನಾಂಕ : 30-3-2002

ಹೊಸ ಸಮಗ್ರ ಕೆನೆ ಪದರ ವಿಷಯ ಸರ್ಕಾರಿ ಆದೇಶ ಸಂಖ್ಯೆ : ಸಕಇ : 225 ಬಿಸಿಎ : 2000 ದಿನಾಂಕ : 30-3-2002 ರಲ್ಲಿ ಹೊರಡಿಸಿದ್ದು, ಸಂವಿಧಾನದ ಪರಿಚ್ಛೇದ 15(4) ಹಾಗೂ 16(4) ರ ಅಡಿಯಲ್ಲಿ ಇತರೆ ಹಿಂದುಳಿದ ವರ್ಗಗಳ ಪ್ರವರ್ಗ - III (ಎ) 1(j) ಗೌಡ (Gouda) ಗೌಡ (Gowda) ಜಾತಿ ಕೆನೆ ಪದರಕ್ಕೆ ಸಂಬಂಧಿಸಿದಂತೆ ಹಾಲಿ ನೀಡಲಾಗಿರುವ ಮೀಸಲಾತಿಯ ಪ್ರಕಾರ ಈ ಕೆಳಕಂಡ ವ್ಯಕ್ತಿಗಳ ಮಕ್ಕಳಿಗೆ ಮೀಸಲಾತಿ ಸ್ಥಾನಗಳಿಗೆ ಅಥವಾ ಹುದ್ದೆಗಳಿಗೆ ಅರ್ಹರಾಗಿರುವುದಿಲ್ಲ.

ಅನುಬಂಧ - IIರ ಅಡಿಯಲ್ಲಿ (ಎಕ್ಸಾಟ್ರ್ಯಾಕ್ಟ್)

3) ಅಭ್ಯರ್ಥಿಯ ಮತ್ತು ಅವರ ತಂದೆ, ತಾಯಿ, : ಪೋಷಕರ ವಾರ್ಷಿಕ ಒಟ್ಟು ಆದಾಯ (ಗ್ರಾಸ್ ಇನ್‌ಕಂ) ರೂ 2.00 ಲಕ್ಷ ಮೀರಿದ್ದರೆ.

4) ಅಭ್ಯರ್ಥಿಯ ಮತ್ತು ಅವರ ತಂದೆ, ತಾಯಿ : ಪೋಷಕರು ಸೇರಿದಂತೆ ಕರ್ನಾಟಕ ಭೂಸುಧಾರಣಾ ಕಾಯ್ದೆ 1961 ರಡಿಯಲ್ಲಿ ನಿಗಧಿ ಪಡಿಸಿರುವ 10 ಯೂನಿಟ್ ಕೃಷಿ ಭೂಮಿಗಿಂತ ಹೆಚ್ಚು ಕೃಷಿ ಭೂಮಿ ಹೊಂದಿರುವವರ ರಾಗಿದ್ದರೆ - ಪ್ಲಾಂಟೇಷನ್ ಬೆಳೆಗಳನ್ನು ಬೆಳೆಯುವ ಭೂಮಿಗೆ ಸಂಬಂಧಿಸಿದಂತೆ 20 ಎಕರೆಗಿಂತ ಹೆಚ್ಚು ಭೂಮಿಯನ್ನು ಹೊಂದಿರುವವರು.

ಆದರೆ, ಕೊಡಗು ಜಿಲ್ಲೆಯಲ್ಲಿ ಪ್ಲಾಂಟೇಷನ್ ಬೆಳೆಗಳನ್ನು ಬೆಳೆಯುವ ಭೂಮಿಗೆ ಸಂಬಂಧಿಸಿದಂತೆ 2.5 ಎಕರೆಗಿಂತ ಹೆಚ್ಚು ಭೂಮಿಗೆ ಸಿ. ಆರ್. ಸಿ. ಹೊಂದಿರುವ ಜನಾಂಗದ ವ್ಯಕ್ತಿಗಳ ಮಕ್ಕಳು (ಗೌಡರಿಗೆ ಮಾತ್ರವಲ್ಲ) ಕೆನೆ ಪದರಕ್ಕೆ ಸಂಬಂಧಿಸಿದಂತೆ ಹಾಲಿ ನೀಡಲಾಗಿರುವ ಮೀಸಲಾತಿಯ ಪ್ರಕಾರ ಮೀಸಲಾತಿ ಸ್ಥಾನಗಳಿಗೆ ಅಥವಾ ಹುದ್ದೆಗಳಿಗೆ ಅರ್ಹರಾಗಿರುವುದಿಲ್ಲ, ಈ ವಿಷಯ ಅಯಾಯ : ಜಾತಿ ಪ್ರಮಾಣ ಪತ್ರಗಳ ಸಿಂಧುತ್ವ ಪ್ರಮಾಣ ಪತ್ರ ಕಮಿಟಿ ಛೇರ್‌ಮನ್ ಕೊಡಗು ಜಿಲ್ಲೆಯ ಉಪ ಆಯುಕ್ತರು (ಡೆಪ್ಯೂಟಿ ಕಮೀಶನರ್) ತೀರ್ಮಾನಿಸಿದ್ದು ಎಂಬುದು ನಾನು ತಿಳಿಯುತ್ತೇನೆ. ಆದರೆ ಕೊಡಗು ಜಿಲ್ಲೆಯ 2.5 ಎಕರೆ ಭೂಮಿಯು ಇತರೆ ಜಿಲ್ಲೆಗಳ 20 ಎಕರೆ ಭೂಮಿಗೆ ಸರಿ ಸಮವಾಗಿರುವುದೇ? ಅಥವಾ ಈ ಭೂಮಿಯ ವಾರ್ಷಿಕ ಒಟ್ಟು ಆದಾಯ (ಗ್ರಾಸ್ ಇನ್ ಕಂ) ರೂ. 2.00ಲಕ್ಷ ಮೀರಬಹುದಾ? ಸಂಬಂಧ ಪಟ್ಟವರು ಈ ಸಮಸ್ಯೆಯ ಬಗ್ಗೆ ಪ್ರಯತ್ನ ಪಟ್ಟು ಸರಿ ಪಡಿಸುವರೇ? ಹೆಚ್ಚಿನ ವಿವರಗಳಿಗೆ ಮೇಲ್ಕಂಡ ಕಛೇರಿಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಕೇಂದ್ರ ಸರ್ಕಾರದ ಹಿಂದುಳಿದ ವರ್ಗಗಳ ಕಮೀಷನ್ ವರದಿ 1980 (ಮಂಡಲಿ ಕಮೀಷನ್ ರಿಪೋರ್ಟ್) ರಲ್ಲಿ ಇತರೆ ಹಿಂದುಳಿದ ಜಾತಿಗಳ ವರ್ಗಗಳ ಕರ್ನಾಟಕದ ಪಟ್ಟಿಯಲ್ಲಿ ಗೌಡ ಜಾತಿಯನ್ನು ಸೇರಿಸಿರುವುದಿಲ್ಲ. ಈ ವರದಿಯು ಕರ್ನಾಟಕದ ಪಟ್ಟಿ ಪುಟ 188 ಕ್ರ.ಸಂ. :327 ಒಕ್ಕಲಿಗ (Vokkaliga) (Rural areas only) ಎಂಬುದಾಗಿ ಬರೆದಿರುತ್ತದೆ. ಇತರ ಪ್ರಾಂತಗಳಲ್ಲಿ ಕೇರಳ ಮತ್ತು ತಮಿಳುನಾಡು Gounder, Bihar & Andhra Pradesh, Goudu, Orissa-Goud, Goa-Gauda, Madya Pradesh - gond ಎಂಬುದಾಗಿ ಬರೆದಿರುತ್ತದೆ. ಆದುದರಿಂದ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಗೌಡ (Gowda) ಜಾತಿ, ಕೇಂದ್ರ ಸರ್ಕಾರದ ಇತರೆ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸಂಬಂಧಪಟ್ಟವರು ಶ್ರಮವಹಿಸಿ ಬರೆಯಿಸಲು ಪ್ರಯತ್ನಪಟ್ಟು, ಸರಿ ಪಡಿಸುವರೇ? ನನ್ನ ಹಿಂದಿನ ವರದಿಯಲ್ಲಿ ತಿಳಿಸಿರುವ ಕುಂದು ಕೊರತೆಗಳನ್ನು ಸರಿ ಪಡಿಸಿದ, ಸಂಬಂಧಪಟ್ಟ ಎಲ್ಲಾ ಸಂಘ, ಸಮಾಜ ಮತ್ತು ಎಲ್ಲಾ ವ್ಯಕ್ತಿಗಳಿಗೂ ನನ್ನ ಅಭಿನಂದನೆಗಳನ್ನು ಅರ್ಪಿಸುತ್ತೇನೆ.

-ಚೆಟ್ಟಿಮಾಡ ಪ್ರಭಾ ಕಾರ್ಯಪ್ಪ, ದಿವಂಗತ: ನಿಡ್ಯಮಲೆ ಸೋಮಣ್ಣ. ಎಂ. ಪಿ. ಮತ್ತು ಎಂ. ಎಲ್. ಎ. ಅವರ ಮಗಳು, ಬೆಂಗಳೂರು.

ಕೆನೆ ಪದರ = ಮುಂದುವರಿದ, ಜಾತಿಯೊಳಗಡೆ ಅಭಿವೃದ್ಧಿ ಹೊಂದಿದ ಎಂದು ಅರ್ಥ.

ಮೇರ್ಕಜೆ ಚೇತನಾ ಬೋಜಪ್ಪಗೆ ಉನ್ನತ ಶ್ರೇಣಿ



ಕು॥ ಮೇರ್ಕಜೆ ಚೇತನಾ

ಈ ಬಾರಿಯ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಮೇರ್ಕಜೆ ಚೇತನಾ ಬೋಜಪ್ಪನವರು ಶೇ.93.12 (582) ಅಂಕಗಳನ್ನು ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ. ಮುತ್ತಾರ್ಮುಡಿ ಗ್ರಾಮದ ಮೇರ್ಕಜೆ ಬೋಜಪ್ಪ ಮತ್ತು ಭಾಗ್ಯಲಕ್ಷ್ಮಿ ದಂಪತಿಗಳ ಪುತ್ರಿಯಾಗಿರುವ ಈಕೆ ಕೇವಲ ಓದುಗಾರಿಕೆಯಲ್ಲಿ ಮಾತ್ರವಲ್ಲದೆ ರಸಪ್ರಶ್ನೆ, ಚಿತ್ರಕಲೆ, ನೃತ್ಯ ಮೊದಲಾದ ಸ್ಪರ್ಧೆಗಳಲ್ಲಿ ಭಾಗವಹಿಸಿ ಹಲವಾರು ಬಹುಮಾನಗಳನ್ನು ಗಳಿಸಿದ್ದಾಳೆ. ಮುಂದಿನ ಭವಿಷ್ಯದ ಬಗ್ಗೆ ಕೊಡಗು ಸಂಗಾತಿ ಪ್ರಶ್ನಿಸಿದಾಗ ಪಿ.ಯು.ಸಿ.ಯಲ್ಲಿ ಇನ್ನೂ ಹೆಚ್ಚಿನ ಸಾಧನೆ ಗೆಯ್ಯುವುದೇ ತನ್ನ ಮೊದಲ ಗುರಿ ಎನ್ನುವ ಈಕೆ, ಆ ಗುರಿಯನ್ನು ಈಡೇರಿಸುವ ಸಲುವಾಗಿ ಮಂಗಳೂರಿನ ಕೆನರಾ 'ಕಾಲೇಜನ್ನು' ತನ್ನ ಮುಂದಿನ ವಿದ್ಯಾಭ್ಯಾಸಕ್ಕೆ ಆರಿಸಿಕೊಂಡಿದ್ದಾಳೆ. ಚೇತನಾ ಇನ್ನಷ್ಟು ಅರಳಲೆಂಬುದೇ ಸಂಗಾತಿಯ ಹಾರೈಕೆಯಾಗಿದೆ.

- ಪಟ್ಟಡ ಶಿವಕುಮಾರ್

ರಾಜ್ಯಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಕಂಚಿನ ಪದಕ ಪಡೆದ ತೆಕ್ಕಡೆ ಪವಿತ್ ಜನಾರ್ಧನ



ತೆಕ್ಕಡೆ ಪವಿತ್

ಬೆಂಗಳೂರಿನ ಶ್ರೀಕಂಠೀರವ ಕ್ರೀಡಾಂಗಣದಲ್ಲಿ ನಡೆದ "ಟೇಕ್ವಾಂಡೊ" ಕರಾಟೆ ಸ್ಪರ್ಧೆಯಲ್ಲಿ ಸಾಂಬಾರ ಮಂಡಳಿಯಲ್ಲಿ ವ್ಯವಸ್ಥಾಪಕ ಮತ್ತು ಉಪನ್ಯಾಸಕರಾಗಿರುವ ತೆಕ್ಕಡೆ ಜನಾರ್ಧನ ಮತ್ತು ಗುಲಾಬಿ ದಂಪತಿಗಳ ಪುತ್ರನಾಗಿರುವ ಪವಿತ್ ರಾಜ್ಯದಲ್ಲಿಯೇ ತೃತೀಯ ಸ್ಥಾನ ಪಡೆದು ಕಂಚಿನ ಪದಕ ಪಡೆದಿದ್ದಾರೆ. ಕೊಡಗು ವಿದ್ಯಾಲಯದಲ್ಲಿ ಈತ ಐದನೆ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು ಈ ಕ್ಷೇತ್ರದಲ್ಲಿ ಉನ್ನತ ಸಾಧನೆ ಮಾಡುವ ಉದ್ದೇಶ ಹೊಂದಿರುವ ಇವನಿಗೆ ಉತ್ತಮ ಭವಿಷ್ಯವಿದೆ.

- ಸಂಗಾತಿ

ಮಾಜಿ ಸೈನಿಕರ ಕುಟುಂಬಗಳಿಗೆ ನೇತ್ರ ಚಿಕಿತ್ಸಾ ಶಿಬಿರ

ಮಾಜಿ ಸೈನಿಕರು ಅವರ ಪತ್ನಿಯರು ಮತ್ತು ಅವರನ್ನು ಅವಲಂಬಿಸಿರುವ ಮಕ್ಕಳಿಗೆ ಮಡಿಕೇರಿಯ ಜೇಡಿ ಸ್ಪೆಶಾಲಿಟಿ ಆಸ್ಪತ್ರೆಯಲ್ಲಿ ಸೆ. 7 ಮತ್ತು 8, ರಂದು ಬೆಂಗಳೂರಿನ ಭಾರತೀಯ ವಾಯುಪಡೆಯ ಕಮಾಂಡ್ ಆಸ್ಪತ್ರೆ ಆಶ್ರಯದಲ್ಲಿ ಉಚಿತ ನೇತ್ರ ಚಿಕಿತ್ಸಾ ಶಿಬಿರವನ್ನು ಆಯೋಜಿಸಲಾಗಿದೆ.

ಈ ಶಿಬಿರದಲ್ಲಿ ಕಣ್ಣು ತಪಾಸಣೆ ಔಷಧಿ ಮತ್ತು ಕನ್ನಡಕವನ್ನು ಉಚಿತವಾಗಿ ಒದಗಿಸಲಾಗುವುದು. ಕಣ್ಣಿನ ಶಸ್ತ್ರ ಚಿಕಿತ್ಸೆಯ ಅಗತ್ಯವಿದ್ದಲ್ಲಿ ಅಂತಹವರನ್ನು ಬೆಂಗಳೂರಿಗೆ ಬರ ಮಾಡಿಕೊಂಡು ಉಚಿತ ಚಿಕಿತ್ಸೆ ಹಾಗೂ ಕಣ್ಣಿನ ಲೆನ್ಸ್ ಅಳವಡಿಸಲಾಗುವುದು.

ಕಣ್ಣಿನ ವಿವಿಧ ತೊಂದರೆಗಳಿಂದ ನರಳುತ್ತಿರುವ ಮಾಜಿ ಸೈನಿಕರು ಅವರ ಪತ್ನಿಯರು ಮತ್ತು ಅವರ ಮಕ್ಕಳು ಸೈನ್ಯದ ಸೇವಾ ವಿವರಗಳೊಂದಿಗೆ ಹಾಜರಾಗಿ ಶಿಬಿರದ ಸೌಲಭ್ಯವನ್ನು ಪಡೆದುಕೊಳ್ಳುವಂತೆ ಮಡಿಕೇರಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.

- ಸಂಗಾತಿ

ಗೆಜೆಟೆಡ್ ಹುದ್ದೆಗೆ ಮುಂಬಡ್ತಿ

ಸಹಕಾರ ಇಲಾಖೆಯಲ್ಲಿ ಹಿರಿಯ ಲೆಕ್ಕ ಪರಿಶೋಧಕರಾಗಿರುವ ಶ್ರೀ. ಯು. ಎ. ಅಪ್ಪಾಜಿಯವರಿಗೆ ಗೆಜೆಟೆಡ್ ಶ್ರೇಣಿಗೆ ಬಡ್ತಿ ನೀಡಿ ಕೊಡಗು ಜಿಲ್ಲೆ ಮಡಿಕೇರಿಗೆ ಸಹಾಯಕ ನಿರ್ದೇಶಕರಾಗಿ ನೇಮಿಸಿ ಸರ್ಕಾರ ಆದೇಶ ಹೊರಡಿಸಿದೆ.

ಶ್ರೀಯುತರು ದಿವಂಗತ ಉದಿಯನ ಅಯ್ಯಣ್ಣ ಮತ್ತು ಗೌರಮ್ಮನವರ ಪುತ್ರರು.

- ವರದಿ: ಕುಂಭಗೌಡನ ಸೋಮಣ್ಣ, ಕುಶಾಲನಗರ

ದಿ॥ ಪಟ್ಟಡ ನಂಜುಂಡ



ಜನನ : 20-3-1913
ಮರಣ : 4-8-1997

5ನೇ ವರ್ಷದ ಚಿರಸ್ಮರಣೆ

ನೀವು ನಮ್ಮನ್ನಗಲಿ ಐದು ವರ್ಷಗಳು ಕಳೆದರು ನಿಮ್ಮ ನೆನಪುಗಳು ನೀವು ನೀಡಿದ ಮಾರ್ಗದರ್ಶನವು ನಮಗಳಿಗೆ ಅನುದಿನವು ಮರುಕಳಿಸಿ ದಾರಿದೀಪವಾಗಿದೆ. ನಿಮ್ಮ ಆತ್ಮಕ್ಕೆ ಆ ಪರಮಾತ್ಮ ವೆಂಕಟರಮಣನು ಸದಾ ಚಿರಶಾಂತಿಯನ್ನು ನೀಡಲೆಂದು ಪ್ರಾರ್ಥಿಸುವೆವು.

ಪತ್ನಿ: ಪಟ್ಟಡ ಸೀತಮ್ಮ, ಮಕ್ಕಳು, ಮರಿ ಮಕ್ಕಳು, ಸೊಸೆಯಂದಿರು
ಪ್ರಕಟಣೆ : ಪಟ್ಟಡ ಜಯರಾಮ್, ಸೊಸೆ : ಪೂವಮ್ಮ,
ಮಕ್ಕಳು : ದಿವ್ಯ, ಶಶಿಕಾಂತ್, ದೀಪಕ್, ಉಷಾ, ಮೈಸೂರು. Ph : 0821/303085

Reg. No. KA/SK/MYS-88 Registered : 10-01-96 TCI Kar. 09592

ಅರೆಗನ್ನಡ ಭಾಷಾ ಅಕಾಡೆಮಿ ಸ್ಥಾಪಿಸಲು ಆಗ್ರಹ

(ರಾಜ್ಯದ ಮುಖ್ಯಮಂತ್ರಿಯವರಿಗೆ ಪತ್ರ)

ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಯಲ್ಲಿ ಅರೆಗನ್ನಡ ಭಾಷೆಯ ಅಭಿವೃದ್ಧಿಗಾಗಿ, ಕರ್ನಾಟಕ ಸರಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಗೆ ಒಳಪಡಿಸಿ ಅರೆಗನ್ನಡ ಭಾಷಾ ಅಕಾಡೆಮಿ ಸ್ಥಾಪಿಸಬೇಕೆಂದು ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿಯು ಆಗ್ರಹಿಸಿ ರಾಜ್ಯದ ಮುಖ್ಯಮಂತ್ರಿ ಎಸ್. ಎಂ. ಕೃಷ್ಣ ಅವರಿಗೆ ಪತ್ರ ಬರೆದಿದೆ. ಈ ಬಗ್ಗೆ ಸಂಸ್ಥೆಯ ಅಧ್ಯಕ್ಷ ತುಂತಜೆ ಗಣೇಶ್ ಅವರು ಮುಖ್ಯಮಂತ್ರಿ ಅವರಿಗೆ ಬರೆದಿರುವ ಪತ್ರದ ವಿವರ ಈ ಕೆಳಗಿನಂತಿದೆ.

ಕೊಡಗು ಮತ್ತು ದಕ್ಷಿಣ ಕನ್ನಡ ಕನ್ನಡ ಜಿಲ್ಲೆಯು ಸುಮಾರು 4 ಲಕ್ಷ ಅರೆಗನ್ನಡ ಮಾತೃಭಾಷೆಯ ಜನ ಸಮೂಹವನ್ನು ಹೊಂದಿರುತ್ತದೆ. ಈ ಮಾತೃಭಾಷೆಯನ್ನಾಡುವ ಜನರು ಕೊಡಗು ಜಿಲ್ಲೆಯ ಮಡಿಕೇರಿ, ಸೋಮವಾರಪೇಟೆ, ವೀರಾಜಪೇಟೆ, ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಪುತ್ತೂರು, ಬೆಳ್ತಂಗಡಿ ಬಂಟ್ವಾಳ ತಾಲ್ಲೂಕುಗಳಲ್ಲಿ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ಹಾಗೂ ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಯಲ್ಲಿ ಪುರಾತನ ಕಾಲದಿಂದಲೂ ನೆಲೆಸಿರುತ್ತಾರೆ.

ಈ ಭಾಷಾ ಸಮುದಾಯ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಮತ್ತು ರಾಜಕೀಯವಾಗಿ ಹಿಂದುಳಿದಿದ್ದು, ಅರೆಗನ್ನಡ ಭಾಷೆಯ ಮತ್ತು ಅದಕ್ಕೆ ಸಂಬಂಧಿಸಿದ ಸಂಸ್ಕೃತಿಯ ಉಳಿವಿಗಾಗಿ ಸರಕಾರದ ಮಧ್ಯ ಪ್ರವೇಶದ ಅನಿವಾರ್ಯತೆ ಕಂಡು ಬಂದಿದೆ. ಅಲ್ಲದೆ, ಬಹು ಸಂಖ್ಯಾತ ಇತರ ಭಾಷೆ ಮತ್ತು ಸಂಸ್ಕೃತಿಗಳ ಸಂಘರ್ಷದಿಂದಾಗಿ ಈ ಭಾಷೆಯು ಅವನತಿಯತ್ತ ಸಾಗುತ್ತಿದೆ.

ಈ ಭಾಷಿಗರ ವಾಸ ಸ್ಥಾನವು ಹೆಚ್ಚಾಗಿ ಪಶ್ಚಿಮಘಟ್ಟ ಪ್ರದೇಶವೇ ಆಗಿರುವುದು ವಿಶೇಷವಾಗಿದೆ. ಆದ ಕಾರಣ ಈ ಭಾಷಿಗರ ಸಾರ್ವತ್ರಿಕ ಅಭಿವೃದ್ಧಿ ಸಾಧ್ಯವಾಗಿಲ್ಲ. ಈ ಅರೆಗನ್ನಡ ಭಾಷೆಯ ಮತ್ತು ಸಂಸ್ಕೃತಿಯ ಅಭಿವೃದ್ಧಿಗಾಗಿ ಈಗಾಗಲೇ ಕೊಡಗು ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿ 1997 ರಿಂದ ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ (ರಿ) ಎಂಬ ಹೆಸರಿನ ಸಂಸ್ಥೆ ಕಾರ್ಯ ನಿರ್ವಹಿಸುತ್ತಿದೆ. ಆದರೆ, ಆ ಅಕಾಡೆಮಿಯು ಆರ್ಥಿಕ ಮುಗ್ಗಟ್ಟನ್ನು ಹೊಂದಿರುವುದರಿಂದ ಭಾಷೆ ಮತ್ತು ಸಂಸ್ಕೃತಿಯನ್ನು ಅಭಿವೃದ್ಧಿ ಯತ್ತ ಕೊಂಡೊಯ್ಯಲು ಕಷ್ಟ ಸಾಧ್ಯವಾಗಿದೆ.

ಅದ್ದರಿಂದ ಘನ ಸರಕಾರವು ನಮ್ಮ ಈ ಕೋರಿಕೆಗೆ ಸ್ಪಂದಿಸಿ ರಾಜ್ಯ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವಾ[illegible]ಕಾಡೆಮಿಯನ್ನು ತಂದು ಅರೆಗನ್ನಡ ಭಾಷಾಭಿವೃದ್ಧಿ ಹಾಗೂ ಸಂಸ್ಕೃತಿಯ ಅಭಿವೃದ್ಧಿಗಾಗಿ ಅಕಾಡೆಮಿಗೆ [illegible] ಪುರಸ್ಕರಿಸಲು ಹಾಗೂ ಈಗಿರುವ ಅಕಾಡೆಮಿಗೆ ಸೂಕ್ತ ಅನುದಾನವನ್ನು ಸರಕಾರದಿಂದ ಬಿಡುಗಡೆ [illegible] ಕೋರುತ್ತೇವೆ.

ದಿನಾಂಕ 21-7-2002 ರಂದು ಮುತ್ತಾರ್ಮುಡಿಯಲ್ಲಿ ಜರುಗಿದ ಆಟಿ ತಿಂಗಳ ಕಂಬಳದಲ್ಲಿ ಕೆಸರಿನ ಹಗ್ಗ ಜಗ್ಗಾಟದಲ್ಲಿ ಗೌಡರು ಮತ್ತು ಗೌಡವತಿಯರು ಹಾಗೂ ಕೆಸರು ಓಟದಲ್ಲಿ ನಿರತರಾಗಿರುವ ಗೌಡ ಕಾಲೇಜು ಯುವಕರು.





Kodagu Sangathi Kannada Fortnightly Edited, Published, Printed by **Pattada Sheelamani, 1055c, Doddanna Buildings, Hunsur Road, Hinkal Post, Mysore-570017. ☎ : 0821/404290.** And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ☎ : 0821/431792.